ನಿಗರ ಜಾಗೆ
Feb 7-15, 1984

ಮರ ಅಪ್ಪಿಕೊಳ್ಳುವ ಚಳುವಳಿ– ಏಕೆ?

—ಪಾಂಡುರಂಗ ಹೆಗಡೆ, ಪರಿಸರತಜ್ಞ

"ಅರಣ್ಯ ಜಿಲ್ಲೆ" ಎಂದು ಖ್ಯಾತಿ ಪಡೆದಿರುವ ಉತ್ತರ ಕನ್ನಡದಲ್ಲಿ ಇಂದು ನೈಸರ್ಗಿಕ ಅರಣ್ಯ-ನಾಶವನ್ನು ತಡೆಯುವ ಸಲುವಾಗಿ ಮರ ಅಪ್ಪಿಕೊಳ್ಳುವ ಚಳುವಳಿ ಆರಂಭವಾಗಿದೆ. ಸಿರ್ಸಿ ತಾಲ್ಲೂಕಿನಲ್ಲಿ ಜನರು ಸರಕಾರದ ತಪ್ಪು ಅರಣ್ಯ ನೀತಿಯನ್ನು ಪ್ರತಿಭಟಿಸಿ ಮರವನ್ನು ಕಡಿಯುದಂತೆ. ಮರ ತಬ್ಬಿಕೊಳ್ಳುವ "ಅಪ್ಪಿಕೋ" ಆಂದೋಲನವನ್ನು ಸಫಲವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಯಾವುದೇ ತರಹದ ಹಿಂಸಾಚಾರಕ್ಕೆ ಅನುವು ಮಾಡಿಕೊಡದ ಈ ಅಹಿಂಸಾತ್ಮಕ ಚಳುವಳಿ ಉತ್ತರ ಪ್ರದೇಶದಲ್ಲಿ ಸಫಲವಾದ "ಚಿಪ್ಕೋ" ಆಂದೋಲನದಿಂದ ಸ್ಫೂರ್ತಿ ಪಡೆದಿದೆ.

ಈ ಜಿಲ್ಲೆಯಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಶೇಕಡಾ ೮೦ ರಷ್ಟು ಅರಣ್ಯವಿತ್ತು. ಇಂದು ಅದು ಕೇವಲ ಶೇಕಡಾ ೨೬ ಕ್ಕೆ ಇಳಿದಿರಬಹುದೆಂದು ಅಂದಾಜು ಮಾಡಲಾಗುತ್ತಿದೆ! ಈ ಕರಹದ ಗಂಭೀರವಾದ ನಾಶಕ್ಕೆ ಮುಖ್ಯ ಕಾರಣ ಸರಕಾರ ಇಲ್ಲಿಯವರೆಗೆ ನಡೆಸಿಕೊಂಡು ಬರುತ್ತಿರುವ ಅರಣ್ಯ ನೀತಿ. ವ್ಯಾಪಾರಿ ಮನೋಭಾವನೆಯಿಂದಾಗಿ ಕಾಡಿನಿಂದ ಅತೀ ಹೆಚ್ಚು ಆದಾಯ ಪಡೆಯುವ ಸಲುವಾಗಿ ಭೂವಿಜ್ಞಾನಿಯು ಕವಚವಾಗಿದ್ದ ಈ ಹಸಿರು ಕಾಡನ್ನು ನಾಶಮಾಡಲಾಗಿದೆ. ಇದರಲ್ಲಿ ಜನರೂ ಭಾಗವಹಿಸಿ—ಕಳ್ಳಸಾಗಾಣಿಕೆ, ಅತಿಕ್ರಮಣ ಮುಂತಾದ ರೀತಿಯಿಂದ ಅರಣ್ಯ ನಾಶವಾಗಲು ಸಹಕಾರವಿತ್ತಿದ್ದಾರೆ, ಇದಲ್ಲದೇ ದೊಡ್ಡ ಜಲವಿದ್ಯುತ್ ಯೋಜನೆಗಳು ಹಲವಾರು ಎಕರೆ ಕಾಡನ್ನು ನಾಶಮಾಡಿವೆ.

೧೯೭೬ ರ ಅರಣ್ಯ ಇಲಾಖೆಯ ವಾರ್ಷಿಕ ವರದಿಯ ಉಲ್ಲೇಖವಿರುವ ಈ ವಾಕ್ಯ ಬಹಳ ಸ್ವಾರಸ್ಯಕರವಾಗಿದೆ. "ನಮ್ಮ ಅರಣ್ಯದ ಮಿತಿಮೀರಿದ ಶೋಷಣೆಯಿಂದಾಗಿ ಇಂದು ವಿಶ್ವೇಶ್ವರಯ್ಯ ಕಬ್ಬಿಣ ಕಾರಖಾನೆಗೆ ನಾವು ಇದ್ದಿಲನ್ನು ಪೂರೈಸುವ ಸ್ಥಿತಿಯಲ್ಲಿಲ್ಲ" ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಅರಣ್ಯ ಇಲಾಖೆ ಸಹ ವಿವಿಧ ಕಾರಣಗಳಿಗಾಗಿ ಅರಣ್ಯದ ಶೋಷಣೆ ನಡೆಯುತ್ತಿರುವುದನ್ನು ಒಪ್ಪುತ್ತಿದೆ. ಆದರೆ ಇದನ್ನು ಅರಿತೂ ಸಹ ಅವರು ಈ ಶೋಷಣೆಯನ್ನು ಕಡಿಮೆ ಮಾಡಲು ಯಾವ ತರಹದ ಕಾರ್ಯವನ್ನೂ ಕೈಗೊಳ್ಳಲಿಲ್ಲ. ಇದಕ್ಕೆ ವಿರುದ್ಧವಾಗಿ ಕಾಡನ್ನು ನಾಶಮಾಡುವ ತಮ್ಮ ನೀತಿಯನ್ನು ಮತ್ತಷ್ಟು ಹೆಚ್ಚು ಮಾಡಿದ್ದು ಒಂದು ವಿಪರ್ಯಾಸ.

ಕಛೇರಿ : 27
ನಿವಾಸ : 127



ಶ್ರೀ ಗಜಾನನ ಟ್ರೇಡಿಂಗ್ ಕಂಪೆನಿ

ಹಾಲುಮಡ್ಡಿ ಮತ್ತು ಅರಣ್ಯ ಉತ್ಪನ್ನಗಳ ಗುತ್ತಿಗೆದಾರರು

ಮಾರ್ಕೇಟ್ ರಸ್ತೆ ಸಾಗರ

ಶ್ರೀ ಗಜಾನನ ರೈಸ್ ಮಿಲ್

ಸಾಗರ - ೫೭೭೪೦೧

ಸಹಕಾರಿ ರಂಗದ ಹಸಿರು
ಕ್ರಾಂತಿಯ ಸಾಧನೆಯಲ್ಲಿ ಸಾಗುತ್ತಿರುವ

ಕಲ್ಲುಮನೆ ಸೇವಾ ಸಹಕಾರ ಸಂಘ ಲಿ.

ಕಲ್ಲುಮನೆ (ಸಾಗರ - ಶಿವಮೊಗ್ಗ)

ಜೆ. ಭೀಮಣ್ಣ, ಜೆ.ಡಿ.ಸಿ.
ಕಾರ್ಯದರ್ಶಿ

ಬಿ. ಡಿ. ಕೃಷ್ಣಪ್ಪ, ಬೆಂಕಟವಳ್ಳಿ
ಅಧ್ಯಕ್ಷರು

ಶ್ರೇಯೋತರಂಗಳಾದ—

ಸಿ. ಸುಬ್ಬರಾವ್ ಎಂ. ಜಿ. ಚಂದ್ರಶೇಖರರಾವ್
ಜಿ. ರಾಮಕೃಷ್ಣ, ಹೆಚ್. ಕೆ. ಗುಂಡಪ್ಪ ನಾಗೇಂದ್ರ
ಭಟ್ಟರಂ ದೇ. ರಾಮಣ್ಣ ಎಸ್. ಶ್ರೀಧರರಾವ್
ಗಣಪತಿ ಭಟ್ಟರಂ

ಕಾರ್ಯಕಾರಿ ಮಂಡಳಿ ಸದಸ್ಯರು

ಶುಭಾಶಯಗಳೊಂದಿಗೆ

ಸಾಗರ ಪ್ರಾಂತ್ಯ ಅಡಿಕೆ ಬೆಳೆಗಾರರ ಸಂಘ (ರಿ.) ಸಾಗರ

ಅಡಿಕೆ ಬೆಳೆಗಾರರ ಹಾಗೂ ರೈತರ
ಅಭ್ಯುದಯಕ್ಕಾಗಿ ಶ್ರಮಿಸುತ್ತಿರುವ ಸಂಸ್ಥೆ

ನಮ್ಮಲ್ಲಿ ತಟ್ಟಿ ಬುಟ್ಟಿ, ಕಬ್ಬಿಣದ ವ್ಯವಸಾಯ ಉಪಕರಣಗಳು, ಕತ್ತಿದ ಉಪಕರಣ ಹಾಗೂ ಜೇನು ವ್ಯವಸಾಯೋಪಕರಣಗಳು, ಜೇನು ತುಪ್ಪ ಮುಂತಾದವುಗಳು ನಿಖರ ಬೆಲೆಯಲ್ಲಿ ದೊರೆಯುತ್ತವೆ ☐ ಭೇಟಿ ಕೊಡಿ

—ಅಧ್ಯಕ್ಷರು ಮತ್ತು ಸದಸ್ಯರು

ಅರಣ್ಯ ನಾಶದ ಪರಿಣಾಮ

ಸರಕಾರದ ಅರಣ್ಯ ಇಲಾಖೆಯ ನೀತಿಯಲ್ಲಿ ಸಂಪೂರ್ಣವಾಗಿ ಮರ ಕಡಿದು ಆ ಸ್ಥಳದಲ್ಲಿ ಕೃತಕವಾಗಿ, ಆರ್ಥಿಕ ಲಾಭಕ್ಕಾಗಿ ಸಾಗುವಾನಿ, ನೀಲಗಿರಿ ಬೆಳೆಯುವ ಕಾರ್ಯಕೈಗೊಳ್ಳಲಾಯಿತು. ನೈಸರ್ಗಿಕವಾದ ಕಾಡು ಕಡಿದ ವರ್ಷ, ಮರು ಮಳೆಗಾಲದಲ್ಲಿ ಭೂಮಿಯ ಮೇಲಿರುವ ಮೊದಲನೆಯ ಮಣ್ಣಿನ ಪದರು ಮಳೆಯ ನೀರಿನಿಂದ ಕೊಚ್ಚಿಕೊಂಡು ಹೋಗಿ ಕೇವಲ ಕಲ್ಲು-ಹರಳು ಮಾತ್ರ ಉಳಿದಿರುತ್ತದೆ. ಈ ಕವಚ ತೊಳೆದುಹೋದ ನಂತರ ಆ ಸ್ಥಳದಲ್ಲಿ ಯಾವ ತರಹದ ಸಸ್ಯವೂ ಬೆಳೆಯುವುದು ಕಷ್ಟವಾಗುತ್ತದೆ. ೧೨.೫೦೦ ಹೆಕ್ಟೇರ್ ಪ್ರದೇಶದಲ್ಲಿ ಈ ರೀತಿ ಸಂಪೂರ್ಣವಾಗಿ ನೈಸರ್ಗಿಕ ಅರಣ್ಯನಾಶ ಮಾಡಿ ಮಣ್ಣಿನ ಸವಕಳಿಯಿಂದಾಗುವ ಹಾನಿ ಪ್ರತಿ ವರ್ಷಕ್ಕೆ ೨೦ ಕೋಟಿ ರೂಪಾಯಿಗಳು ! ಉತ್ತರ ಕನ್ನಡದ ವರ್ಷದ ಅರಣ್ಯ ಆದಾಯ ಸಹ ೨೦ ಕೋಟಿ ರೂಪಾಯಿಗಳು. ಒಂದು ಇಂಚಿನ ಮಣ್ಣಿನ ಕವಚ ತಯಾರಿಸುವಾಗ ಬೇಕಾಗುವ ಸಮಯ ೩ ಸಾವಿರ ವರ್ಷಗಳು. ಆದನ್ನು ನಾವು ಅರಿಯದೇ ಒಂದೇ ವರ್ಷದಲ್ಲಿ ಆರ್ಥಿಕ ಲಾಭದ ಆಸೆಯಿಂದಾಗಿ ನಮ್ಮ ಬಂಡವಾಳವನ್ನೇ ಕಬಳಿಸುವ ಕಾರ್ಯದಲ್ಲಿ ತೊಡಗಿದ್ದೇವೆ. ಈ ಜಿಲ್ಲೆ ಆಗಲೇ ಬರಡಾಗಿ ಬಯಲುಸೀಮೆಯಾಗುವ ಚಿನ್ಹೆಗಳು ಕಾಣಿಸಿಗುತ್ತವೆ. ಒಂದು ನೂರಾ ವರ್ಷಗಳ ಹಿಂದೆ ಉಷ್ಣವಲಯದ ಸದಾ ಹಸಿರು ಕಾಡಿಗೆ ಪ್ರಸಿದ್ಧವಾದ ಈ ಜಿಲ್ಲೆಯಲ್ಲಿ ಅರಣ್ಯನಾಶದಿಂದಾಗಿ ಎಲೆ ಉದುರುವ (ಡಿಸೀಡಿಯಸ್ ಅರಣ್ಯ) ಅರಣ್ಯವಾಗಿ ಪರಿವರ್ತನೆ ಹೊಂದಿದೆ. ಇನ್ನು ಬಯಲುಸೀಮೆಯಾಗುವುದರಲ್ಲಿ ಸಂಶಯವಿಲ್ಲ.

ಕೃಷಿಪ್ರಧಾನವಾದ ಈ ಕ್ಷೇತ್ರದ ಪ್ರಮುಖ ಸಂಪತ್ತು ಮಣ್ಣು, ನೀರು ಮತ್ತು ಹಸಿರು ಗೊಬ್ಬರ. ಅರಣ್ಯವು ಈ ಮೂಲಭೂತ ಅವಶ್ಯಕತೆಗಳನ್ನು ತಯಾರಿಸುವ ಒಂದು ಜೀವಂತ ಕಾರ್ಖಾನೆ. ಆದರೆ ಇಂದು ನಾವು ಈ ಕಾರ್ಖಾನೆಯನ್ನೇ ನಾಶಮಾಡಿ, ನಮ್ಮ ಜೀವನಕ್ಕೆ ಆಧಾರವಾಗಿರುವ ಅರಣ್ಯವನ್ನು ಕೇವಲ ಆರ್ಥಿಕ ಲಾಭಕ್ಕೆಂದು ಬಳಸಿಕೊಳ್ಳುತ್ತಿರುವೆವು. ಇದರಿಂದಾಗಿ ಜಲಸ್ತರ ಕಡಿಮೆಯಾಗಿ, ನೀರಿನ ಸ್ರೋತಗಳು ಬಣಗಹತ್ತಿವೆ. ಭೂ ಸವಕಳಿ ಹೆಚ್ಚಾಗಿ ಭೂಮಿ ಬಂಜರಾಗುತ್ತಿದೆ. ಹಸಿರು ಗೊಬ್ಬರ, ದನಗಳಿಗೆ ಮೇವಿನ ಅಭಾವ, ವನ್ಯಜೀವಿಗಳ ಹೆಚ್ಚಾದ ಹಾವಳಿ ಮತ್ತು ಉರುವಲಿನ ಸಮಸ್ಯೆ ಎಲ್ಲೆಲ್ಲೂ ಕಾಣಿಸಿಗುತ್ತಿದೆ.

ಸಮಸ್ಯೆಗಳಿಗೆ ಪರಿಹಾರ

ಮೇಲೆ ವರ್ಣಿಸಿದ ವಿನಾಶಕಾರಿ ಪರಿಣಾಮಗಳನ್ನು ಅರಿತು, ಜನರು ಜಾಗೃತರಾಗಿ ಅರಣ್ಯ ಸಂರಕ್ಷಣೆಗಾಗಿ ತಮ್ಮ ಜೀವನವನ್ನೇ ತ್ಯಾಗಮಾಡುವ ಹೊಸ ಆಂದೋಲನವಾದ **"ಮರ ಅಪ್ಪಿಕೊಳ್ಳುವ"** ಅಹಿಂಸಾತ್ಮಕ ಚಳುವಳಿಗೆ ಜನ್ಮವಿತ್ತಿದ್ದಾರೆ. ನೈಸರ್ಗಿಕ ಸಮತೋಲನವನ್ನು ಕಾಪಾಡಿಕೊಂಡು ಬರಲು ಅರಣ್ಯ ಕ್ಷೇತ್ರದಲ್ಲಿ ಹೆಚ್ಚಳ ಅತೀ ಅವಶ್ಯ. ಇದು ಸಾಧ್ಯವಾಗಬೇಕಾದಲ್ಲಿ ವ್ಯಾಪಕವಾದ ಗಿಡ ನೆಡುವ ಕಾರ್ಯ ನಡೆಯುತ್ತಿದ್ದ ಹಾಗೆ ಸದ್ಯ ಉಳಿದಿರುವ ಅರಣ್ಯವನ್ನು ನಾಶಗೊಳಿಸದೇ ಕಾಪಾಡುವುದೂ ಅಷ್ಟೇ ಅಗತ್ಯವಾಗಿದೆ. ಈ ಅರಣ್ಯವನ್ನು ಕಾಪಾಡಿಕೊಂಡು ಮುಂದಿನ ವರ್ಷಗಳಲ್ಲಿ ಅರಣ್ಯ ಬೆಳೆಸುವ ಯೋಜನೆಯ ಸಮತೋಲನ ಅಗತ್ಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಕ್ಷೇತ್ರ ಶೇಕಡಾ ೭೬ ರಿಂದ ಶೂನ್ಯಕ್ಕೆ ಬಂದಾಗ ನಾವು ಉದ್ದಿಮೆಗಳಿಗೆ, ಆರ್ಥಿಕ ಲಾಭಕ್ಕಾಗಿ ಏನು ಮಾಡುತ್ತೇವೆ ? ಈ ಗಂಡಾಂತರಕಾರಿ ಸ್ಥಿತಿ ಒದಗಿ ಬರುವ ಮೊದಲು ನಾವು ಎಚ್ಚೆತ್ತು ಕ್ರಮಕೈಗೊಳ್ಳುವುದು ಅವಶ್ಯವಾಗಿವೆ. ಸದ್ಯ ಉಳಿದಿರುವ ಅರಣ್ಯ ಕ್ಷೇತ್ರವಲ್ಲಿನ ಹಸಿರು ಮರಗಳನ್ನು ಕಡಿಯುವುದನ್ನು ಕೂಡಲೇ ನಿಲ್ಲಿಸಬೇಕು. ಉರುವಲಿಗಾಗಿ ಬಿದ್ದ ಮತ್ತು ಒಣಗಿಸಿರುವ ಮರಗಳನ್ನು ಉಪಯೋಗಿಸಬೇಕು. ಇದರಿಂದ ಹಲವಾರು ಸಮಸ್ಯೆಗಳು

ಉದ್ಭವಿಸಬಹುದು. ಆದರೆ ಈ ಕ್ರಮವನ್ನು ಜಾರಿಗೊಳಿಸಿದೇ ನಾವು ಕಾಡು ನಾಶ ಮಾಡುವುದನ್ನು ಮುಂದುವರಿಸಿದರೆ ನಮ್ಮ ಮುಂದಿನ ಪೀಳಿಗೆಗೆ ನಾವು ಮರುಭೂಮಿಯನ್ನು ಬಿಟ್ಟು ಹೋಗಬೇಕಾಗುವುದು. ಮುಂದಿನ ಭವಿಷ್ಯದ ಚಿಂತೆಯಿಂದಾದರೂ ನಾವು ಇಂದು ಈ ಬಿಗಿ ಕ್ರಮ—ಹಸಿರು ಮರ ಕಡಿಯುವುದನ್ನು ನಿಲ್ಲಿಸುವುದು ಅತೀ ಅವಶ್ಯವಾಗಿದೆ.

ಚಳುವಳಿಯ ಉದ್ದೇಶ

ಚಳುವಳಿಯ ಮೂಲ ಉದ್ದೇಶ ಜೀವನಕ್ಕೆ ಆಧಾರವಾಗಿರುವ ಅರಣ್ಯದ ನಾಶವನ್ನು ತಡೆಯುವುದು. ಸದ್ಯ ಚಾಲ್ತಿಯಲ್ಲಿರುವ ಅರಣ್ಯ ನೀತಿಯು ಆರ್ಥಿಕ ಲಾಭವನ್ನೇ ಆಧಾರವಾಗಿಟ್ಟುಕೊಂಡು ನಡೆಯುತ್ತಿದೆ. ಈ ವ್ಯಾಪಾರೀ ನೀತಿ ಬದಲಾಗಿ ಅರಣ್ಯ ಸಂಪತ್ತು ವ್ಯಾಪಾರಕ್ಕೆ ಅಲ್ಲ, ಕೃಷಿಗೆ ಬೇಕಾಗುವ ಮಣ್ಣು, ನೀರು ಮತ್ತು ಗೊಬ್ಬರವನ್ನು ತಯಾರಿಸುವ ಮೂಲ ಬಂಡವಾಳ ಎಂಬ ಆಧಾರದ, ತಳಹದಿಯ ಮೇಲೆ ನೀತಿ ನಿಲ್ಲಬೇಕಾಗಿದೆ. ಮುನ್ನುಗುವ ಭವಿಷ್ಯತ್ತಿನ ದೃಷ್ಟಿಯಿಂದ ಇಂದು ನಡೆಯುತ್ತಿರುವ ಅರಣ್ಯ ಶೋಷಣೆಯ ನೀತಿ ಬದಲಾಗಬೇಕಾಗಿದೆ. ಮಾನವ ಮತ್ತು ಪ್ರಕೃತಿಯಲ್ಲಿ ಹೊಂದಾಣಿಕೆ ಅಗತ್ಯ. ಅವರಿಬ್ಬರಲ್ಲಿನ ಸಂಬಂಧವು ಶೋಷಣೆ ರಹಿತವಾಗಿ, ಸೌಹಾರ್ದದ, ಸಹಬಾಳ್ವೆಯ ತತ್ತ್ವದ ಮೇಲೆ ಆಧಾರವಾಗಿರಬೇಕು.

ಇದು ಎಲ್ಲರಿಗೂ ಅನ್ವಯಿಸುತ್ತದೆ—ಎಲ್ಲ ಪ್ರದೇಶಕ್ಕೂ ಅನ್ವಯಿಸುತ್ತದೆ. ನಮ್ಮ ಪ್ರಜ್ಞಾವಂತರು, ಕೃಷಿಕರು ಇಂದು ಎಲ್ಲಾ ಕಡೆಗಳಲ್ಲೂ ಅರಣ್ಯ ರಕ್ಷಣೆ ಕಾರ್ಯಕ್ಕೆ ಮುಂದಾಗಬೇಕು.

ಆದರೆ ಏನು ಆಗಿಯೇ ಬಿಟ್ಟದ್ದೀರಲ್ಲಾ.....!

ದೊಡ್ಡ ಸಭೆಯೊಂದು ನಡೆಯುತ್ತಿತ್ತು. ವಿವಿಧ ಕ್ಷೇತ್ರಗಳಲ್ಲಿನ ಪ್ರಸಿದ್ಧರು "ನನ್ನ ಬಾಲ್ಯದ ಕನಸುಗಳು" ಎಂಬ ವಿಷಯವಾಗಿ ಮಾತನಾಡುತ್ತಿದ್ದರು.

ನ್ಯಾಯವಾದಿಯು ಸರದಿ— "ನೋಡಿ ಮಿತ್ರರೇ ನನ್ನ ಬಾಲ್ಯದ ಆಸೆ ಕೇಳಿದರೆ ನಿಮಗೆ ಆಶ್ಚರ್ಯವೆನ್ನಿಸಬಹುದು. ಆಗ ನಾನು ದರೋಡೆಕೋರನಾಗಬೇಕೆಂದು ಬಯಸಿದ್ದೆ. ಆದರೆ....."

".....ಆದರೆ ಏನು ಆಗಿಯೇಬಿಟ್ಟಿದ್ದೀರಲ್ಲ" ಹಿಂದಿನ ಸಾಲಿನಿಂದ ಒಬ್ಬ ಕಿರುಚಿಕೊಂಡ.

—ಎಸ್. ಎಂ. ಶೆಟ್ಟಿ

ಕಾಳಿ ನದಿ ತಟದಲ್ಲಿ ಪಾದಯಾತ್ರೆ

ಹಿನ್ನಲೆ:

ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹರಿಯುವ ಮುಖ್ಯ ನದಿಗಳಲ್ಲೊಂದು ಕಾಳಿ. ದಟ್ಟವಾದ ಅಡವಿ ಮತ್ತು ಸದಾಹಸಿರಿನಿಂದ ತುಂಬಿರುವ ಅರಣ್ಯದ ಮಧ್ಯದಲ್ಲಿರುವ ಡಿಗ್ಗಿಯಲ್ಲಿ ಜೀವ ತಳೆಯುವ ಕಾಳಿ ಒಟ್ಟು ೧೮೪ ಕೀಲೋಮೀಟರ್ ಸಾಗಿ ಕಾರವಾರದ ಸಮೀಪ ಸಮುದ್ರ ಸೇರುತ್ತಾಳೆ. ಅರಣ್ಯ ಮಧ್ಯದಲ್ಲಿ ಸಾಗುವುದರಿಂದ ಗಿಡಮರಗಳ ಎಲೆ ಬಿದ್ದು ನೀರಿನ ಬಣ್ಣವನ್ನು ಕಪ್ಪಾಗಿರುವದರಿಂದ ಇದಕ್ಕೆ ಕಾಳಿ ಎಂಬ ಅನ್ವರ್ಥಕ ನಾಮವಿದೆ. ನದಿಯ ದಡದುದ್ದಕ್ಕೂ ಕಾಡಿನ ಮಧ್ಯೆ ಕುಣಬಿ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಕಾಳಿಗೆ ದುರ್ಗತಿ:

ಕಾಳಿ ನದಿ ದಂಡೆಯಲ್ಲಿ ಮ್ಯಾಂಗನೀಸ್ ಆದಿರಿನ ಗಣಿಗಾರಿಕೆ ಆರಂಭವಾಗುವುದರ ಜೊತೆಗೆ ಇಲ್ಲಿನ ಆರಣ್ಯ ಸಂಪತ್ತು ನಾಶವಾಗತೊಡಗಿತು. ಪರಿಸರ ಚಳುವಳಿಂದಾಗಿ ಗಣಿಗಾರಿಕೆ ನಿಂತರೂ ಕೂಡ ೧೯೮೩ ರಲ್ಲಿ ಸೂಪಾದಲ್ಲಿ ಕಾಳಿ ನದಿಗೆ ಮೊದಲನೆಯ ಆಣೆಕಟ್ಟು

ನಿರ್ಮಾಣಗೊಂಡಿತು. ಇದರಿಂದ ೨೦೦೦ ಹೆಕ್ಟೇರ್‌ಗೂ ಹೆಚ್ಚು ಉಷ್ಣವಲಯದ ಕಾಡು ನೀರುಪಾಲಾಯಿತು ಮತ್ತು ೩೨ ಹಳ್ಳಿಗಳೂ ಮುಳುಗಡೆಗೊಂಡವು. ನಂತರ ಕದ್ರಾ, ಕೊಡಸಳ್ಳಿ ಹೀಗೆ ಒಟ್ಟೂ ನಾಲ್ಕು ಆಣೆಕಟ್ಟುಗಳು ನಿರ್ಮಾಣಗೊಂಡು ಅರಣ್ಯ ನಾಶಕ್ಕೆ ಕಾರಣವಾದವು. ಇದಲ್ಲದೇ ಕಾಳಿ ನದಿಗೆ ಇನ್ನೂ ನಾಲ್ಕು ಆಣೆಕಟ್ಟು ನಿರ್ಮಿಸುವ ಯೋಜನೆಗಳು ಬರುತ್ತಲಿವೆ! ಗಣಿಗಾರಿಕೆ ಹಾಗೂ ಬೃಹತ್ ಆಣೆಕಟ್ಟುಗಳ ಹೊರತಾಗಿ ನದಿದಂಡೆಯಲ್ಲೆ ಇರುವ ದಾಂಡೇಲಿಯ ಕಾಗದ ಕಾರ್ಖಾನೆ ಮತ್ತು ಕೈಗಾ ಅಣು ವಿದ್ಯುದಾಗಾರಗಳಿಂದ ಮಲಿನ ನೀರು ಕಾಳಿಯನ್ನು ಸೇರಿ ನದಿಯನ್ನು ಕಲುಶಿತ ಗೊಳಿಸಿವೆ. ಜಲಚರಗಳಿಗೆ ಮತ್ತು ಮೀನುಗಾರಿಕೆಗೆ ಇದರಿಂದ ಭಾರಿ ತೊಂದರೆಯುಂಟಾಗಿದ್ದು ಈಗಾಗಲೇ ಹಲವಾರು ಜಾತಿಯ ಮೀನುಗಳು ವಿನಾಶಗೊಂಡಿವೆ.

ಕಾಳಿಯ ಸಮಸ್ಯೆಯನ್ನು ಅರಿಯಲು , ಈ ಸಮಸ್ಯೆಗಳತ್ತ ಹೆಚ್ಚಿನ ಗಮನ ಸೆಳೆಯಲು ಮತ್ತು ಸ್ಥಳೀಯರನ್ನು ಕೂಡ ಜಾಗೃತಿಗೊಳಿಸಲು ಫೆಬ್ರುವರಿ ೨ ರಿಂದ ೧೨ ರವರೆಗೆ ಪಾದಯಾತ್ರೆಯನ್ನು ಕೈಗೊಳ್ಳಲಾಗುವುದು.

ಈ ಪಾದ ಯಾತ್ರೆ ಸಮಯದಲ್ಲಿ ನಡೆಯುವ ಕಾರ್ಯಕ್ರಮಗಳು:-

★ ಹಳ್ಳಿಗಾಡಿನಲ್ಲಿ ಪ್ರಕೃತಿ ಪರಿಸರದ ಬಗ್ಗೆ ಚರ್ಚೆ, ವಿಚಾರ ವಿನಿಮಯ, ಅಭಿವೃದ್ಧಿ ಯೋಜನೆಯ ಅನುಷ್ಠಾನದಿಂದಾದ ಲಾಭ-ಹಾನಿಯ ಬಗ್ಗೆ ಚರ್ಚೆ.

★ ಸ್ಥಳೀಯ ಪರಿಸರ ಸಂಬಂಧಿ ವಿಷಯಗಳ ಬಗ್ಗೆ ಸ್ಥಿರ ಚಿತ್ರ ಪ್ರದರ್ಶನ.

★ ಕಾಳಿ ನದಿಯಂಚಿನಲ್ಲಿ ವಾಸಿಸುತ್ತಿರುವ ಜನರ ಜೀವನದಲ್ಲುಂಟಾದ ಬದಲಾವಣೆಗಳ ಬಗ್ಗೆ ಅಧ್ಯಯನ

★ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಯರಿಗೆ ಇಲ್ಲಿನ ಸಮಸ್ಯೆಗಳು ಮತ್ತು ಅರಣ್ಯದ ಕುರಿತು ಅರಿವು ಮೂಡಿಸಲು ಕಾರ್ಯಕ್ರಮಗಳು.

★ ಕಾಳಿ ನದಿಗುಂಟ ನೆಲ/ಜಲದ ಪರಿಸ್ಥಿತಿಯನ್ನು ಅವಲೋಕಿಸುವುದು.

★ ಗಣಿಗಾರಿಕೆ, ಜಲಮಾಲಿನ್ಯದ ಪರಿಣಾಮಗಳನ್ನು ಅಭ್ಯಸಿಸುವುದು.

ಯಾರ್ಯಾರು ಭಾಗವಹಿಸಲಿದ್ದಾರೆ?

ಸರ್ಕಾರಿ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಇಲಾಖೆ, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಕರ್ನಾಟಕ ವಿದ್ಯುಚ್ಛಕ್ತಿ ನಿಗಮ, ಸ್ವಯಂ ಸೇವಾ ಸಂಸ್ಥೆಗಳು, ಸ್ಥಳೀಯ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯತಗಳು, ಸಾಗರ ಜೀವಶಾಸ್ತ್ರ ವಿಭಾಗದವರು ಮತ್ತು ಸ್ಥಳೀಯ ಸಂಸ್ಥೆಗಳು.

ಅಭಿವೃದ್ಧಿ ಹೆಸರಿನಲ್ಲಿ ಒಂದು ನದಿ, ನದಿ ತೀರದ ಕಾಡು ಹೇಗೆ ನಾಶವಾಗುತ್ತಿದೆ, ಇದರಿಂದ ಜನಜೀವನದ ಮೇಲಾಗುವ ಪರಿಣಾಮಗಳೇನು ಎಂಬುದನ್ನು ಅರಿಯಲು ಈ ಪಾದಯಾತ್ರೆಯು ಒಂದು ಉತ್ತಮ ಅವಕಾಶವಾಗಿದೆ. ಇಪ್ಪತ್ತು ವರ್ಷಗಳ ಹಿಂದೆ (೧೯೮೩ ಫೆಬ್ರುವರಿಯಲ್ಲಿ) ಶ್ರೀ ಪಾಂಡುರಂಗ ಹೆಗಡೆ ಹಾಗೂ ಇತರರು ಇದೇ ಸ್ಥಳಗಳಲ್ಲಿ ಪಾದಯಾತ್ರೆ ನಡೆಸಿದ್ದು ಈಗಿನ ಪರಿಸ್ಥಿತಿಯನ್ನು ಅರಿಯಲು ಪುನಃ ಎರಡು ದಶಕದ ನಂತರ ಈ ಪಾದಯಾತ್ರೆ ಕೈಗೊಳ್ಳಲಾಗುತ್ತಿದೆ.

ಪಾದಯಾತ್ರೆಯ ಸಮಯದಲ್ಲಿ ಜನರ ಜೊತೆಗೂಡಿ ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.

- ಗಣಿಗಾರಿಕೆಯಿಂದ ಹಾನಿಗೆ ಒಳಗಾಗಿರುವ ಪ್ರದೇಶವನ್ನು ಹೇಗೆ ಸರಿಪಡಿಸುವುದು. ಇದರಲ್ಲಿ ಜನರಿಗೆ ಉದ್ಯೋಗ ಅವಕಾಶ ಒದಗಿಸಲು ಸಾಧ್ಯವೆ?
- ನಾವು ಎರಡು ದಶಕದ ಹಿಂದಿನಿಂದ ಪ್ರತಿಪಾದಿಸುತ್ತಿರುವ ಕಿರು ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಪಡೆಯುವ ಸಾಧ್ಯತೆಗಳನ್ನು ಅಭ್ಯಸಿಸುವುದು.
- ಸ್ಥಳೀಯವಾಗಿ ಸಿಗುವ ಅರಣ್ಯ ಉತ್ಪನ್ನಗಳ (ವಾಟೆ ಹುಳಿ, ಮುರುಗಲು, ಜೇನುತುಪ್ಪ, ಬಿದಿರು ಹಾಗೂ ಬೆತ್ತ ಮುಂತಾದವುಗಳು) ಬಳಕೆಯಲ್ಲಿ, ಅದರ ಸಂಸ್ಕರಣೆಯಲ್ಲಿ ಜನರಿಗೆ ತರಬೇತಿ ನೀಡಿ ಅವರ ಆರ್ಥಿಕ ಆದಾಯವನ್ನು ಹೆಚ್ಚಿಸುವುದು.
- ಗಿಡಮೂಲಿಕೆಗಳನ್ನು ಸಂರಕ್ಷಿಸಿ ಬೆಳೆಸುವುದರಲ್ಲಿ ನಿರುದ್ಯೋಗಿ ಯುವಕರನ್ನು ತೊಡಗಿಸುವುದು.
- ಕಾಳಿ ಕಣಿವೆಯಲ್ಲಿ ಮುಂಬರುವ ಅಭಿವೃದ್ಧಿ ಯೋಜನೆಗಳು ಜನರನ್ನು ಒಕ್ಕಲೆಬ್ಬಿಸದೆ ಅವರ ಪ್ರದೇಶದಲ್ಲಿಯ ನೈಸರ್ಗಿಕ ಸಂಪತ್ತಿನ ಸರಿಯಾದ ಬಳಕೆಯಾಗಿ ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡಬೇಕಾಗಿದೆ.
- ಕಾಳಿ ಕಣಿವೆಯಲ್ಲಿ ಪರಿಸರ ಸ್ನೇಹಿ ಅಭಿವೃದ್ಧಿಯ ಸಾಧ್ಯತೆಗಳ ಅಧ್ಯಯನಕ್ಕಾಗಿ ಒಂದು ತಾಂತ್ರಿಕ ಕೇಂದ್ರದ ಸ್ಥಾಪನೆ ಅವಶ್ಯವಾಗಿದೆ.

ಕಾಳಿ ನದಿಯನ್ನು ತನ್ಮೂಲಕ ಜಲಚರಗಳನ್ನು, ಅರಣ್ಯಾವಲಂಭಿ ಜನರ ಬದುಕನ್ನು ಹೇಗೆ ರಕ್ಷಿಸಬಹುದು? ಇದಕ್ಕೆ ನಾವೇನಾದರೂ ಮಾಡಲು ಸಾಧ್ಯವೇ? ಇವಕ್ಕೆ ಉತ್ತರ ತಿಳಿಯಲು ಬನ್ನಿ, ದಯವಿಟ್ಟು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಿ.

ಪರಿಸರ ಸಂರಕ್ಷಣಾ ಕೇಂದ್ರ,
ಬಸವರಾಜ ನಿಲಯ
ಚೌಕಿಮಠ, ಶಿರಸಿ.
ಉತ್ತರ ಕನ್ನಡ
ದೂರವಾಣಿ ಸಂಖ್ಯೆ: 425139



ಕಾಳಿ ದಡದಲ್ಲಿ ಪಾದಯಾತ್ರೆ

ಆಮಂತ್ರಣ ಪತ್ರಿಕೆ

ಸರಿಯಾಗಿ 20 ವರ್ಷಗಳ ಹಿಂದೆ ಕಾರವಾರದ ಕಾಳಿ ನದಿ ಮುಖಜ ದಿಂದ ಉಗಮದವರೆಗೆ ಪಾದಯಾತ್ರೆ ಮಾಡಲಾಗಿತ್ತು. ಈ ಎರಡು ದಶಕಗಳಲ್ಲಿ ಆದ ಪರಿವರ್ತನೆಯನ್ನು ಅಧ್ಯಯನ ಮಾಡಲು ಮರು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಈ ಪಾದಯಾತ್ರೆಯ ಉದ್ಘಾಟನಾ ಸಮಾರಂಭಕ್ಕೆ ಹಾರ್ದಿಕ ಆಮಂತ್ರಣ.

ಉದ್ಘಾಟನೆ : **ಶ್ರೀ ಸುಂದರಲಾಲ ಬಹುಗುಣ**
ಚಿಪ್ಕೋ ಚಳುವಳಿಯ ನೇತಾರರು

ಮುಖ್ಯ ಅತಿಥಿ : **ಶ್ರೀ ಡಿ. ಮಲ್ಲು**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಜಿಲ್ಲಾ ಪಂಚಾಯತ, ಉತ್ತರ ಕನ್ನಡ

ಅಧ್ಯಕ್ಷತೆ : **ಶ್ರೀ ಬಿ. ಕೆ. ದೀಕ್ಷಿತ**
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ.

ಸ್ಥಳ : ಕಾಳಿ ಸೇತುವೆಯ ಹತ್ತಿರ ಮಯೂರ ಪಾರ್ಕ್
ದಿನಾಂಕ : 2 ಫೆಬ್ರುವರಿ 2003 ರವಿವಾರ
ಸಮಯ : ಮುಂಜಾನೆ 8-00 ಘಂಟೆಗೆ

ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ
ಕಾರ್ಯಕ್ರಮವನ್ನು ಸಫಲಗೊಳಿಸಲು ಸಹಕಾರ ನೀಡಿ.

ಪರಿಸರ ಸಂರಕ್ಷಣಾ ಕೇಂದ್ರ
ಹಾಗೂ ವಿವಿಧ ಸಂಘ ಸಂಸ್ಥೆಗಳು, ಕಾರವಾರ.

Printed at: M/s Siddhivinayak Enterprises, KAJUBAG,KARWAR. Mobile : 9845226230

ಕಾಳಿ ನದಿ ತಟದಲ್ಲಿ ಪಾದಯಾತ್ರೆ

ಹಿನ್ನಲೆ :

ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹರಿಯುವ ನದಿಗಳಲ್ಲೊಂದು ಕಾಳಿ. ದಟ್ಟವಾದ ಅಡವಿ ಮತ್ತು ಸದಾ ಹಸಿರಿನಿಂದ ತುಂಬಿರುವ ಅರಣ್ಯದ ಮಧ್ಯದಲ್ಲಿರುವ ಕುಸಾವಲಿಯಲ್ಲಿ ಜೀವ ತಳೆಯುವ ಕಾಳಿ ಒಟ್ಟು ೧೮೪ ಕಿಲೋಮೀಟರ್ ಸಾಗಿ ಕಾರವಾರ ಸಮೀಪ ಸಮುದ್ರ ಸೇರುತ್ತಾಳೆ. ಅರಣ್ಯ ಮಧ್ಯದಲ್ಲಿ ಸಾಗುವದರಿಂದ ಗಿಡ ಮರಗಳ ಎಲೆ ಬಿದ್ದು ನೀರಿನ ಬಣ್ಣವನ್ನು ಕಪ್ಪಾಗಿಸಿರುವದರಿಂದ ಇದಕ್ಕೆ ಕಾಳಿ ಎಂಬ ಅನ್ವರ್ಥಕ ನಾಮವಿದೆ. ನದಿಯ ದಡದುದ್ದಕ್ಕೂ ಕಾಡಿನ ಮಧ್ಯೆ ವಿವಿಧ ಜನಾಂಗದ ಜನರು ವಾಸಿಸುತ್ತಿದ್ದಾರೆ.

ಕಾಳಿಗೆ ದುರ್ಗತಿ :

ಕಾಳಿ ನದಿ ದಂಡೆಯಲ್ಲಿ ಮ್ಯಾಂಗನೀಸ್ ಅದಿರಿನ ಗಣಿಗಾರಿಕೆ ಆರಂಭವಾಗುವದರ ಜೊತೆಗೆ ಇಲ್ಲಿನ ಅರಣ್ಯ ಸಂಪತ್ತು ನಾಶವಾಗತೊಡಗಿತು. ಪರಿಸರ ಚಳುವಳಿಯಿಂದಾಗಿ ಗಣಿಗಾರಿಕೆ ನಿಂತರೂ ಕೂಡ ೧೯೮೩ ರಲ್ಲಿ ಸೂಪಾದಲ್ಲಿ ಕಾಳಿ ನದಿಗೆ ಮೊದಲನೆಯ ಆಣೆಕಟ್ಟು ನಿರ್ಮಾಣಗೊಂಡಿತು. ಇದರಿಂದ ೨೦೦೦ ಹೆಕ್ಟೇರ್‌ಗೂ ಹೆಚ್ಚು ಪ್ರಮಾಣದ ಕಾಡು ನೀರುಪಾಲಾಯಿತು ಮತ್ತು ೩೨ ಹಳ್ಳಿಗಳೂ ಮುಳುಗಡೆಗೊಂಡವು. ನಂತರ ಕದ್ರಾ, ಕೊಡಸಳ್ಳಿ ಹೀಗೆ ಒಟ್ಟೂ ನಾಲ್ಕು ಆಣೆಕಟ್ಟುಗಳು ನಿರ್ಮಾಣಗೊಂಡು ಅರಣ್ಯ ನಾಶಕ್ಕೆ ಕಾರಣವಾದವು. ಇದಲ್ಲದೇ ಕಾಳಿ ನದಿಗೆ ಇನ್ನೂ ನಾಲ್ಕು ಆಣೆಕಟ್ಟು ನಿರ್ಮಿಸುವ ಯೋಜನೆಗಳು ಬರುತ್ತಲಿವೆ. ಗಣಿಗಾರಿಕೆ ಹಾಗೂ ಇನ್ನಿತರ ಬೃಹತ್ ಯೋಜನೆಗಳು ಬರುತ್ತಲಿವೆ! ಇವುಗಳಲ್ಲದೇ ನದಿದಂಡೆಯಲ್ಲೆ ಇರುವ ದಾಂಡೇಲಿಯ ಕಾಗದ ಕಾರ್ಖಾನೆ ಮತ್ತು ಕೈಗಾ ಅಣು ವಿದ್ಯುದಾಗಾರಗಳಿಂದ ಮಲಿನ ನೀರು ಕಾಳಿಯನ್ನು ಸೇರಿ ನದಿಯನ್ನು ಕಲುಶಿತಗೊಳಿಸಿವೆ. ಜಲಚರಗಳಿಗೆ ಮತ್ತು ಮೀನುಗಾರಿಕೆಗೆ ಇದರಿಂದ ಭಾರಿ ತೊಂದರೆಯುಂಟಾಗಿದ್ದು ಈಗಾಗಲೇ ಹಲವಾರು ಜಾತಿಯ ಮೀನುಗಳು ವಿನಾಶಗೊಂಡಿವೆ.

ಕಾಳಿಯ ಸಮಸ್ಯೆಯನ್ನು ಅರಿಯಲು, ಈ ಸಮಸ್ಯೆಗಳತ್ತ ಹೆಚ್ಚಿನ ಗಮನ ಸೆಳೆಯಲು ಮತ್ತು ಸ್ಥಳೀಯರನ್ನು ಕೂಡ ಜಾಗೃತಿಗೊಳಿಸಲು ಫೆಬ್ರುವರಿ ೨ ರಿಂದ ೧೨ - ೨೦೦೩ ರ ವರೆಗೆ ಪಾದಯಾತ್ರೆಯನ್ನು ಕೈಗೊಳ್ಳಲಾಗುವುದು.

ಪಾದ ಯಾತ್ರೆಯ ವಿವರ :

ದಿನಾಂಕ ಫೆಬ್ರುವರಿ ೨, ೨೦೦೩ ರಂದು ಕಾರವಾರದಲ್ಲಿ ಕಾಳಿ ನದಿಯ ದಡದಲ್ಲಿ ಪಾದಯಾತ್ರೆಯು ಆರಂಭಗೊಳ್ಳುವದು. ನಂತರ ಸದಾಶಿವಗಡ, ಹಣಕೋಣ, ಬಾಳ್ಳಿ, ಕದ್ರಾ, ಕೊಡಸಳ್ಳಿ, ಸೂಳಗೇರಿ, ಶಿವಪುರ, ಗುಂದ, ಪೋಟೋಳಿ, ದಾಂಡೇಲಿ, ಗಣೇಶಗುಡಿ, ಚಾಂದವಾಡಿ ಮಾರ್ಗವಾಗಿ ದಿನಾಂಕ ೧೨ ರಂದು ಕುಸಾವಲಿಯಲ್ಲಿ ಮುಕ್ತಾಯಗೊಳ್ಳಲಿದೆ.

ಈ ಪಾದ ಯಾತ್ರೆ ಸಮಯದಲ್ಲಿ ನಡೆಯುವ ಕಾರ್ಯಕ್ರಮಗಳು :

- ★ ಹಳ್ಳಿಗಾಡಿನಲ್ಲಿ ಪ್ರಕೃತಿ ಪರಿಸರದ ಬಗ್ಗೆ ಚರ್ಚೆ, ವಿಚಾರ ವಿನಮಯ, ಅಭಿವೃದ್ಧಿ ಯೋಜನೆಗಳ ಲಾಭ-ಹಾನಿಗಳ ಬಗ್ಗೆ ಚರ್ಚೆ.
- ★ ಕಾಳಿ ನದಿಯಂಚಿನಲ್ಲಿ ವಾಸಿಸುತ್ತಿರುವ ಜನರ ಜೀವನದಲ್ಲುಂಟಾದ ಬದಲಾವಣೆಗಳ ಬಗ್ಗೆ ಅಧ್ಯಯನ.
- ★ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇಲ್ಲಿನ ಸಮಸ್ಯೆಗಳು ಮತ್ತು ಅರಣ್ಯದ ಕುರಿತು ಅರಿವು ಮೂಡಿಸಲು ಕಾರ್ಯಕ್ರಮಗಳು.
- ★ ಕಾಳಿ ನದಿಗುಂಟ ನೆಲ/ಜಲದ ಪರಿಸ್ಥಿತಿಯನ್ನು ಅವಲೋಕಿಸುವುದು.
- ★ ಗಣಿಗಾರಿಕೆ, ಜಲಮಾಲಿನ್ಯದ ಪರಿಣಾಮಗಳನ್ನು ಅಭ್ಯಸಿಸುವುದು.

ಯಾರ್ಯಾರು ಭಾಗವಹಿಸಲಿದ್ದಾರೆ?

ಸರ್ಕಾರಿ ಅಧಿಕಾರಿಗಳು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಕರ್ನಾಟಕ ವಿದ್ಯುಚ್ಛಕ್ತಿ ನಿಗಮ, ಸ್ವಯಂ ಸೇವಾ ಸಂಸ್ಥೆಗಳು, ಸ್ಥಳೀಯ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯತಗಳು, ಕರ್ನಾಟಕ ವಿಶ್ವ ವಿದ್ಯಾಲಯದ ಸಾಗರ ಜೀವಶಾಸ್ತ್ರ ವಿಭಾಗದವರು ಮತ್ತು ಸ್ಥಳೀಯ ಸಂಸ್ಥೆಗಳು.

ಅಭಿವೃದ್ಧಿ ಹೆಸರಿನಲ್ಲಿ ಒಂದು ನದಿ, ನದಿ ತೀರದ ಕಾಡು ಹೇಗೆ ನಾಶವಾಗುತ್ತಿದೆ. ಇದರಿಂದ ಜನಜೀವನದ ಮೇಲಾಗುವ ಪರಿಣಾಮಗಳೇನು ಎಂಬುದನ್ನು ಅರಿಯಲು ಈ ಪಾದಯಾತ್ರೆಯು ಒಂದು ಉತ್ತಮ ಅವಕಾಶವಾಗಿದೆ. ಇಪ್ಪತ್ತು ವರ್ಷಗಳ ಹಿಂದೆ (೧೯೮೩ ಫೆಬ್ರುವರಿಯಲ್ಲಿ) ಶ್ರೀ ಪಾಂಡುರಂಗ ಹೆಗಡೆ ಹಾಗೂ ಇತರರು ಇದೇ ಸ್ಥಳಗಳಲ್ಲಿ ಪಾದಯಾತ್ರೆ ನಡೆಸಿದ್ದು ಈಗಿನ ಪರಿಸ್ಥಿತಿಯನ್ನು ಅರಿಯಲು ಪುನಃ ಎರಡು ದಶಕದ ನಂತರ ಈ ಪಾದಯಾತ್ರೆ ಕೈಗೊಳ್ಳಲಾಗುತ್ತಿದೆ.

ಪಾದಯಾತ್ರೆಯ ಸಮಯದಲ್ಲಿ ಜನರ ಜೊತೆಗೂಡಿ ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವದು.

★ ಗಣಿಗಾರಿಕೆಯಿಂದ ಹಾನಿಗೊಳಗಾಗಿರುವ ಪ್ರದೇಶವನ್ನು ಹೇಗೆ ಸರಿಪಡಿಸಬಹುದು? ಇದರಲ್ಲಿ ಜನರಿಗೆ ಉದ್ಯೋಗ ಅವಕಾಶ ಒದಗಿಸಲು ಸಾಧ್ಯವೇ?

★ ನಾವು ಎರಡು ದಶಕಗಳ ಹಿಂದಿನಿಂದ ಪ್ರತಿಪಾದಿಸುತ್ತಿರುವ ಕಿರು ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಪಡೆಯುವ ಸಾಧ್ಯತೆಗಳನ್ನು ಅಭ್ಯಸಿಸುವದು.

★ ಸ್ಥಳೀಯವಾಗಿ ಸಿಗುವ ಅರಣ್ಯ ಉತ್ಪನ್ನಗಳ (ವಾಟೆ ಹುಳಿ, ಮುರುಗಲು, ಜೇನುತುಪ್ಪ ಬಿದಿರು ಹಾಗೂ ಬೆತ್ತ ಮುಂತಾದವುಗಳು) ಬಳಕೆಯಲ್ಲಿ ಆದರ ಸಂಸ್ಕರಣೆಯಲ್ಲಿ ಜನರಿಗೆ ತರಬೇತಿ ನೀಡಿ ಅವರ ಆರ್ಥಿಕ ಆದಾಯವನ್ನು ಹೆಚ್ಚಿಸುವುದು.

★ ಗಿಡಮೂಲಿಕೆಗಳನ್ನು ಸಂರಕ್ಷಿಸಿ ಬೆಳೆಸುವುದರಲ್ಲಿ ನಿರುದ್ಯೋಗಿ ಯುವಕರನ್ನು ತೊಡಗಿಸುವುದು.

★ ಕಾಳಿ ಕಣಿವೆಯಲ್ಲಿ ಮುಂಬರುವ ಅಭಿವೃದ್ಧಿ ಯೋಜನೆಗಳು ಜನರನ್ನು ಒಕ್ಕಲೆಬ್ಬಿಸದೆ ಅವರ ಪ್ರವೇಶದಲ್ಲಿಯ ನೈಸರ್ಗಿಕ ಸಂಪತ್ತಿನ ಸರಿಯಾದ ಬಳಕೆಯಾಗಿ ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವ ಮಾರ್ಗೋಪಾಯಗಳು.

★ ಕಾಳಿ ಕಣಿವೆಯಲ್ಲಿ ಪರಿಸರ ಸ್ನೇಹಿ ಅಭಿವೃದ್ಧಿಯ ಸಾಧ್ಯತೆಗಳ ಅಧ್ಯಯನಕ್ಕಾಗಿ ಒಂದು ತಾಂತ್ರಿಕ ಕೇಂದ್ರದ ಸ್ಥಾಪನೆ.

ಕಾಳಿ ನದಿಯನ್ನು ತನ್ಮೂಲಕ ಜಲಚರಗಳನ್ನು, ಅರಣ್ಯಾವಲಂಬಿ ಜನರ ಬದುಕನ್ನು ಹೇಗೆ ರಕ್ಷಿಸಬಹುದು? ಇದಕ್ಕೆ ನಾವೇನಾದರೂ ಮಾಡಲು ಸಾಧ್ಯವೇ? ಇವಕ್ಕೆ ಉತ್ತರ ತಿಳಿಯಲು ಬನ್ನಿ, ದಯವಿಟ್ಟು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಿ.



ಪರಿಸರ ಸಂರಕ್ಷಣಾ ಕೇಂದ್ರ,
ಚೌಕಿಮಠ, ಶಿರಸಿ
ಉತ್ತರ ಕನ್ನಡ - 581401
ದೂರವಾಣಿ ಸಂಖ್ಯೆ : 425139

ಕಾರವಾರದಲ್ಲಿ ಸಂಪರ್ಕ : ಡಾ॥ Y. R. ಕುಲಕರ್ಣಿ ✆ : 265946

ಅಶೋಕ ಹಾಸ್ಯಗಾರ ✆ : 220794

ಕಾಳಿ ನದಿ ತಟದಲ್ಲಿ ಪಾದಯಾತ್ರೆ

ಹಿನ್ನಲೆ :

ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹರಿಯುವ ನದಿಗಳಲ್ಲೊಂದು ಕಾಳಿ. ದಟ್ಟವಾದ ಅಡವಿ ಮತ್ತು ಸದಾ ಹಸಿರಿನಿಂದ ತುಂಬಿರುವ ಅರಣ್ಯದ ಮಧ್ಯದಲ್ಲಿರುವ ಕುಸಾವಲಿಯಲ್ಲಿ ಜೀವ ತಳೆಯುವ ಕಾಳಿ ಒಟ್ಟು ೧೮೪ ಕಿಲೋಮೀಟರ್ ಸಾಗಿ ಕಾರವಾರ ಸಮೀಪ ಸಮುದ್ರ ಸೇರುತ್ತಾಳೆ. ಅರಣ್ಯ ಮಧ್ಯದಲ್ಲಿ ಸಾಗುವದರಿಂದ ಗಿಡ ಮರಗಳ ಎಲೆ ಬಿದ್ದು ನೀರಿನ ಬಣ್ಣವನ್ನು ಕಪ್ಪಾಗಿಸಿರುವದರಿಂದ ಇದಕ್ಕೆ ಕಾಳಿ ಎಂಬ ಅನ್ವರ್ಥಕ ನಾಮವಿದೆ. ನದಿಯ ದಡದುದ್ದಕ್ಕೂ ಕಾಡಿನ ಮಧ್ಯೆ ವಿವಿಧ ಜನಾಂಗದ ಜನರು ವಾಸಿಸುತ್ತಿದ್ದಾರೆ.

ಕಾಳಿಗೆ ದುರ್ಗತಿ :

ಕಾಳಿ ನದಿ ದಂಡೆಯಲ್ಲಿ ಮ್ಯಾಂಗನೀಸ್ ಅದಿರಿನ ಗಣಿಗಾರಿಕೆ ಆರಂಭವಾಗುವದರ ಜೊತೆಗೆ ಇಲ್ಲಿನ ಅರಣ್ಯ ಸಂಪತ್ತು ನಾಶವಾಗತೊಡಗಿತು. ಪರಿಸರ ಚಳುವಳಿಯಿಂದಾಗಿ ಗಣಿಗಾರಿಕೆ ನಿಂತರೂ ಕೂಡ ೧೯೮೩ ರಲ್ಲಿ ಸೂಪಾದಲ್ಲಿ ಕಾಳಿ ನದಿಗೆ ಮೊದಲನೆಯ ಆಣೆಕಟ್ಟು ನಿರ್ಮಾಣಗೊಂಡಿತು. ಇದರಿಂದ ೨೦೦೦ ಹೆಕ್ಟೇರ್‌ಗೂ ಹೆಚ್ಚು ಪ್ರಮಾಣದ ಕಾಡು ನೀರುಪಾಲಾಯಿತು ಮತ್ತು ೩೨ ಹಳ್ಳಿಗಳೂ ಮುಳುಗಡೆಗೊಂಡವು. ನಂತರ ಕದ್ರಾ, ಕೊಡಸಳ್ಳಿ ಹೀಗೆ ಒಟ್ಟೂ ನಾಲ್ಕು ಆಣೆಕಟ್ಟುಗಳು ನಿರ್ಮಾಣಗೊಂಡು ಅರಣ್ಯ ನಾಶಕ್ಕೆ ಕಾರಣವಾದವು. ಇದಲ್ಲದೇ ಕಾಳಿ ನದಿಗೆ ಇನ್ನೂ ನಾಲ್ಕು ಆಣೆಕಟ್ಟು ನಿರ್ಮಿಸುವ ಯೋಜನೆಗಳು ಬರುತ್ತಲಿವೆ. ಗಣಿಗಾರಿಕೆ ಹಾಗೂ ಇನ್ನಿತರ ಬೃಹತ್ ಯೋಜನೆಗಳು ಬರುತ್ತಲಿವೆ! ಇವುಗಳಲ್ಲದೇ ನದಿದಂಡೆಯಲ್ಲಿ ಇರುವ ದಾಂಡೇಲಿಯ ಕಾಗದ ಕಾರ್ಖಾನೆ ಮತ್ತು ಕೈಗಾ ಅಣು ವಿದ್ಯುದಾಗಾರಗಳಿಂದ ಮಲಿನ ನೀರು ಕಾಳಿಯನ್ನು ಸೇರಿ ನದಿಯನ್ನು ಕಲುಶಿತಗೊಳಿಸಿವೆ. ಜಲಚರಗಳಿಗೆ ಮತ್ತು ಮೀನುಗಾರಿಕೆಗೆ ಇದರಿಂದ ಭಾರಿ ತೊಂದರೆಯುಂಟಾಗಿದ್ದು ಈಗಾಗಲೇ ಹಲವಾರು ಜಾತಿಯ ಮೀನುಗಳು ವಿನಾಶಗೊಂಡಿವೆ.

ಕಾಳಿಯ ಸಮಸ್ಯೆಯನ್ನು ಅರಿಯಲು, ಈ ಸಮಸ್ಯೆಗಳತ್ತ ಹೆಚ್ಚಿನ ಗಮನ ಸೆಳೆಯಲು ಮತ್ತು ಸ್ಥಳೀಯರನ್ನು ಕೂಡ ಜಾಗೃತಿಗೊಳಿಸಲು ಫೆಬ್ರುವರಿ ೨ ರಿಂದ ೧೨ - ೨೦೦೩ ರ ವರೆಗೆ ಪಾದಯಾತ್ರೆಯನ್ನು ಕೈಗೊಳ್ಳಲಾಗುವುದು.

ಪಾದ ಯಾತ್ರೆಯ ವಿವರ :

ದಿನಾಂಕ ಫೆಬ್ರುವರಿ ೨, ೨೦೦೩ ರಂದು ಕಾರವಾರದಲ್ಲಿ ಕಾಳಿ ನದಿಯ ದಡದಲ್ಲಿ ಪಾದಯಾತ್ರೆಯು ಆರಂಭಗೊಳ್ಳುವದು. ನಂತರ ಸದಾಶಿವಗಡ, ಹಣಕೋಣ, ಬಾಳ್ಳಿ, ಕದ್ರಾ, ಕೊಡಸಳ್ಳಿ, ಸೂಳಗೇರಿ, ಶಿವಪುರ, ಗುಂದ, ಪೋಟೋಳಿ, ದಾಂಡೇಲಿ, ಗಣೇಶಗುಡಿ, ಚಾಂದವಾಡಿ ಮಾರ್ಗವಾಗಿ ದಿನಾಂಕ ೧೨ ರಂದು ಕುಸಾವಲಿಯಲ್ಲಿ ಮುಕ್ತಾಯಗೊಳ್ಳಲಿದೆ.

ಈ ಪಾದ ಯಾತ್ರೆ ಸಮಯದಲ್ಲಿ ನಡೆಯುವ ಕಾರ್ಯಕ್ರಮಗಳು :

- ★ ಹಳ್ಳಿಗಾಡಿನಲ್ಲಿ ಪ್ರಕೃತಿ ಪರಿಸರದ ಬಗ್ಗೆ ಚರ್ಚೆ, ವಿಚಾರ ವಿನಮಯ, ಅಭಿವೃದ್ಧಿ ಯೋಜನೆಗಳ ಲಾಭ-ಹಾನಿಗಳ ಬಗ್ಗೆ ಚರ್ಚೆ.
- ★ ಕಾಳಿ ನದಿಯಂಚಿನಲ್ಲಿ ವಾಸಿಸುತ್ತಿರುವ ಜನರ ಜೀವನದಲ್ಲುಂಟಾದ ಬದಲಾವಣೆಗಳ ಬಗ್ಗೆ ಅಧ್ಯಯನ.
- ★ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇಲ್ಲಿನ ಸಮಸ್ಯೆಗಳು ಮತ್ತು ಅರಣ್ಯದ ಕುರಿತು ಅರಿವು ಮೂಡಿಸಲು ಕಾರ್ಯಕ್ರಮಗಳು.
- ★ ಕಾಳಿ ನದಿಗುಂಟ ನೆಲ/ಜಲದ ಪರಿಸ್ಥಿತಿಯನ್ನು ಅವಲೋಕಿಸುವುದು.
- ★ ಗಣಿಗಾರಿಕೆ, ಜಲಮಾಲಿನ್ಯದ ಪರಿಣಾಮಗಳನ್ನು ಅಭ್ಯಸಿಸುವುದು.

ಯಾರ್ಯಾರು ಭಾಗವಹಿಸಲಿದ್ದಾರೆ?

ಸರ್ಕಾರಿ ಅಧಿಕಾರಿಗಳು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಕರ್ನಾಟಕ ವಿದ್ಯುಚ್ಛಕ್ತಿ ನಿಗಮ, ಸ್ವಯಂ ಸೇವಾ ಸಂಸ್ಥೆಗಳು, ಸ್ಥಳೀಯ ಸಂಘ ಸಂಸ್ಥೆಗಳು, ಗ್ರಾಮ ಪಂಚಾಯತಗಳು, ಕರ್ನಾಟಕ ವಿಶ್ವ ವಿದ್ಯಾಲಯದ ಸಾಗರ ಜೀವಶಾಸ್ತ್ರ ವಿಭಾಗದವರು ಮತ್ತು ಸ್ಥಳೀಯ ಸಂಸ್ಥೆಗಳು.

ಅಭಿವೃದ್ಧಿ ಹೆಸರಿನಲ್ಲಿ ಒಂದು ನದಿ, ನದಿ ತೀರದ ಕಾಡು ಹೇಗೆ ನಾಶವಾಗುತ್ತಿದೆ. ಇದರಿಂದ ಜನಜೀವನದ ಮೇಲಾಗುವ ಪರಿಣಾಮಗಳೇನು ಎಂಬುದನ್ನು ಅರಿಯಲು ಈ ಪಾದಯಾತ್ರೆಯು ಒಂದು ಉತ್ತಮ ಅವಕಾಶವಾಗಿದೆ. ಇಪ್ಪತ್ತು ವರ್ಷಗಳ ಹಿಂದೆ (೧೯೮೩ ಫೆಬ್ರುವರಿಯಲ್ಲಿ) ಶ್ರೀ ಪಾಂಡುರಂಗ ಹೆಗಡೆ ಹಾಗೂ ಇತರರು ಇದೇ ಸ್ಥಳಗಳಲ್ಲಿ ಪಾದಯಾತ್ರೆ ನಡೆಸಿದ್ದು ಈಗಿನ ಪರಿಸ್ಥಿತಿಯನ್ನು ಅರಿಯಲು ಪುನಃ ಎರಡು ದಶಕದ ನಂತರ ಈ ಪಾದಯಾತ್ರೆ ಕೈಗೊಳ್ಳಲಾಗುತ್ತಿದೆ.

ಪಾದಯಾತ್ರೆಯ ಸಮಯದಲ್ಲಿ ಜನರ ಜೊತೆಗೂಡಿ ಈ ಕೆಳಗಿನ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸುವದು.

★ ಗಣಿಗಾರಿಕೆಯಿಂದ ಹಾನಿಗೊಳಗಾಗಿರುವ ಪ್ರದೇಶವನ್ನು ಹೇಗೆ ಸರಿಪಡಿಸಬಹುದು? ಇದರಲ್ಲಿ ಜನರಿಗೆ ಉದ್ಯೋಗ ಅವಕಾಶ ಒದಗಿಸಲು ಸಾಧ್ಯವೇ?

★ ನಾವು ಎರಡು ದಶಕಗಳ ಹಿಂದಿನಿಂದ ಪ್ರತಿಪಾದಿಸುತ್ತಿರುವ ಕಿರು ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಪಡೆಯುವ ಸಾಧ್ಯತೆಗಳನ್ನು ಅಭ್ಯಸಿಸುವದು.

★ ಸ್ಥಳೀಯವಾಗಿ ಸಿಗುವ ಅರಣ್ಯ ಉತ್ಪನ್ನಗಳ (ವಾಟೆ ಹುಳಿ, ಮುರುಗಲು, ಜೇನುತುಪ್ಪ, ಬಿದಿರು ಹಾಗೂ ಬೆತ್ತ ಮುಂತಾದವುಗಳು) ಬಳಕೆಯಲ್ಲಿ, ಅದರ ಸಂಸ್ಕರಣೆಯಲ್ಲಿ ಜನರಿಗೆ ತರಬೇತಿ ನೀಡಿ ಅವರ ಆರ್ಥಿಕ ಆದಾಯವನ್ನು ಹೆಚ್ಚಿಸುವುದು.

★ ಗಿಡಮೂಲಿಕೆಗಳನ್ನು ಸಂರಕ್ಷಿಸಿ ಬೆಳೆಸುವುದರಲ್ಲಿ ನಿರುದ್ಯೋಗಿ ಯುವಕರನ್ನು ತೊಡಗಿಸುವುದು.

★ ಕಾಳಿ ಕಣಿವೆಯಲ್ಲಿ ಮುಂಬರುವ ಅಭಿವೃದ್ಧಿ ಯೋಜನೆಗಳು ಜನರನ್ನು ಒಕ್ಕಲೆಬ್ಬಿಸದೆ ಅವರ ಪ್ರವೇಶದಲ್ಲಿಯ ನೈಸರ್ಗಿಕ ಸಂಪತ್ತಿನ ಸರಿಯಾದ ಬಳಕೆಯಾಗಿ ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವ ಮಾರ್ಗೋಪಾಯಗಳು.

★ ಕಾಳಿ ಕಣಿವೆಯಲ್ಲಿ ಪರಿಸರ ಸ್ನೇಹಿ ಅಭಿವೃದ್ಧಿಯ ಸಾಧ್ಯತೆಗಳ ಅಧ್ಯಯನಕ್ಕಾಗಿ ಒಂದು ತಾಂತ್ರಿಕ ಕೇಂದ್ರದ ಸ್ಥಾಪನೆ.

ಕಾಳಿ ನದಿಯನ್ನು ತನ್ಮೂಲಕ ಜಲಚರಗಳನ್ನು, ಅರಣ್ಯಾವಲಂಬಿ ಜನರ ಬದುಕನ್ನು ಹೇಗೆ ರಕ್ಷಿಸಬಹುದು? ಇದಕ್ಕೆ ನಾವೇನಾದರೂ ಮಾಡಲು ಸಾಧ್ಯವೇ? ಇವಕ್ಕೆ ಉತ್ತರ ತಿಳಿಯಲು ಬನ್ನಿ, ದಯವಿಟ್ಟು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಿ.



ಪರಿಸರ ಸಂರಕ್ಷಣಾ ಕೇಂದ್ರ,
ಚೌಕಿಮಠ, ಶಿರಸಿ
ಉತ್ತರ ಕನ್ನಡ - 581401
ದೂರವಾಣಿ ಸಂಖ್ಯೆ : 425139

ಕಾರವಾರದಲ್ಲಿ ಸಂಪರ್ಕ : ಡಾ॥ Y. R. ಕುಲಕರ್ಣಿ ✆ : 265946

ಅಶೋಕ ಹಾಸ್ಯಗಾರ ✆ : 220794

Kali – A Dying River

6 MAJOR DAMS, A NUCLEAR POWER PLANT, PAPER MILL AND NOW ANOTHER DAM?

JOIN THE KALI BACHAO ANDOLAN (Save Kali River Movement)
AND HELP SAVE WHAT LITTLE IS LEFT OF THE KALI RIVER



The 184 kms. long Kali River in the Uttara Kannada district of the Western Ghats region in Karnataka is under severe threat. It has 6 major hydroelectric dams, the controversial Kaiga Nuclear Power Station (the only nuclear plant in a forest in the World), and now, there is a serious attempt at building a 7th dam on the Kali River, near Dandeli, by Murudeshwar Power Corporation Limited (MPCL). The river is also being polluted by the Dandeli Paper Mills which releases its untreated effluents directly into the river. In addition to damming and pollution, there is also the threat of further illegal sand mining that is continuing on a rampant scale in the Supa Dam area, resulting in serious disturbances to the river's ecology.

Facts

Due to the proposed dam by MPCL, the last stretch of the Kali that is flowing freely will now be lost for posterity. The dam will generate only 18 MW of electricity but at the cost of submerging 210 ha of forests along the Kali. Over 32,000 acres of forests have already been submerged in Uttara Kannada to build the six hydroelectric dams that generate over 1200 MW of electricity. Construction of this new dam is also a significant violation of the 19th May 1987 Government of Karnataka order (No. FFD 242 FGL 83) that no further projects involving diversion of forest land for other uses will be undertaken on Kali River or its tributaries. The latest Supreme Court decisions have upheld the spirit of this order.

Legally this project has to be abandoned: the proponent along with its consultants are guilty of presenting two fraudulent Environment Impact Assessments (EIAs), one by Ernst and Young, and thereafter by Tata Energy Research Institute (TERI). Environment Support Group and Parisara Samrakshana Kendra exposed both during 2000, and as per the EIA Notification, this is definitely a case fit for rejection. Based on this expose, the DC of Uttara Kannada district has recommended that the project not be allowed. The District Forest Officer has also found that the claims of MPCL that there are no forests in the submergence area are false, for this area constitutes an assemblage of moist deciduous and evergreen forests, supporting a range of wildlife, including the occasional tiger. Yet there is very high pressure to build this dam.

In addition to being indiscriminately dammed, the Kali River is being polluted by the Dandeli Paper Mills, which throws out large volumes of untreated effluents into the river. For the communities that depend on this river, adverse impact of the accumulated pollutants has been tremendous. Losses in agriculture, dairy farming and fisheries are a common tale here, and cattle deaths are regularly reported. Farmers in direct contact with the water suffer from a variety of skin diseases caused due to pollution of the river. Very little is known of the impact on wildlife. The concerned regulatory agency, the Karnataka Pollution Control Board has done very little to contain the damage, thereby allowing the mills a free run on its polluting spree. Only recently, due to pressure from local communities under the banner of Kali Bachao Andolan, has there been some response; with the local Assistant Commissioner initiating criminal proceedings against the company. The demand is not a closure of the Dandeli Paper Mills. Rather, it is to get the mill to clean up its operations for the benefit of all - including the employees of the mill.

The people of the region, in order to end this misery, are working to build awareness on the threats to the Kali River and save it. Parisara Samrakshana Kendra (PSK), along with several local community organizations and tribal villages has formed the Kali Bachao Andolan (KBA). Panduranga Hegde, leading the KBA, and several others conducted a Padayatra (an awareness-building and protest walk along the entire course of the river) in February this year. Sunderlal Bahuguna, leader of the Chipko Andolan, launched this Padayatra. There has been overwhelming response from local communities to this effort. Environment Support Group (ESG), Bangalore, is an active support organization involved in the KBA.



Appeal to the Chief Minister of Karnataka:

We are enclosing a sample letter addressed to the Chief Minister of Karnataka, Mr. S.M.Krishna. We encourage you to endorse this letter by mailing the Chief Minister (and/or emailing the Chief Minister and marking a copy to the Union Minister for Environment and Forests, Mr. T.R.Baalu, and to ESG). Do encourage your friends and associates to sign and send many more letters.

Contribution:

There are many expenses we incur in organizing these efforts. We rely on your donations to cover part of the cost of this effort. Please do donate generously in support of the Kali Bachao Andolan. All financial contributions (Cheque/ DD/MO/Cash) should be in favour of Environment Support Group, and should be sent to Environment Support Group indicating that the contribution is for Kali Bachao Andolan. All monetary contributions benefit from income tax exemptions under Sec 80G of the Income Tax Act.

Your voice in support of the Kali Bachao Andolan will go a long way in supporting the cause of this river.

An appeal to save Kali River for posterity

To
Mr. S.M.Krishna,
Chief Minister of Karnataka,
Vidhana Soudha
Bangalore 560001 INDIA
Email: cm@kar.nic.in <mailto:cm@kar.nic.in>

Honourable Chief Minister,

We appeal to you to address the concerns raised by the Kali Bachao Andolan (KBA) formed by several local community organizations and tribal villages to highlight severe threats to the Kali River and protect it for posterity.

We appeal that you should take the initiative in ensuring that the Kali is saved for posterity.

Please ensure that:
a) No more dams will be allowed on the Kali.
b) The serious pollution of the Kali from the Dandeli Paper Mills and other sources is ended immediately.
c) Illegal sand mining on the Banks of Kali and its tributaries is stopped.

We support the aspirations of the people of Uttara Kannada who want the Kali flowing and alive with life. Not dammed, polluted and dead.

Sincerely,

(Name)

(Affiliation)

(Address)

(Email ID, if any)

Email the Chief Minister
smkrishna@bangaloreit.com
cmkrishna@bangaloreit.com

Environment Support Group
S-3, Rajashree Apartments,
18/57, 1st Main Road, S.R.K.Gardens,
Jayanagar, Bannerghatta Road
Bangalore 560 041 INDIA
Telefax: 91-80-6341977/6531339/6534364
Email: esg@bgl.vsnl.net.in

Parisara Samrakshana Kendra
Hulemalgi Building, Chowkimath,
Sirsi (Uttara Kannada Dt.)
Karnataka 581401
Tel: 91-8384 425139/425039
Fax: 91-4435450/ 427839
Email:appiko@sancharnet

ಕಾಳಿ ನದಿಯನ್ನು ಸಂರಕ್ಷಿಸಲು ಮನವಿ

ಗೆ,

ಮಾನ್ಯ ಶ್ರೀ ಎಸ್.ಎಂ. ಕೃಷ್ಣ
ಮುಖ್ಯ ಮಂತ್ರಿಗಳು

ವಿಧಾನ ಸೌಧ,
ಬೆಂಗಳೂರು – 560 001, ಇಂಡಿಯಾ
ಈಮೇಲ್ : cm@kar.nic.in.

ಮಾನ್ಯ ಮುಖ್ಯ ಮಂತ್ರಿಗಳೇ,

ಕಾಳಿ ಕಣಿವೆಯ ಜನಾಂಗ ಹಾಗೂ ಆದಿವಾಸಿಗಳ ಬೆಂಬಲದಲ್ಲಿ ನಡೆಯುತ್ತಿರುವ KBAಯ ಕಾಳಿ ನದಿಯ ಬಗ್ಗೆ ಕಾಳಜಿ ಹಾಗೂ ಅದನ್ನು ಸಂರಕ್ಷಿಸುವ ಉದ್ದೇಶವನ್ನು ಸಂಬೋಧಿಸ ಬೇಕಾಗಿ ವಿನಂತಿ.

ಮುಂದಿನ ಜನಾಂಗಗಳಿಗೆ ಕಾಳಿ ನದಿಯನ್ನು ಸಂರಕ್ಷಿಸುವುದಕ್ಕಾಗಿ ಈ ಕೆಳಕಂಡ ಅಂಶಗಳನ್ನು ಗಮನಿಸಬೇಕಾಗಿ ವಿನಂತಿ –

1) ಕಾಳಿ ನದಿಯ ಮೇಲೆ ಯಾವ ಜಲವಿದ್ಯುತ್ ಆಣೆಕಟ್ಟನ್ನು ನಿರ್ಮಿಸಲು ಅನುಮತಿ ನೀಡಬಾರದು.

2) ಕಾಗದ ಕಾರ್ಖಾನೆಯ ವತಿಯಿಂದ ನದಿ ಮಾಲಿನ್ಯವನ್ನು ತಕ್ಷಣ ತಡೆಗಟ್ಟುವುದು.

3) ಕಾಳಿ ನದಿ ಮತ್ತು ಅದರ ಉಪನದಿಗಳ ದಂಡೆಯಲ್ಲಿ ಆಕ್ರಮ ಮರಳು ಸಾಗಣೆಯನ್ನು ತಡೆಗಟ್ಟುವುದು.

ಜನಕ್ಕೆ ಜೀವ ಕೊಡುವ ಜೀವ ನದಿಯಾದ ಕಾಳಿ ನದಿಯನ್ನು ಉಳಿಸಲು ಉತ್ತರ ಕನ್ನಡ ಜಿಲ್ಲೆಯ ಜನರಿಗೆ ಉತ್ತೇಜಿಸುತ್ತೇವೆ.

ಒಂದು ನದಿ ಎಷ್ಟು ಆಘಾತವನ್ನು ಸಹಿಸುವುದು ?

ತಮ್ಮ ವಿಧೇಯ

ಹೆಸರು

ವಿಳಾಸ

ದೂರವಾಣಿ :

ಈಮೇಲ್ :

ಪ್ರತಿ :

ಕಾಳಿ ನದಿಯನ್ನು ಸಂರಕ್ಷಿಸಿ

6 ಆಣೆಕಟ್ಟು, 1 ಅಣು ಶಕ್ತಿ ಸ್ಥಾವರ, ಕಾಗದ ಕಾರ್ಖಾನೆ – ಈಗ ಮತ್ತೊಂದು ಆಣೆಕಟ್ಟೇ?
ಕಾಳಿ ಬಚಾವೋ ಆಂದೋಲನವನ್ನು (**KBA**) ಸೇರಿ ಅಳಿದುಳಿದ ಕಾಳಿ ನದಿಯನ್ನು ರಕ್ಷಿಸಿ.



ಉತ್ತರ ಕನ್ನಡದ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ 184 ಕಿ.ಮಿ. ಉದ್ದ ಸಾಗುವ ಕಾಳಿ ನದಿ ಈಗ ನಶಿಸಿ ಹೋಗುತ್ತಿದೆ. 6 ಜಲ ವಿದ್ಯುತ್ ಆಣೆಕಟ್ಟುಗಳಲ್ಲದೆ ಪ್ರಪಂಚದ ಏಕೈಕ ಅರಣ್ಯ ಪ್ರದೇಶದಲ್ಲಿ ಸ್ಥಾಪಿತವಾಗಿರುವ ವಿವಾದಾತ್ಮಕ ಕೈಗಾ ಅಣುಶಕ್ತಿ ಸ್ಥಾವರಕ್ಕೆ ಈ ನದಿಯು ಆಧಾರವಾಗಿದೆ. ಈ ನದಿಗೆ 7ನೆಯ ಆಣೆಕಟ್ಟನ್ನು ಮುರುಡೇಶ್ವರ ಪವರ್ ಕಾರ್ಪೋರೇಷನ್ ಲಿಮಿಟೆಡ್ (MPCL) ರವರಿಂದ ಕಟ್ಟುವ ಹುನ್ನಾರ ನಡೆದಿದೆ. ಅದಲ್ಲದೆ ದಾಂಡೇಲಿ ಕಾಗದದ ಕಾರ್ಖಾನೆಯ ವಿಸರ್ಜನೆಯಿಂದ ಕಾಳಿ ನದಿ ದುರ್ಗಂಧ ಸೂಸುವ ವೈತರಣಿಯಾಗಿದೆ. ಆಣೆಕಟ್ಟು ಮತ್ತು ಪ್ರದೂಷನವಲ್ಲದೆ ಸೂಪಾ ಜಲಾಶಯದಲ್ಲಿ ಅಕ್ರಮ ಮರಳು ಸಾಗಾಣಿಕೆ ನಡೆಯುತ್ತಿರುವುದರಿಂದ ನದಿಯ ಪರಿಸರದ ಮೇಲೆ ದುಷ್ಪರಿಣಾಮಗಳು ಬೀರುತ್ತಿದೆ.

ಕಾಳಿ ನದಿಯ ಮೇಲೆ 7ನೆಯ ಆಣೆಕಟ್ಟನ್ನು ಕಟ್ಟಿದರೆ ಈ ನದಿಯು ಹರಿಯುವ ಹೊಳೆಯಲ್ಲದೆ ಕೇವಲ ಕೆರೆಗಳ ಸಾಲಾಗಿ ಬದಲಾಗುತ್ತದೆ. ಕಾಳನದಿಯ ಉದ್ದಕ್ಕೂ ಇರುವ ಅಕ್ಕಪಕ್ಕದ 210ha ಅರಣ್ಯಪ್ರದೇಶವನ್ನು ನೀರ್ನಾಲು ಮಾಡಿ ಈ ಆಣೆಕಟ್ಟು ಕೇವಲ 18M.W. ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಲಿದೆ. ಈಗಾಗಲೆ ಮೊದಲು 6 ಆಣೆಕಟ್ಟುಗಳು 32,000 ಎಕರೆಗಳಿಗಿಂತಲೂ ಹೆಚ್ಚಿನ ಅರಣ್ಯ ಪ್ರದೇಶವನ್ನು ನೀರ್ನಾಲು ಮಾಡಿ 1200M.W. ವಿದ್ಯುತ್‌ಶಕ್ತಿಯನ್ನು ಉದ್ಪಾದಿಸುತ್ತಿವೆ.

19ನೇ ಮೇ 1987ರ ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ (ಸಂಖ್ಯೆ FFD 242 FGL 83) ಕಾಳಿ ನದಿ ಮತ್ತು ಅದರ ಉಪನದಿಗಳ ಬಗ್ಗೆ ಅರಣ್ಯ ಪ್ರದೇಶದ ಅನ್ಯ ಉಪಯೋಗ ಮತ್ತು ಪರ್ಯಾಯ ಯೋಜನೆಗಳನ್ನು ತರುವ ಯಾವುದೇ ಯೋಜನೆಗಳಿಗೆ ಅನುಮತಿಯಿಲ್ಲ. ಈ ಯೋಜನೆಗೆ ಅನುಮೋದಿಸುವುದು ಸರ್ಕಾರದ ಆದೇಶವನ್ನು ಉಲ್ಲಂಘಿಸಿದಂತಾಗುವುದು. ಉಚ್ಚ ನ್ಯಾಯಾಲಯವು ಈ ಆದೇಶವನ್ನು ಪುಷ್ಟೀಕರಿಸಿದೆ.

MPCL ಮತ್ತು ಅವರ ಸಲಹೆಗಾರರು (Ernst and Young ಮತ್ತು TERI) ನೀಡಿದ ತಪ್ಪು ಮಾಹಿತಿಗಳನ್ನು ಹೊಂದಿರುವ EIA ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಈ ವಿಷಯವನ್ನು ಪರಿಸರ ಬೆಂಬಲ ತಂಡ ಮತ್ತು ಪರಿಸರ ಸಂರಕ್ಷಣಾ ಕೇಂದ್ರ 2000 ಇಸವಿಯಲ್ಲಿ ಬೆಳಕಿಗೆ ತಂದು ಬಹಿರಂಗ ಪಡಿಸಿತ್ತು. EIA ಪ್ರಕಟಣೆಯ ಪ್ರಕಾರ ಇದು ಸಂಪೂರ್ಣವಾಗಿ ನಿರಾಕರಿಸಬಹುದಾದ ಪ್ರಕರಣ. ಇದರ ಆಧಾರದ ಮೇಲೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳು ಈ ಯೋಜನೆಗೆ ಅನುಮತಿ ನೀಡಿಲ್ಲ. MPCL ರವರು ಆಣೆಕಟ್ಟು ಮುಳುಗಡೆ ಪ್ರದೇಶದಲ್ಲಿ ಯಾವ ಅರಣ್ಯ ಪ್ರದೇಶವು ಇಲ್ಲವೆಂದು ಮಾಹಿತಿ ನೀಡಿರುವುದನ್ನು ಜಿಲ್ಲಾ ಅರಣ್ಯ ಅಧಿಕಾರಿಗಳು ನಿರಾಕರಿಸಿದ್ದಾರೆ. ಮುಳುಗಡೆ ಪ್ರದೇಶವು ವನ್ಯ ಜೀವಿಗಳಿಗೆ ಆಶ್ರಯ ನೀಡುವ ಹಾಗು ನಿತ್ಯಹಸಿರಿನ ಕಾಡನ್ನು ಹೊಂದಿದೆ. ಇಷ್ಟಾದರೂ ಯೋಜನೆಯನ್ನು ಮುಂದುವರಿಸಲು ಹೆಚ್ಚಿನ ಒತ್ತಾಯವಿದೆ.

ಆಣೆಕಟ್ಟುಗಳಿಗೆ ಆಧಾರವಾಗಿರುವ ಕಾಳಿ ನದಿಯು ಇದಲ್ಲದೆ ಕಾಗದ ಕಾರ್ಖಾನೆ ವಿಸರ್ಜನೆಯಿಂದ ಮಾಲಿನ್ಯಕ್ಕೆ ಬಲಿಯಾಗಿದೆ. ಇದರಿಂದ ಕಾಳಿ ಕಣಿವೆಯ ಜನಾಂಗದ ಮೇಲೆ ಭೀಕರ ದುಷ್ಪರಿಣಾಮವು ಬೀರಿದೆ – ಬೆಳೆಯ ನಷ್ಟ ಪಶುಪಾಲನೆ ಮತ್ತು ಮೀನುಗಾರಿಕೆ ಮೇಲೆ ವಿಪರೀತಾತ್ಮಕ ಪರಿಣಾಮ, ಆಗಾಗ್ಗೆ ದನಕರುಗಳು ಸಾಯುವ ವರದಿಗಳು ಸರ್ವೆಸಾಮಾನ್ಯವಾಗಿದೆ. ಈ ಮಲಿನ ನೀರನ್ನು ಬಳಸುವ ಕೃಷಿಕರಲ್ಲಿ ಚರ್ಮರೋಗಗಳು ಹೆಚ್ಚಾಗಿ ಕಂಡು ಬಂದಿವೆ. ಕರ್ನಾಟಕ ಮಾಲಿನ್ಯ ನಿಯಂತ್ರಣಾ ಮಂಡಲಿಯು ಈ ಪ್ರದೂಷನವನ್ನು ತಡೆಗಟ್ಟಲು ಯಾವ ಕಾಳಜಿಯನ್ನು ವಹಿಸಿಲ್ಲ. ಇತ್ತೀಚೆಗೆ ಕಾಳಿ ಬಚಾವೋ ಆಂದೋಲನದ ನೇತೃತ್ವದಲ್ಲಿ (KBA) ಗ್ರಾಮಸ್ಥರ ಒತ್ತಾಯದಿಂದ ಸ್ಥಳೀಯ ಪೋಲೀಸ್ ಅಧಿಕಾರಿಯು ಕಂಪನಿಯ ವಿರುದ್ಧ ಕಾನೂನು ಕಾರ್ಯಾಚರಣೆಯನ್ನು ನಡೆಸಿದೆ. KBA ಬೇಡಿಕೆ ಕಂಪನಿಯನ್ನು ಮುಚ್ಚುವುದು ಉದ್ದೇಶವಲ್ಲ ಎಲ್ಲರ ಹಿತಕ್ಕಾಗಿ ಮಾಲಿನ್ಯವನ್ನು ತಡೆಗಟ್ಟಲು ಸರಿಯಾದ ಕ್ರಮವನ್ನು ಕಂಪನಿಯು ಅನುಸರಿಸಬೇಕಾಗಿದೆ.

ಈ ಪ್ರದೇಶದಲ್ಲಿ ಜನರು ಕಾಳಿ ನದಿಯ ಮೇಲೆ ನಡೆಯುತ್ತಿರುವ ಆಕ್ರಮವನ್ನು ತಡೆಗಟ್ಟಲು ಹಾಗೂ ಅದನ್ನು ಉಳಿಸಲು ಜನರಲ್ಲಿ ಮಾಹಿತಿ ನೀಡುವುದರಲ್ಲಿ ಕಾರ್ಯನಿರತರಾಗಿದ್ದಾರೆ. ಪರಿಸರ ಸಂರಕ್ಷಣಾ ಕೇಂದ್ರ (PSK) ಕಣಿವೆಯ ಜನರ ಹಾಗೂ ಆದಿವಾಸಿಗಳು ಬೆಂಬಲದಲ್ಲಿ ಕಾಳಿ ಬಚಾವೋ ಆಂದೋಲನವನ್ನು ಸ್ಥಾಪಿಸಿತು. ಪಾಂಡುರಂಗ ಹೆಡ್ಗೆಯವರ ನೇತೃತ್ವದಲ್ಲಿ KBAಯು ಫೆಬ್ರವರಿಯಲ್ಲಿ ಪಾದಯಾತ್ರೆಯನ್ನು ನಡೆಸಿತು. ಇದಕ್ಕೆ ಸ್ಥಳೀಯ ಗ್ರಾಮಸ್ಥರಿಂದ ಉತ್ತಮ ಪ್ರತಿಕ್ರಿಯೆ ದೊರಕಿತು. ಪರಿಸರ ಬೆಂಬಲ ತಂಡ (ESG) ಬೆಂಗಳೂರು KBAಗೆ ಸಂಪೂರ್ಣ ಬೆಂಬಲ ನೀಡುತ್ತಿದೆ.

ಮಾನ್ಯಶ್ರೀ ಮುಖ್ಯ ಮಂತ್ರಿಯಲ್ಲಿ ಮನವಿ

ಈ ಪತ್ರದೊಂದಿಗೆ ಕರ್ನಾಟಕ ಮಾನ್ಯಶ್ರೀ ಮುಖ್ಯ ಮಂತ್ರಿಯಾದ ಎಸ್.ಎಂ. ಕೃಷ್ಣರವರಿಗೆ ಬರೆದ ಮನವಿ ಪತ್ರವನ್ನು ಲಗತ್ತಿಸಲಾಗಿದೆ. ನಾವು ನಿಮ್ಮನ್ನು ಈ ಪತ್ರಕ್ಕೆ ಅನುಮೋದಿಸಿ ಮುಖ್ಯ ಮಂತ್ರಿಗಳಿಗೆ ಕಳುಹಿಸಲು ಪ್ರೋತ್ಸಾಹಿಸುತ್ತೇವೆ. ಇದರ ಪ್ರತಿಯನ್ನು ಪರಿಸರ ಮತ್ತು ಅರಣ್ಯ ಸಚಿವರು ಶ್ರೀ ಟಿ. ಆರ್. ಬಾಲು ಹಾಗೂ ESGಗೆ ಕಳುಹಿಸತಕ್ಕದ್ದು. ನಿಮ್ಮ ಸ್ನೇಹಿತರು ಹಾಗೂ ಇನ್ನಿತರ ಸಂಘ ಸಂಸ್ಥೆಗಳನ್ನು ಇದಕ್ಕೆ ಅನುಮೋದಿಸಿ ಪತ್ರಗಳನ್ನು ಕಳುಹಿಸಲು ನಾವು ನಿಮ್ಮನ್ನು ಕೋರುತ್ತೇವೆ.



1 ಶ್ರೀ ಟಿ.ಆರ್. ಬಾಲು
ಅರಣ್ಯ ಮತ್ತು ಪರಿಸರ ಮಂತ್ರಿ
ಪರ್ಯಾವರಣ್ ಭವನ್
ಲೋಧಿ ರಸ್ತೆ
ನವ ದೆಹಲಿ

2.ಕಾಳಿ ಬಚಾವೋ ಆಂಧೋಲನ
C/o. ಪರಿಸರ ಬೆಂಬಲ ತಂಡ (ಂ)
S-3 ರಾಜಶ್ರೀ
ಅಪಾರ್ಟ್‌ಮೆಂಟ್‌ಸ್
18/57, 1ನೇ ಮುಖ್ಯ ರಸ್ತೆ
ಎಸ್.ಆರ್.ಕೆ. ಗಾರ್ಡನ್, ಜಯನಗರ,
ಬನ್ನೇರುಘಟ್ಟ ರಸ್ತೆ
ಬೆಂಗಳೂರು – 560 041. ಇಂಡಿಯಾ
ದೂರವಾಣಿ : 6341977, 6531339, 6534364
ಈಮೇಲ್ : esg@bgl.vsnl.net.in

3. ಪರಿಸರ ಸಂರಕ್ಷಣಾ ಕೇಂದ್ರ,
ಹುಲಿಮಲ್ಲಿ ಬಿಲ್ಡಿಂಗ್, ಚೌಕಿ ಮಾರ್ಕ್ಟ್,
ಸಿರಸಿ, (ಉತ್ತರ ಕನ್ನಡ ಜಿಲ್ಲೆ)
ಕರ್ನಾಟಕ – 581 401 ಇಂಡಿಯಾ
ದೂರವಾಣಿ : 08384-425139/ 425039
ಫ್ಯಾಕ್ಸ್: 08384-435450/427839
ಈಮೇಲ್ : appiko@sancharnet

ಕೊಡುಗೆ ಈ ಆಂದೋಲನಕ್ಕೆ ತಗಲುವ ವೆಚ್ಚವನ್ನು ಭರಿಸಲು ನಿಮ್ಮಲ್ಲಿ ಸಹಾಯವನ್ನು ಕೋರುತ್ತೇವೆ. (KBA) ಗೆ ಉದಾರಮನೋಭಾವನೆಯಿಂದ ಅನುದಾನವನ್ನು ನೀಡಲು ಕೋರುತ್ತೇವೆ. ಎಲ್ಲಾ ವಿಧವಾದ ಧನಸಹಾಯವನ್ನು ಚೆಕ್/ಡಿ.ಡಿ./ಎಂ.ಓ./ನಗದು ಮೂಲಕ ESG ಯ ಹೆಸರಿನಲ್ಲಿ ಪಾವತಿ ಮಾಡಬಹುದು. ಎಲ್ಲಾ ಧನ ಸಹಾಯಕ್ಕೆ ಆದಾಯ ತೆರಿಗೆ 80Gರ ಪ್ರಕಾರ ವಿನಾಯಿತಿ ನೀಡಲಾಗಿದೆ.

ಕಾಳಿ ನದಿಯನ್ನು ಉಳಿಸಲು K.B.A ಗೆ ಬೆಂಬಲ ನೀಡುವುದು.

ಪರಿಸರ ಸಂರಕ್ಷಣಾ ಕೇಂದ್ರ,
ಬಸವರಾಜ ನಿಲಯ, ಚೌಕಿಮಠ,ಶಿರಸಿ (ಉ.ಕ.) ೫೮೧ ೪೦೨
ದೂರವಾಣಿ:-425139

ಸಂಪಾದಕರು

ದಿನಾಂಕ:19/11/2002

ಇವರಿಗೆ,

ಮಾನ್ಯರೇ

ದಿನಾಂಕ ೨೧/೧೧/೨೦೦೨ ಗುರುವಾರದಂದು ಮುರೇಗಾರ(ಸಾಲ್ಕಣಿ) ಪ್ರಾಥಮಿಕ ಶಾಲೆ ಆವರಣದಲ್ಲಿ ' ಬೆತ್ತ,ಉಪ್ಪಿಗೆ ಹಾಗೂ ಇತರ ಕಿರು ಅರಣ್ಯ ಉತ್ಪನ್ನಗಳ ಸುಸ್ಥಿರ ಸಂಗ್ರಹಣೆ ' ಕುರಿತು ಕಾರ್ಯಾಗಾರವೊಂದನ್ನು ಏರ್ಪಡಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು, ಅರಣ್ಯ ವಿಜ್ಞಾನ ಕಾಲೇಜಿನ ತಜ್ಞರು, ಗ್ರಾಮ ಅರಣ್ಯ ಸಮಿತಿಯವರು,ಗ್ರಾಮಸ್ಥರು ಮತ್ತು ಪರಿಸರಾಸಕ್ತರು ಭಾಗವಹಿಸಲಿದ್ದಾರೆ. ಇದರಲ್ಲಿ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಯ ಸದ್ಯದ ಸ್ಥಿತಿ,ಗತಿ , ಅವುಗಳ ಸಂರಕ್ಷಣೆ, ಸುಸ್ಥಿರ ಸಂಗ್ರಹಣೆಯ ಮುಂದಿನ ಕಾರ್ಯಯೋಜನೆಗಳ ಕುರಿತು ಚರ್ಚೆ-ವಿಚಾರ ವಿನಿಮಯ ನಡೆಯಲಿದೆ.

ಈ ಸಂದರ್ಭದಲ್ಲಿ ತಾವು ಅಥವಾ ತಮ್ಮ ಪ್ರತಿನಿಧಿಗಳು ಹಾಜರಿರಬೇಕೆಂದು ವಿನಂತಿಸಿ ಕೊಳ್ಳುತ್ತೇವೆ. ಆಮಂತ್ರಣ ಪತ್ರವನ್ನು ಸಂಗಡ ಲಗತ್ತಿಸಿದ್ದೇವೆ.

ಧನ್ಯವಾದಗಳೊಂದಿಗೆ

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.

KALI BACHAO ANDOLAN
Basavaraj Nilaya
Chowkimath
SIRSI - 581401
Uttara Kannada **email:appiko@sancharnet.in**
****

K L Chandak
Executive Director
The West Cost Paper Mill Ltd.
Dandeli

8 May 2003

File: wcp/3/03

Dear Shri Chandak,

Namaskar.

Thanks for your Fax message dated 07/05/2003. We are glad to known that you appreciate our effort towards environment conservation.

We are glad to known that WCP is committed towards environmental and social responsibility. This commitment will enable both of us to progress towards a prosperous Kali and WCP.

We are willing to visit your modern, full-fledged Effluent Treatment Plant. But our priority is towards the following:

- As the biggest industrial unit, we want some basic information about your unit. (The letter attached for your reference).
- We have to discuss on how we resolve the issues of the villages/people who are adversely affected by the treated effluent.
- ETP, its functioning and peoples involvement in resolving the conflict in future.

We have been requesting from the beginning to sort out the issues across the table with you. Nevertheless, both of us have wasted our time and energy in complicating the issue. We hope this will not be repeated in future.

We want to visit you at the earliest to sort out the issues. But I have to go to Bangalore and shall be back only by the middle of the next week. After that we shall meet you to discuses the details.

With regards
Yours Sincerely

Pandurang Hegde

For *Parisara Samrakshana Kendra*

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ಪತ್ರಿಕಾ ಪ್ರಕಟಣೆ

ಕಾಳಿ ಬಚಾವೋ ಆಂದೋಲನಕ್ಕೆ ಬೆಂಬಲ

ದಾಂಡೇಲಿಯಲ್ಲಿ ಆರಂಭಗೊಳ್ಳಲಿರುವ ಕಾಳೀ ಬಚಾವೋ ಆಂದೋಲನಕ್ಕೆ ಪರಿಸರ ಸಂರಕ್ಷಣಾ ಕೇಂದ್ರವು ತನ್ನ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ.

ಕಾಳಿ ನದಿಯು ಲಕ್ಷಾಂತರ ಜನರಿಗೆ ಜೀವನದಾಯಿಯಾಗಿದೆ. ಈ ನದಿಗೆ ಬಂದಿರುವ ಆಪತ್ತನ್ನು ಮನಗಂಡು ದಲಿತ ಹೋರಾಟಗಾರರಾದ ಸಿ . ಎನ್. ಜೋಗು ಅವರು ಕಾಳಿನದಿಯನ್ನು ಉಳಿಸುವ ಹೋರಾಟದಲ್ಲಿ ಮೊದಲನೆಯ ಹೆಜ್ಜೆಯನ್ನಿಟ್ಟಿದ್ದಾರೆ. ದಾಂಡೇಲಿಯ ಕಾಗದ ಕಾರ್ಖಾನೆಯು ಹೊರ ಚೆಲ್ಲುತ್ತಿರುವ ಮಾಲಿನ್ಯದಿಂದಾಗಿ ನದಿಯ ದಂಡೆಯಲ್ಲಿ ವಾಸಿಸುತ್ತಿರುವ ಜನರ ಬದುಕು ನರಕವಾಗಿದೆ. ಇದರ ದುಷ್ಪರಿಣಾಮ ದಾಂಡೇಲಿಯಿಂದ ಕಾರವಾರದವರೆಗೆ ವ್ಯಾಪಿಸಿದೆ. ಹೀಗಿದ್ದರೂ ಸಹ ಕಾಗದ ಕಾರ್ಖಾನೆಯವರು ಈ ಮಾಲಿನ್ಯ ತಮ್ಮಿಂದ ಆಗಿಲ್ಲ ಎಂಬ ಸ್ಪಷ್ಟೀಕರಣ ನೀಡಿದ್ದಾರೆ.

ಅದರ ಸತ್ಯಾ ಸತ್ಯತೆಯನ್ನು ಅರಿಯಲು ಪರಿಸರ ಸಂರಕ್ಷಣಾ ಕೇಂದ್ರದ ತಂಡವು ಪಾಂಡುರಂಗ ಹೆಗಡೆ ಹಾಗೂ ಗೇರಾಳದ ಬಿ.ಜಿ.ಹೆಗಡೆ ನೇತ್ರತ್ವದಲ್ಲಿ ಇತ್ತೀಚೆಗೆ ಮಾಲಿನ್ಯದಿಂದ ಪ್ರಭಾವಿತವಾದ ಹಳ್ಳಿಗಳಿಗೆ ಭೇಟಿ ನೀಡಿತ್ತು.

ಕೇರವಾಡ, ಹಾಳಮಡ್ಡಿ ಹಾಗೂ ಕರಿಯಂಪಾಲಿ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿಯ ಜನರ ಜೊತೆ ಚರ್ಚಿಸಿ ಕಾಗದ ಕಾರ್ಖಾನೆಯ ಮಲೀನತೆಯಿಂದಾಗಿ ಅವರ ಬದುಕು ದುಸ್ತರವಾಗಿದ್ದನ್ನು ಪ್ರತ್ಯಕ್ಷ ನೋಡಿದರು. ಕೃಷಿ ಭೂಮಿಯಲ್ಲಿ ಕಾರ್ಖಾನೆಯು ಹೊರಬಿಟ್ಟ ರಾಸಾಯನಿಕದಿಂದಾಗಿ ತರಕಾರಿ ಹಾಗೂ ಇತರ ಬೆಳೆಗಳು ನಾಶವಾಗುತ್ತಿವೆ. ಮೂಕ ಪಶುಗಳಾದ ಜಾನುವಾರುಗಳು ನದಿಯ ನೀರನ್ನು ಕುಡಿದು ಬರಡಾಗಿದ್ದು ರೋಗ ಪೀಡಿತವಾಗಿವೆ. ಈ ಕಲುಷಿತ ನೀರಿನಿಂದಾಗಿ ದಾಂಡೇಲಿಯ ಅಭಯಾರಣ್ಯದಲ್ಲಿನ ವನ್ಯಜೀವಿಗಳ ಮೇಲೂ ದುಷ್ಪರಿಣಾಮ ಆಗಿರುವುದು ಖಚಿತವಾಗಿದೆ. ಪರಿಸ್ಥಿತಿಯು ಗಂಭೀರವಾಗಿದ್ದರೂ ಸಹ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಕಳೆದ ಹಲವಾರು ವರ್ಷಗಳಿಂದ ಯಾವುದೇ ಕ್ರಮ ಜರುಗಿಸದೇ ಸುಮ್ಮನಿರುವುದು ಖಂಡನೀಯ.

ಕಾಳಿಯನ್ನು ವಿಷಮುಕ್ತಗೊಳಿಸುವ, ನದಿಯನ್ನು ಉಳಿಸುವ ಉದ್ದೇಶದಿಂದ ಪಕ್ಷಾತೀತವಾಗಿ ನಡೆಯುವ '' ಕಾಳಿ ಬಚಾವೋ ಆಂದೋಲನ ''ಕ್ಕೆ ಉತ್ತರ ಕನ್ನಡ ಜಿಲ್ಲೆಯ ಹಾಗೂ ಕರ್ನಾಟಕದ ಜನತೆಯ ಬೆಂಬಲ ನೀಡಬೇಕೆಂದು ನಮ್ಮ ಕಳಕಳಿಯ ವಿನಂತಿ.

ಫೆಬ್ರುವರಿ ೨೦೦೨ ರಲ್ಲಿ ಕಾಳಿನದಿ ತಟದಲ್ಲಿ ಜನಜಾಗೃತಿ ಮೂಡಿಸಲು, ನದಿಯ ಉಳಿವಿಗಾಗಿ ಪಾಂಡುರಂಗ ಹೆಗಡೆ ತಂಡದವರು ಪಾದಯಾತ್ರೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಪಾದಯಾತ್ರೆಯ ಫಲಶ್ರುತಿಯಾಗಿ ಕಾಳಿ ಬಚಾವೋ ಆಂದೋಲನ ಪಾರಂಭವಾಗಿದ್ದು ನದಿಯನ್ನು ಉಳಿಸುವ ನಿಟ್ಟಿನಲ್ಲಿ ಶುಭ ಸಂಕೇತವಾಗಿದೆ.

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ದಿ:28/3/2003

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಿಗಿ ಕಟ್ಟಡ
ಶಿರಸಿ (ಉ. ಕನ್ನಡ) ೫೮೧ ೪೦೧

KALI BACHAO ANDOLAN

WHY *KALI*?

Kali might be lesser known river than the famous Cauvery and Krishna rivers but its contributions to the sustenance of Western Ghats is enormous. Flowing quietly through its 184 kilometers stretch, it helps generate 1500 MW of power before it drains in the Arabian Sea at the picturesque port town of Karwar. No other river as short as Kali would have contributed as much.

Originating in Kushavali, on the border of Karnataka and Goa, the river meanders through the lives of some 4 crore people of Karnataka. It is home to six hydel projects and the Kaiga Nuclear Power Project. It not only lights up the homes of millions of people perched on remote hills but supports livehoods of tens of thousands of people including fishermen on the coast of Karwar.

***KALI*'S CALL**

But the lifeline of millions of people and incredible flora and fauna is under grave threat from diverse forces:

- From the West Coast Paper Mills in Dandeli that discharges its pollutants unabated into the river, jeopardising the health of people, livestock, wildlife and the aquatic life along the river.
- From the 7th dam (in addition to six dams viz., Supa, Tattihalla, Bagwati, Kodasili, Kadra and Kaneri) that has been planned across the river at Mavalangi near Dandeli. These dams have choked the flow in the river. It has uninterrupted flow in 18 km stretch only.
- from open-cast manganese mining along the river's catchment and sand mining in Pandri (one of the tributaries of Kali).

SAVE *KALI*

No other river in the country has been as much under ecological pressure as river Kali. Two padyatras, first in 1983 and the latest in 2003, have confirmed that this short west flowing river cannot withstand any more external pressures, both to fulfil its own ecological functions as also to ensure livelihoods security to people and the wildlife. People living along the banks of the river, who have traditional riparian rights over the nature's gift, have given a call for **Kali Bachao Andolan**. At a time when water is the key issue at international and national fora and the voice for the protection of freshwater echoes from all corners, the **Kali Bachao Andolan** is being formally launched to protect this river and to convey the message across the planners and developmentalists that unless rivers are protected, no human or animal life can be protected for long. KBA enjoys the unanimous support of political parties and environmental organisations.

Pandurang Hegde
C N Jog
Jayachandra

March 30, 2003

Press Realease
30/03/03
Bangalore

ಕಾಳಿ ಬಚಾವೋ ಆಂದೋಲನ
ಬಸವರಾಜ ನಿಲಯ
ಚೌಕಿಮಳ, ಶಿರಸಿ -58 140 1 ಉತ್ತರ ಕನ್ನಡ

ಪತ್ರಿಕಾ ಪ್ರಕಟಣೆ

ಎಪ್ರಿಲ್ 3 ರಿಂದ ಕಾಳಿ ಬಚಾವೋ ಆಂದೋಲನ

ಕಾಳೀ ಯಾಕೆ?

ಕಾಳಿ ಕಾವೇರಿ ಹಾಗೆ ಖ್ಯಾತಿಯನ್ನು ಪಡೆದಿಲ್ಲ, ಆದರೆ ಪಶ್ಚಿಮ ಘಟ್ಟದ ಉಳಿವಿಗಾಗಿ ಕಾಳಿ ತನ್ನ ಕೊಡುಗೆಯನ್ನು ನೀಡುತ್ತಿದೆ. ಮಲೆನಾಡಿನ ಕಣಿವೆಯಲ್ಲಿ 184 ಕೀ.ಮೀ ದೂರ ಕ್ರಮಿಸಿ ಕಾರವಾರದಲ್ಲಿ ಸಮುದ್ರ ಸೇರುವ ಮುಂಚೆ 1500 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಗೆ ಅನುವು ಮಾಡಿಕೊಟ್ಟಿದೆ. ಇಷ್ಟು ಚಿಕ್ಕ ನದಿಯಾದರೂ ಇದರ ಕೊಡುಗೆ ಅಪಾರ. ನಾಲ್ಕು ಕೋಟಿ ಕನ್ನಡಿಗರ ಮನ-ಮನೆ ಬೆಳಗುವ ವಿದ್ಯುತ್ ಕಾಳಿ ನೀರಿನಿಂದ ಉತ್ಪಾದನೆಯಾಗುತ್ತಿದೆ. ಲಕ್ಷಾಂತರ ಮೂಲನಿವಾಸಿಗಳಿಗೆ ಹಾಗೂ ಕಡಲ ತೀರದ ಮೀನುಗಾರರಿಗೆ ಕಾಳಿ ಜೀವನ ದಾಯಿಯಾಗಿದೆ.

ಕಾಳಿಗೆ ಆಪತ್ತು

ಈ ಜೀವ ನದಿಗೆ ಈ ಕೆಳಗಿನ ಮೂಲಗಳಿಂದ ಆಪತ್ತು ಬಂದಿದೆ:

- ದಾಂಡೇಲಿಯಲ್ಲಿನ ಕಾಗದದ ಕಾರ್ಖಾನೆಯಿಂದ ಹೊರ ಬಿಡುವ ತಾಜ್ಯ ಕಾಳಿ ನೀರನ್ನು ವಿಷಪೂರಿತವನ್ನಾಗಿಸಿದೆ. ಜನ ಜಾನುವಾರು ಹಾಗೂ ಜಲಚರ ಜೀವಿಗಳ ಉಳಿವಿಗೆ ಆಪಾಯ ಬಂದೊದಗಿದೆ. ಮೀನುಗಾರರು ಸಂಕಷ್ಟದಲ್ಲಿದ್ದಾರೆ.
- ಕಾಳಿಗೆ ಅಡ್ಡವಾಗಿ ದಾಂಡೇಲಿಯ ಹತ್ತಿರ ಮಾವಳಂಗಿಯಲ್ಲಿ ಏಳನೆಯ ಆಣೆಕಟ್ಟನ್ನು ನಿರ್ಮಿಸುವ ಪ್ರಯತ್ನ ನಡೆದಿದೆ.

ಕಾಳಿ ಉಳಿಸಿ

ಕಾಳಿ ನದಿಗೆ ಬಂದೊದಗಿದಷ್ಟು ಆಪತ್ತು ದೇಶದ ಇನ್ಯಾವ ನದಿಗೂ ಬಂದಿಲ್ಲ. ಈ ನದಿಯ ದಡದಲ್ಲಿ 1983 ಹಾಗೂ 2003 ರಲ್ಲಿ ಪಾದಯಾತ್ರೆಯನ್ನು ಮಾಡಿ ಈ ಆಪತ್ತನ್ನು ದಾಖಲಿಸಲಾಗಿದೆ. ಇನ್ನೂ ಹೆಚ್ಚಿನ ಅತ್ಯಾಚಾರವನ್ನು ತಡೆಯಲು ಕಾಳಿಯ ಮಕ್ಕಳು ' ಕಾಳಿ ಬಚಾವೋ ಆಂದೋಲನ' ವನ್ನು ಪ್ರಾರಂಭಿಸಲಿದ್ದಾರೆ. ಎಪ್ರಿಲ್ 3 , 2003 ರಂದು ದಾಂಡೇಲಿಯ ಹಾಳಮಡ್ಡಿ ಸೇತುವೆಯ ಹತ್ತಿರ ಬೆಳಿಗ್ಗೆ 10 ಗಂಟೆಗೆ ಪ್ರತಿಭಟನಾ ಸಭೆ ಹಾಗೂ ಸರಕಾರಕ್ಕೆ ಮನವಿ ಅರ್ಪಿಸುವ ಕಾರ್ಯಕ್ರಮವಿದೆ. ಕಾಳಿಯನ್ನು ಉಳಿಸಲು ಜನಜಾಗೃತಿ ಹಾಗೂ ಸರಕಾರದ ಮಟ್ಟದಲ್ಲಿ ನೀತಿಗಳು ಬದಲಾಗಬೇಕೆಂಬುದು ಆಂದೋಲನದ ಮುಖ್ಯ ಉದ್ದೇಶ. ಪಕ್ಷಾತೀತವಾಗಿ ನಡೆಯುವ ಈ ಹೋರಾಟಕ್ಕೆ ಈಗಾಗಲೇ ಸುಂದರಲಾಲ ಬಹುಗುಣರು ಬೆಂಬಲ ನೀಡಿದ್ದಾರೆ. ರಾಜ್ಯದ ವಿವಿಧ ಪರಿಸರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.
ಪಟ್ಟಭದ್ರ ಹಿತಾಸಕ್ತಿಗಳು ಈಗಾಗಲೆ ಈ ಆಂದೋಲನದಿಂದ ಭಯ ಭೀತರಾಗಿ ಜನರನ್ನು ಒಡೆಯುತ್ತಿರುವುದು ಖೇದಕರ.

ಪಾಂಡುರಂಗ ಹಗಡೆ
ಕಾಳಿ ಬಚಾವೋ ಆಂದೋಲನದ ಪರವಾಗಿ

ಪತ್ರಿಕಾ ಪ್ರಕಟಣೆ
30 /03 /2003
ಶಿರಸಿ

ಕಾಳಿ ಬಚಾವೋ ಆಂದೋಲನ
ಬಸವರಾಜ ನಿಲಯ, ಚೌಕಿಮಕ, ಶಿರಸಿ (ಉ.ಕ) 581401

ಪತ್ರಿಕಾ ಪ್ರಕಟಣೆ

ಕಾಳಿ ಬಚಾವೋ ಆಂದೋಲನ ಯಶಸ್ವಿಯಾಗಿ ಆರಂಭ

ಕಾಳಿನದಿಯನ್ನು ಉಳಿಸುವ ಉದ್ದೇಶದೊಂದಿಗೆ ಕಾಳಿ ಬಚಾವೋ ಆಂದೋಲನವು ದಿ:3.04.2003 ರಂದು ದಾಂಡೇಲಿಯ ಕಾಗದ ಕಾರ್ಖಾನೆಯ ಬಳಿ ಆರಂಭವಾಯಿತು.

ಕಾರವಾರದ ಉಪ ವಿಭಾಗಾಧಿಕಾರಿ ಶ್ರೀ ಧುಮಾಳೆ ಹಾಗೂ ಹಳಿಯಾಳದ ತಹಶೀಲ್ದಾರ್ ಜಿ. ಎಸ್. ಭಟ್‌ರವರು ಮಾಲಿನ್ಯದಿಂದ ಪ್ರಭಾವಿತವಾದ ಸ್ಥಳಗಳ ವೀಕ್ಷಣೆ ನಡೆಸಿದರು. ಮೊದಲು ಹಾಲಮಡ್ಡಿ ಎಂಬಲ್ಲಿ ಮಲಿನಗೊಂಡ ನೀರಿನ ಬಳಕೆಯಿಂದಾಗಿ ಬೆಳೆಗಳು ನಾಶವಾಗಿದ್ದನ್ನು ಗಮನಿಸಲಾಯಿತು. ನೀರಿನ ಮೂಲಕ ಕಾಗದದ ಪಲ್ಪ ಹರಿದು ಬಂದು ಕೃಷಿ ಕೇತ್ರದಲ್ಲಿ ಹರಡಿ ಒಣಗಿ ರಟ್ಟಿನಂತಾಗಿದ್ದವು. ಈ ಸಂದರ್ಭದಲ್ಲಿ ಸ್ಥಳೀಯ ರೈತರಾದ ಪಾಂಡುರಂಗ ಪಾಟೀಲರು ''ನಮ್ಮ ಹೊಲದಲ್ಲಿ ಕಾಗದ ಉತ್ಪಾದನೆಯಾಗುತ್ತಿದೆ! ನನಗೆ ಪ್ರತಿ ವರ್ಷ ಒಂದು ಲಕ್ಷ ರೂಪಾಯಿ ಹಾನಿಯಾಗುತ್ತಿದೆ'' ಎಂದು ಅಧಿಕಾರಿಗಳಿಗೆ ವಿವರಿಸಿದರು.

ನಂತರ ಕರಿಯಂಪಾಲಿ ಹಳ್ಳಿಗೆ ಭೇಟಿ ನೀಡಿದಾಗ ಅಲ್ಲಿ ತರಕಾರಿ ಗಿಡಗಳು ವಿಷಪೂರಿತ ನೀರಿನಿಂದಾಗಿ ಒಣಗಿ ಹೋಗಿದ್ದವು. ಆ ನೀರನ್ನು ಸೇವಿಸಿದ್ದ ಜಾನುವಾರುಗಳು ತಮ್ಮ ಬದುಕಿನ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದವು. ಸಹದೇವ ಬಂಡೂಪಕರ್ (ಸ್ಥಳೀಯ ರೈತ) ''ನಮ್ಮ ಜಾನುವಾರುಗಳು ಈ ನೀರಿನಿಂದಾಗಿ ಸಾಯುತ್ತಿವೆ. ಒಂದು ವರ್ಷದಲ್ಲಿ ಇಪ್ಪತ್ತೈದು ಕರುಗಳು ಸತ್ತಿವೆ.'' ಎಂದು ಸಾಯುತ್ತಿರುವ ಕರುಗಳನ್ನು ತೋರಿಸಿದರು. ರೈತರು ತಮಗಾದ ನಷ್ಟವನ್ನು ವಿವರಿಸುತ್ತಿದ್ದಾಗ ಸ್ಥಳೀಯರಲ್ಲದ ಅಸಾಮಾಜಿಕ ಶಕ್ತಿಗಳು ಗದ್ದಲವನ್ನೆಬ್ಬಿಸಿ ನಿರೀಕ್ಷಣೆಗೆ ಅಡ್ಡಿಯನ್ನುಂಟು ಮಾಡಿದರು. ಆದರೆ ಪೋಲಿಸರ ಮಧ್ಯ ಪ್ರವೇಶದಿಂದ ಪರಿಸ್ಥಿತಿ ಶಾಂತವಾಯಿತು.

ಸ್ಥಳ ಭೇಟಿಯ ನಂತರ ಕಾಳಿ ಬಚಾವೋ ಆಂದೋಲನದ ಪರವಾಗಿ ಶ್ರೀ ಪಾಂಡುರಂಗ ಹೆಗಡೆಯವರು ಜಿಲ್ಲಾಧಿಕಾರಿಗಳಿಗೆ ಉಪ ವಿಭಾಗಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಿದರು. ಮನವಿಯು, ಕಾರ್ಖಾನೆಯವರು ಕಾಳಿನದಿಗೆ ಬಿಡುತ್ತಿರುವ ಕಲುಷಿತ ನೀರನ್ನು ನಿಲ್ಲಿಸಬೇಕು, ಮಾಲಿನ್ಯಭರಿತ ನೀರಿನಿಂದಾಗಿ ಈಗಾಗಲೇ ತೊಂದರೆಗೊಳಗಾದವರಿಗೆ ಪರಿಹಾರ ನೀಡಬೇಕು. ಕೊಳಚೆಯನ್ನು ಶುದ್ಧೀಕರಿಸಿ ಹೊರಬಿಡಬೇಕು ಎಂಬಿತ್ಯಾದಿ ಅಂಶಗಳನ್ನೊಳಗೊಂಡಿದೆ.

ಈ ಸಂದರ್ಭದಲ್ಲಿ ಕಾಗದ ಕಾರ್ಖಾನೆಯ ತಾಂತ್ರಿಕ ಅಧಿಕಾರಿಗಳು ಹಾಜರಿದ್ದು ಪರಿಸ್ಥಿತಿಯನ್ನು ವಿಕ್ಷಿಸಿದರು. ಅವರು ನೀರು ಶುದ್ಧವಾಗಿದೆ ಹಾಗೂ ಕುಡಿಯಲು ಯೋಗ್ಯವಾಗಿದೆ. ಕೇವಲ ಬಣ್ಣ ಹಾಗೂ ವಾಸನೆ ಇದೆ ಎಂದಾಗ ಪಾಂಡುರಂಗ ಹೆಗಡೆಯವರು ಕಲುಷಿತ ನೀರನ್ನು ಕುಡಿದು ತೋರಿಸುವಂತೆ ಅಧಿಕಾರಿಗೆ ಸವಾಲು ಹಾಕಿದರು. ಆದರೆ ಆ ಅಧಿಕಾರಿ ನೀರನ್ನು ಕುಡಿಯಲು ನಿರಾಕರಿಸಿ ನೀರು ಕುಡಿಯಲು ಯೋಗ್ಯವಿಲ್ಲ ಎಂಬುದನ್ನು ಸಾಬೀತು ಪಡಿಸಿದರು.

ಈ ಮೊದಲು ಕಾಳಿ ಬಚಾವೋ ಆಂದೋಲನದ ವಿರುದ್ಧ ವದಂತಿಗಳನ್ನು ಹಬ್ಬಿಸಿ ದಾಂಡೇಲಿಯ ಜನರಲ್ಲಿ ಭಯ ಮೂಡಿಸಲಾಗಿತ್ತು. ಇಂದು ಆಂದೋಲನ ನಡೆಯುವುದಿಲ್ಲ ಎಂಬ ಸುದ್ದಿ ಕೂಡ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ರಾಜಕೀಯ ಪಕ್ಷಗಳು ಕೂಡ ಜನಪರವಾದ ನದಿ ಉಳಿಸುವ ಕಾರ್ಯವನ್ನು ವಿರೋಧಿಸಿ ಕಾಳಿ ಹಟಾವೋ ಮಾಡಿ ಕಾಳಿ ಬಚಾವೋದ ಕಾರ್ಯಕರ್ತರನ್ನು ಓಡಿಸುವುದಾಗಿ ಹೇಳಿಕೆ ನೀಡಿದ್ದವು. ಆದರೂ ಯಾವುದೇ ಅಡೆ ತಡೆಯಿಲ್ಲದೆ ಆಂದೋಲನ ಆರಂಭವಾಯಿತು. ಕೊನೆಯಲ್ಲಿ ಮಧ್ಯಾಹ್ನ ೧.೩೦ ರ ವರೆಗೂ ಕಾಗದ ಕಾರ್ಖಾನೆಯವರು ಮಾತುಕತೆಗೆ ಬರಬಹುದೆಂದು ನಿರಿಕ್ಷಣಾಗೃಹದಲ್ಲಿ ಕಾದಿದ್ದು ವ್ಯರ್ಥವಾಯಿತು. ಇಂದಿನ ಈ ಹೋರಾಟದಲ್ಲಿ ಶ್ರೀ ಪಾಂಡುರಂಗ ಹೆಗಡೆ, ಬಿ.ಜಿ.ಗೇರಾಳ, ರವೀಂದ್ರ ಶೆಟ್ಟಿ, ಜೈರಾಮ ಶೀಗೇಹಳ್ಳಿ,ರಾಜೇಶ ನಾಯ್ಕ, ದಾಂಡೇಲಿಯ ಯುವ ನೇತಾರ ಗುರುದತ್, ಭರತ್ ಮೊದಲಾದವರು ಭಾಗವಹಿಸಿದ್ದರು.

ಡಿವೈ ಎಸ್‌ಪಿ ಬಿ.ವಿ ನಾಯ್ಕ ಅವರ ಸಮರ್ಪಕ ರಕ್ಷಣೆಯ ವ್ಯವಸ್ಥೆಯಿಂದಾಗಿ ಯಾವ ರೀತಿಯ ಅಹಿತಕರ ಘಟನೆ ನಡೆಯಲಿಲ್ಲ.

ಕಾಳಿ ಬಚಾವೋ ಆಂದೋಲನದ ಪರವಾಗಿ

ದಿ: ೪-೪-೨೦೦೩

Kavita

srushthi@yahoo.com
srushthii@rediffmail.com

→ pollution status
→ what are the agitation

→ conserved
→ protection means taken

→

Kavita

334460

[illegible]

[illegible]

95 836 447684

ಕಾಳಿ ಬಚಾವೋ ಆಂದೋಲನ

ವಾಸ್ತವ ಸಂಗತಿಗಳು

- ದಿ: ೩/೪/೨೦೦೩ ರಂದು ದಾಂಡೇಲಿಯಲ್ಲಿ ಚಳುವಳಿ ನಡೆಯಲೇ ಬಾರದೆಂದು ಕಾಗದ ಕಾರ್ಖಾನೆಯವರು ತಮ್ಮ ಹಣ, ರಾಜಕೀಯ ಪ್ರಭಾವ ಹಾಗೂ ಗೂಂಡಾ ಪಡೆಗಳನ್ನು ಬಳಸಿದರು. ಆದರೆ ಈ ಬೆದರಿಕೆಗಳಿಗೆ ಮಣಿಯದೇ ನಾವು ಚಳುವಳಿಯನ್ನು ನಡೆಸಿದೆವು. ನಾವು A.C. ಹಾಗೂ ತಹಸಿಲ್ದಾರರಿಗೆ ಮಲೀನಗೊಂಡ ಕಾಳಿಯ ಚಿತ್ರಣ ನೀಡುವುದರಲ್ಲಿ ಸಫಲರಾದೆವು.

- ನಮ್ಮ ಆಂದೋಲನದ ಮುಖ್ಯ ಉದ್ದೇಶ ಕಾಳಿಯನ್ನು ಉಳಿಸುವುದಾಗಿದೆ. ಕಾಳಿಯು ಉಳಿಯ ಬೇಕಾದರೆ ನದಿಗೆ ಅಡ್ಡವಾಗಿ ಇನ್ನು ಯಾವುದೇ ಆಣೆಕಟ್ಟು ನಿರ್ಮಾಣವಾಗಬಾರದು, ಕಾಳಿ ನದಿಯ ಜಲಾನಯನ ಪ್ರದೇಶದ ಅರಣ್ಯ ರಕ್ಷಣೆಯಾಗಬೇಕು. ಹಾಗೂ ನದಿಯ ನೀರು ಶುದ್ಧವಾಗಿರ ಬೇಕು ಹಾಗೂ ಕಾಳಿ ಕಣಿವೆಯ ನಿವಾಸಿಗಳಿಗೆ ಅಭಿವೃದ್ಧಿಯ ಲಾಭ ಹಾಗೂ ಮೂಲಭೂತ ಸೌಕರ್ಯಗಳಾದ ಸಂಪರ್ಕ, ಆರೋಗ್ಯ, ಶಿಕ್ಷಣ ತಲುಪಬೇಕು. ಕಾಳಿ ಕಣಿವೆಯಲ್ಲಿ 10,000 ಕೋಟಿ ರೂ. ಖರ್ಚಾದರೂ ಕಾಳಿಯ ಮಕ್ಕಳು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

- ಈ ಆಂದೋಲನ ಯಾವ ಕಾರ್ಖಾನೆಯ ಅಥವಾ ವಿಶೇಷ ವ್ಯಕ್ತಿಗಳ ವಿರುದ್ಧ ಅಲ್ಲ. ದಾಂಡೇಲಿಯ ಕಾಗದ ಕಾರ್ಖಾನೆಯನ್ನು ಮುಚ್ಚಬೇಕೆಂದು ನಾವು ಎಂದೂ ಕೇಳಿಲ್ಲ. ಆದರೆ ಆ ಕಾರ್ಖಾನೆಯಿಂದ ಹೊರಬಿಡುವ ತಾಜ್ಯವನ್ನು ಸಂಸ್ಕರಿಸಿ ನದಿಗೆ ಬಿಡಬೇಕು. ನದಿಗೆ ವಿಷಬೆರೆಸಬಾರದು ಎಂಬುದು ನಮ್ಮ ಆಶಯ. ಆದರೆ ಇದನ್ನು ತಿರುಚಿ ನಾವು ಕಾರ್ಖಾನೆಯನ್ನೇ ಮುಚ್ಚಿಸಲು ಕಾಳಿ ಬಚಾವೋ ಆಂದೋಲನ ಮಾಡಿರುವುದಾಗಿ ಕಾಗದ ಕಾಖಾನೆ ಹಾಗೂ ಇತರ ಪಟ್ಟಭದ್ರ ಹಿತಾಸಕ್ತಿಗಳು ವದಂತಿ ಹಬ್ಬಿಸಿ ನಮ್ಮ ವಿರುದ್ಧ ಸಮರ ಸಾರಿದ್ದಾರೆ. ಇದು ಆಧಾರ ರಹಿತ.

- ಅಂದು (ಎಪ್ರಿಲ್ ೩ ರಂದು) ನಡೆದ ಘಟನೆಗಳನ್ನು ದಾಂಡೇಲಿಯ ಪತ್ರಕರ್ತರು ತಿರಿಚಿ, ಸತ್ಯವನ್ನು ಮರೆಮಾಚುವ, ಸುಳ್ಳು ವದಂತಿಗೆ ಬೆಂಬಲಕೊಡುವ ವರದಿಯನ್ನು ನೀಡಿ ತಾವೂ ಸಹ ಕಾಳಿಗೆ ವಿಷ ಉಣಿಸುವ ಕಾಗದ ಕಾರ್ಖಾನೆಯ ಹಿತಾಸಕ್ತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ಸಾಬೀತು ಮಾಡಿದ್ದಾರೆ.

- ಕಾಳಿ ನಮ್ಮೆಲ್ಲರ ಮಾತೆ. ಈ ತಾಯಿಯನ್ನು ರಕ್ಷಿಸುವುದು ಕಾಳಿ ಬಚಾವೋ ಆಂದೋಲನದ ಉದ್ದೇಶ. ಇದರಲ್ಲಿ ಯಾವ ರಾಜಕೀಯವಿಲ್ಲ. ಕಾಳಿ ಮಾತೆಯನ್ನು ಉಳಿಸುವ ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡಿ ಎಂದು ಮಾಧ್ಯಮದವರಲ್ಲಿ ವಿನಂತಿ.

ಪಾಂಡುರಂಗ ಹೆಗಡೆ

ಕಾಳಿ ಬಚಾವೋ ಆಂದೋಲನದ ಪರವಾಗಿ

ಪತ್ರಿಕಾ ಪ್ರಕಟಣೆ

ದಿ: 11.04.2003

ಕಾರವಾರ

ಅಮ್ಮಂಬಳ್ ಇನಾದ ಅಧ್ಯಕ್ಷರು

ಬಿ.ಎ. ಪಾಟಿಲ ಸಾರ್ಕ್ಷಣ ಸಮಿತಿ

ಬಿ.ಎ. ಹೆಗಡೆ ನಾಲ್ಕರ

ಶ್ರೀಕರು

Shivram A. Patil Dandeli

S.R. Gondupkar Karampali

Anant V. Kumblakar "

KALI BACHAO ANDOLAN
Basavaraj Nilaya
Chowkimath
SIRSI - 581401
Uttara Kannada **email:appiko@sancharnet.in**
****

Shri .Chandak
Executive Director
WCP
Dandeli

April, 1,2003

Re: Pollution from WCP

Dear Shri. Chandak,

We have read your statement in local newspaper about the efforts of WCP in controlling the affulents from your factory. This is a positive sign and we appreciate your effort in installing the treatment plan costing Rs.6 crores. We are sure that you would provide us an opportunity to visit these plants.

We would appreciate if you can provide us following information:

- The amount of freshwater drawn from upstream in Kali River/ per day in liters.
- The amount of water used by WCP/ liter per day.
- The quantity of polluted affluent left out per hour by your factory
- The quantity of electricity used by WCP per day/ for production of paper.
- The quantity of electricity generated by WCP (from its coal based plant).
- Total number of workers employed by WCP (Permanent workers, casual workers)
- Total quantity of paper produced by WCP per day.
- Raw materials used per day/per ton.

We are sure that WCP derives enormous benefit from River Kali and that you would definitely like to see Kali, a living river in coming years. We request your support in *KALI BACHAO ANDOLAN.*

The *Andolan* will be launched on 3rd April 2003. This will be launched near the Kali River.

We would like to make it clear that we are not against WCP, and the objective of the *Andolan* is to protect Kali.
Once again seeking your support towards our *Andolan.*

Pandurang Hegde
For *Kali Bachao Andolan*

ಪತ್ರಿಕಾ ಗೋಷ್ಠಿ

Kali file

ಆಮಂತ್ರಣ

ಮಾನ್ಯರೇ,

ದಿನಾಂಕ 11.04.2003(ಶುಕ್ರವಾರ) ಬೆಳಿಗ್ಗೆ 11 ಗಂಟೆಗೆ ಹೊಟೆಲ್ ನವತಾರಾದಲ್ಲಿ ಕಾಳಿ ಬಚಾವೋ ಆಂದೋಲನದ ವಾಸ್ತವಿಕ ಸಂಗತಿಯನ್ನು ಮಾಧ್ಯಮದವರ ಜೊತೆ ಹಂಚಿಕೊಳ್ಳಲು ಪತ್ರಿಕಾ ಗೋಷ್ಠಿಯನ್ನು ಏರ್ಪಡಿಸಿದ್ದೇವೆ.

ಕಾಳೀ ಯಾಕೆ?

ಕಾಳಿ ಕಾವೇರಿ ಹಾಗೆ ಖ್ಯಾತಿಯನ್ನು ಪಡೆದಿಲ್ಲ, ಆದರೆ ಪಶ್ಚಿಮ ಘಟ್ಟದ ಉಳಿವಿಗಾಗಿ ಕಾಳಿ ತನ್ನ ಕೊಡುಗೆಯನ್ನು ನೀಡುತ್ತಿದೆ. ಮಲೆನಾಡಿನ ಕಣಿವೆಯಲ್ಲಿ 184 ಕೀ.ಮೀ ದೂರ ಕ್ರಮಿಸಿ ಕಾರವಾರದಲ್ಲಿ ಸಮುದ್ರ ಸೇರುವ ಮುಂಚೆ 1500 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಗೆ ಅನುವು ಮಾಡಿಕೊಟ್ಟಿದೆ. ಇಷ್ಟು ಚಿಕ್ಕ ನದಿಯಾದರೂ ಇದರ ಕೊಡುಗೆ ಅಪಾರ. ನಾಲ್ಕು ಕೋಟಿ ಕನ್ನಡಿಗರ ಮನ-ಮನೆ ಬೆಳಗುವ ವಿದ್ಯುತ್ ಕಾಳಿ ನೀರಿನಿಂದ ಉತ್ಪಾದನೆಯಾಗುತ್ತಿದೆ. ಲಕ್ಷಾಂತರ ಮೂಲನಿವಾಸಿಗಳಿಗೆ ಹಾಗೂ ಕಡಲ ತೀರದ ಮೀನುಗಾರರಿಗೆ ಕಾಳಿ ಜೀವನ ದಾಯಿಯಾಗಿದೆ.

ಕಾಳಿಗೆ ಆಪತ್ತು

ಈ ಜೀವ ನದಿಗೆ ಈ ಕೆಳಗಿನ ಮೂಲಗಳಿಂದ ಆಪತ್ತು ಬಂದಿದೆ:

- ದಾಂಡೇಲಿಯಲ್ಲಿನ ಕಾಗದದ ಕಾರ್ಖಾನೆಯಿಂದ ಹೊರ ಬಿಡುವ ತಾಜ್ಯ ಕಾಳಿ ನೀರನ್ನು ವಿಷಪೂರಿತವನ್ನಾಗಿಸಿದೆ. ಜನ ಜಾನುವಾರು ಹಾಗೂ ಜಲಚರ ಜೀವಿಗಳ ಉಳಿವಿಗೆ ಅಪಾಯ ಬಂದೊದಗಿದೆ. ಮೀನುಗಾರರು ಸಂಕಷ್ಟದಲ್ಲಿದ್ದಾರೆ.
- ಕಾಳಿಗೆ ಅಡ್ಡವಾಗಿ ದಾಂಡೇಲಿಯ ಹತ್ತಿರ ಮಾವಳಂಗಿಯಲ್ಲಿ ಏಳನೆಯ ಆಣೆಕಟ್ಟನ್ನು ನಿರ್ಮಿಸುವ ಪ್ರಯತ್ನ ನಡೆದಿದೆ.

ಕಾಳಿ ಉಳಿಸಿ

ಕಾಳಿ ನದಿಗೆ ಬಂದೊದಗಿದಪ್ಪು ಆಪತ್ತು ದೇಶದ ಇನ್ಯಾವ ನದಿಗೂ ಬಂದಿಲ್ಲ. ಈ ನದಿಯ ದಡದಲ್ಲಿ 1983 ಹಾಗೂ 2003 ರಲ್ಲಿ ಪಾದಯಾತ್ರೆಯನ್ನು ಮಾಡಿ ಈ ಆಪತ್ತನ್ನು ದಾಖಲಿಸಲಾಗಿದೆ. ಇನ್ನೂ ಹೆಚ್ಚಿನ ಅತ್ಯಾಚಾರವನ್ನು ತಡೆಯಲು ' ಕಾಳಿ ಬಚಾವೋ ಆಂದೋಲನ' ವನ್ನು ಪ್ರಾರಂಭಿಸಲಾಗಿದೆ. ಎಪ್ರಿಲ್ 3 , 2003 ರಂದು ದಾಂಡೇಲಿಯ ಹಾಳಮಡ್ಡಿ ಸೇತುವೆಯ ಈ ಆಂದೋಲನ ಆರಂಭವಾಗಿದೆ. ಕಾಳಿಯನ್ನು ಉಳಿಸಲು ಜನಜಾಗೃತಿ ಹಾಗೂ ಸರಕಾರದ ಮಟ್ಟದಲ್ಲಿ ನೀತಿಗಳು ಬದಲಾಗಬೇಕೆಂಬುದು ಆಂದೋಲನದ ಮುಖ್ಯ ಉದ್ದೇಶ. ಪಕ್ಷಾತೀತವಾಗಿ ನಡೆಯುವ ಈ ಹೋರಾಟಕ್ಕೆ ಈಗಾಗಲೇ ಸುಂದರಲಾಲ ಬಹುಗುಣರು ಬೆಂಬಲ ನೀಡಿದ್ದಾರೆ. ರಾಜ್ಯದ ವಿವಿಧ ಪರಿಸರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ.

ದಯವಿಟ್ಟು ಬನ್ನಿ.
ಕಾಳಿ ನದಿಯನ್ನು ಉಳಿಸುವ ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡಿ.

ಪತ್ರಿಕಾಗೋಷ್ಠಿಯ ಸಮಯ : ಬೆಳಿಗ್ಗೆ 11 ಗಂಟೆ

ದಿನಾಂಕ: 11.04.2003

ಸ್ಥಳ: ಹೊಟೆಲ್ ನವತಾರಾ, ಕಾರವಾರ

ಧನ್ಯವಾದಗಳೊಂದಿಗೆ,

ಪಾಂಡುರಂಗ ಹೆಗಡೆ

ದಿ: 10-4-2003

ಪರಿಸರ ಸಂರಕ್ಷಣಾ ಕೇಂದ್ರ, ಚೌಕಿಮಠ. ಶಿರಸಿ (ಉ.ಕ.) ದೂರವಾಣಿ: 08384 - 425139

ಕಾಳಿ ಬಚಾವೋ ಆಂದೋಲನ

ವಾಸ್ತವ ಸಂಗತಿಗಳು

- ದಿ: ೩/೪/೨೦೦೩ ರಂದು ದಾಂಡೇಲಿಯಲ್ಲಿ ಚಳುವಳಿ ನಡೆಯಲೇ ಬಾರದೆಂದು ಕಾಗದ ಕಾರ್ಖಾನೆಯವರು ತಮ್ಮ ಹಣ, ರಾಜಕೀಯ ಪ್ರಭಾವ ಹಾಗೂ ಗೂಂಡಾ ಪಡೆಗಳನ್ನು ಬಳಸಿದರು. ಆದರೆ ಈ ಬೆದರಿಕೆಗಳಿಗೆ ಮಣಿಯದೇ ನಾವು ಚಳುವಳಿಯನ್ನು ನಡೆಸಿದೆವು. ನಾವು A.C. ಹಾಗೂ ತಹಸಿಲ್ದಾರರಿಗೆ ಮಲೀನಗೊಂಡ ಕಾಳಿಯ ಚಿತ್ರಣ ನೀಡುವುದರಲ್ಲಿ ಸಫಲರಾದೆವು.

- ನಮ್ಮ ಆಂದೋಲನದ ಮುಖ್ಯ ಉದ್ದೇಶ ಕಾಳಿಯನ್ನು ಉಳಿಸುವುದಾಗಿದೆ. ಕಾಳಿಯು ಉಳಿಯ ಬೇಕಾದರೆ ನದಿಗೆ ಅಡ್ಡವಾಗಿ ಇನ್ನು ಯಾವುದೇ ಆಣೆಕಟ್ಟು ನಿರ್ಮಾಣವಾಗಬಾರದು, ಕಾಳಿ ನದಿಯ ಜಲಾನಯನ ಪ್ರದೇಶದ ಅರಣ್ಯ ರಕ್ಷಣೆಯಾಗಬೇಕು. ಹಾಗೂ ನದಿಯ ನೀರು ಶುದ್ಧವಾಗಿರ ಬೇಕು ಹಾಗೂ ಕಾಳಿ ಕಣಿವೆಯ ನಿವಾಸಿಗಳಿಗೆ ಅಭಿವೃದ್ಧಿಯ ಲಾಭ ಹಾಗೂ ಮೂಲಭೂತ ಸೌಕರ್ಯಗಳಾದ ಸಂಪರ್ಕ, ಆರೋಗ್ಯ, ಶಿಕ್ಷಣ ತಲುಪಬೇಕು. ಕಾಳಿ ಕಣಿವೆಯಲ್ಲಿ 10,000 ಕೋಟಿ ರೂ. ಖರ್ಚಾದರೂ ಕಾಳಿಯ ಮಕ್ಕಳು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

- ಈ ಆಂದೋಲನ ಯಾವ ಕಾರ್ಖಾನೆಯ ಅಥವಾ ವಿಶೇಷ ವ್ಯಕ್ತಿಗಳ ವಿರುದ್ಧ ಅಲ್ಲ. ದಾಂಡೇಲಿಯ ಕಾಗದ ಕಾರ್ಖಾನೆಯನ್ನು ಮುಚ್ಚಬೇಕೆಂದು ನಾವು ಎಂದೂ ಕೇಳಿಲ್ಲ. ಆದರೆ ಆ ಕಾರ್ಖಾನೆಯಿಂದ ಹೊರಬಿಡುವ ತಾಜ್ಯವನ್ನು ಸಂಸ್ಕರಿಸಿ ನದಿಗೆ ಬಿಡಬೇಕು. ನದಿಗೆ ವಿಷಬೆರೆಸಬಾರದು ಎಂಬುದು ನಮ್ಮ ಆಶಯ. ಆದರೆ ಇದನ್ನು ತಿರುಚಿ ನಾವು ಕಾರ್ಖಾನೆಯನ್ನೇ ಮುಚ್ಚಿಸಲು ಕಾಳಿ ಬಚಾವೋ ಆಂದೋಲನ ಮಾಡಿರುವುದಾಗಿ ಕಾಗದ ಕಾರ್ಖಾನೆ ಹಾಗೂ ಇತರ ಪಟ್ಟಭದ್ರ ಹಿತಾಸಕ್ತಿಗಳು ವದಂತಿ ಹಬ್ಬಿಸಿ ನಮ್ಮ ವಿರುದ್ಧ ಸಮರ ಸಾರಿದ್ದಾರೆ. ಇದು ಆಧಾರ ರಹಿತ.

- ಅಂದು (ಎಪ್ರಿಲ್ ೩ ರಂದು) ನಡೆದ ಘಟನೆಗಳನ್ನು ದಾಂಡೇಲಿಯ ಪತ್ರಕರ್ತರು ತಿರಿಚಿ, ಸತ್ಯವನ್ನು ಮರೆಮಾಚುವ, ಸುಳ್ಳು ವದಂತಿಗೆ ಬೆಂಬಲಕೊಡುವ ವರದಿಯನ್ನು ನೀಡಿ ತಾವೂ ಸಹ ಕಾಳಿಗೆ ವಿಷ ಉಣಿಸುವ ಕಾಗದ ಕಾರ್ಖಾನೆಯ ಹಿತಾಸಕ್ತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ಸಾಬೀತು ಮಾಡಿದ್ದಾರೆ.

- ಕಾಳಿ ನಮ್ಮೆಲ್ಲರ ಮಾತೆ. ಈ ತಾಯಿಯನ್ನು ರಕ್ಷಿಸುವುದು ಕಾಳಿ ಬಚಾವೋ ಆಂದೋಲನದ ಉದ್ದೇಶ. ಇದರಲ್ಲಿ ಯಾವ ರಾಜಕೀಯವಿಲ್ಲ. ಕಾಳಿ ಮಾತೆಯನ್ನು ಉಳಿಸುವ ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡಿ ಎಂದು ಮಾಧ್ಯಮದವರಲ್ಲಿ ವಿನಂತಿ.

ಪಾಂಡುರಂಗ ಹೆಗಡೆ
ಕಾಳಿ ಬಚಾವೋ ಆಂದೋಲನದ ಪರವಾಗಿ

ಪತ್ರಿಕಾ ಪ್ರಕಟಣೆ
ದಿ: 11.04.2003
ಕಾರವಾರ

ಕಾಳಿ ಬಚಾವೋ ಆಂದೋಲನ

ವಾಸ್ತವ ಸಂಗತಿಗಳು

- ದಿ: ೩/೪/೨೦೦೩ ರಂದು ದಾಂಡೇಲಿಯಲ್ಲಿ ಚಳುವಳಿ ನಡೆಯಲೇ ಬಾರದೆಂದು ಕಾಗದ ಕಾರ್ಖಾನೆಯವರು ತಮ್ಮ ಹಣ, ರಾಜಕೀಯ ಪ್ರಭಾವ ಹಾಗೂ ಗೂಂಡಾ ಪಡೆಗಳನ್ನು ಬಳಸಿದರು. ಆದರೆ ಈ ಬೆದರಿಕೆಗಳಿಗೆ ಮಣಿಯದೇ ನಾವು ಚಳುವಳಿಯನ್ನು ನಡೆಸಿದೆವು. ನಾವು A.C. ಹಾಗೂ ತಹಸಿಲ್ದಾರರಿಗೆ ಮಲೀನಗೊಂಡ ಕಾಳಿಯ ಚಿತ್ರಣ ನೀಡುವುದರಲ್ಲಿ ಸಫಲರಾದೆವು.

- ನಮ್ಮ ಆಂದೋಲನದ ಮುಖ್ಯ ಉದ್ದೇಶ ಕಾಳಿಯನ್ನು ಉಳಿಸುವುದಾಗಿದೆ. ಕಾಳಿಯು ಉಳಿಯ ಬೇಕಾದರೆ ನದಿಗೆ ಅಡ್ಡವಾಗಿ ಇನ್ನು ಯಾವುದೇ ಆಣೆಕಟ್ಟು ನಿರ್ಮಾಣವಾಗಬಾರದು, ಕಾಳಿ ನದಿಯ ಜಲಾನಯನ ಪ್ರದೇಶದ ಅರಣ್ಯ ರಕ್ಷಣೆಯಾಗಬೇಕು. ಹಾಗೂ ನದಿಯ ನೀರು ಶುದ್ಧವಾಗಿರ ಬೇಕು ಹಾಗೂ ಕಾಳಿ ಕಣಿವೆಯ ನಿವಾಸಿಗಳಿಗೆ ಅಭಿವೃದ್ಧಿಯ ಲಾಭ ಹಾಗೂ ಮೂಲಭೂತ ಸೌಕರ್ಯಗಳಾದ ಸಂಪರ್ಕ, ಆರೋಗ್ಯ, ಶಿಕ್ಷಣ ತಲುಪಬೇಕು. ಕಾಳಿ ಕಣಿವೆಯಲ್ಲಿ 10,000 ಕೋಟಿ ರೂ. ಖರ್ಚಾದರೂ ಕಾಳಿಯ ಮಕ್ಕಳು ಇಂದಿಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

- ಈ ಆಂದೋಲನ ಯಾವ ಕಾರ್ಖಾನೆಯ ಅಥವಾ ವಿಶೇಷ ವ್ಯಕ್ತಿಗಳ ವಿರುದ್ಧ ಅಲ್ಲ. ದಾಂಡೇಲಿಯ ಕಾಗದ ಕಾರ್ಖಾನೆಯನ್ನು ಮುಚ್ಚಬೇಕೆಂದು ನಾವು ಎಂದೂ ಕೇಳಿಲ್ಲ. ಆದರೆ ಆ ಕಾರ್ಖಾನೆಯಿಂದ ಹೊರಬಿಡುವ ತಾಜ್ಯವನ್ನು ಸಂಸ್ಕರಿಸಿ ನದಿಗೆ ಬಿಡಬೇಕು. ನದಿಗೆ ವಿಷಬೆರೆಸಬಾರದು ಎಂಬುದು ನಮ್ಮ ಆಶಯ. ಆದರೆ ಇದನ್ನು ತಿರುಚಿ ನಾವು ಕಾರ್ಖಾನೆಯನ್ನೇ ಮುಚ್ಚಿಸಲು ಕಾಳಿ ಬಚಾವೋ ಆಂದೋಲನ ಮಾಡಿರುವುದಾಗಿ ಕಾಗದ ಕಾಖಾನೆ ಹಾಗೂ ಇತರ ಪಟ್ಟಭದ್ರ ಹಿತಾಸಕ್ತಿಗಳು ವದಂತಿ ಹಬ್ಬಿಸಿ ನಮ್ಮ ವಿರುದ್ಧ ಸಮರ ಸಾರಿದ್ದಾರೆ. ಇದು ಆಧಾರ ರಹಿತ.

- ಅಂದು (ಎಪ್ರಿಲ್ ೩ ರಂದು) ನಡೆದ ಘಟನೆಗಳನ್ನು ದಾಂಡೇಲಿಯ ಪತ್ರಕರ್ತರು ತಿರಿಚಿ, ಸತ್ಯವನ್ನು ಮರೆಮಾಚುವ, ಸುಳ್ಳು ವದಂತಿಗೆ ಬೆಂಬಲಕೊಡುವ ವರದಿಯನ್ನು ನೀಡಿ ತಾವೂ ಸಹ ಕಾಳಿಗೆ ವಿಷ ಉಣಿಸುವ ಕಾಗದ ಕಾರ್ಖಾನೆಯ ಹಿತಾಸಕ್ತಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ಸಾಬೀತು ಮಾಡಿದ್ದಾರೆ.

- ಕಾಳಿ ನಮ್ಮೆಲ್ಲರ ಮಾತೆ. ಈ ತಾಯಿಯನ್ನು ರಕ್ಷಿಸುವುದು ಕಾಳಿ ಬಚಾವೋ ಆಂದೋಲನದ ಉದ್ದೇಶ. ಇದರಲ್ಲಿ ಯಾವ ರಾಜಕೀಯವಿಲ್ಲ. ಕಾಳಿ ಮಾತೆಯನ್ನು ಉಳಿಸುವ ನಮ್ಮ ಪ್ರಯತ್ನಕ್ಕೆ ಬೆಂಬಲ ನೀಡಿ ಎಂದು ಮಾಧ್ಯಮದವರಲ್ಲಿ ವಿನಂತಿ.

ಪಾಂಡುರಂಗ ಹೆಗಡೆ

ಕಾಳಿ ಬಚಾವೋ ಆಂದೋಲನದ ಪರವಾಗಿ

ಪತ್ರಿಕಾ ಪ್ರಕಟಣೆ

ದಿ: 11.04.2003

ಕಾರವಾರ

ಕಾಳಿ ಬಚಾವೋ ಆಂದೋಲನ,
ಏಸವರಾಜ ನಿಲಯ, ಚೌಕಿಮಠ, ಶಿರಸಿ.

ಪತ್ರಿಕಾ ಪ್ರಕಟಣೆ

ಕಾಳಿನದಿ ದಡದಲ್ಲಿ ಅಕ್ರಮ ಉಸುಕು ಸಾಗಾಟ ಸ್ಥಗಿತ

ಕಾಳಿಯ ಉಪನದಿಯಾದ ಪಾಂಡರಿ ನದಿಯ ತಟದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಅಕ್ರಮ ಉಸುಕು ಸಾಗಾಟ ಸ್ಥಗಿತಗೊಂಡಿದೆ. ಇತ್ತೀಚಿನ ದಿನಗಳಲ್ಲಿ ಕಾಳಿ ಬಚಾವೋ ಆಂದೋಲನದ ತಂಡವು ಉಸುಕು ತೆಗೆಯುವ ಕ್ಷೇತ್ರಕ್ಕೆ ಭೇಟಿ ನೀಡಿದ್ದು, ಆ ಕುರಿತು ಪತ್ರಿಕೆಗಳಲ್ಲಿ ಬಂದ ವರದಿಯನ್ನು ಗಂಭೀರವಾಗಿ ಪರಿಗಣಿಸಿ ಅಕ್ರಮವಾಗಿ ನಡೆಯುತ್ತಿದ್ದ ಉಸುಕು ತೆಗೆಯುವ ಕೆಲಸವನ್ನು ನಿಲ್ಲಿಸುವಂತೆ ಅರಣ್ಯ ಮಂತ್ರಿಗಳಿಂದ ಸೂಚನೆ ಬಂದಿರುವುದಾಗಿ ತಿಳಿದು ಬಂದಿದೆ. ವರದಿ ಬಂದ ನಂತರ ಅರಣ್ಯ ಇಲಾಖೆಯ ಸಿಬ್ಬಂದಿಗಳು ಪಾಂದೇವಾಡಿ, ಇಳಯಾದಾಬೆಗಳಲ್ಲಿ ಕ್ರಮ ಜರುಗಿಸಿ ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ರಾಶಿಯನ್ನು ಹೊಂಡ ತೋಡಿ ಬಂದ ಮಾಡಿದ್ದಾರೆ.

ದಿನಾಂಕ 6 -5 -2003 ರಂದು ಕೇಂದ್ರ ಪರಿಸರ ಸಚೀವಾಲಯದ ಅಧಿಕಾರಿ ಶ್ರೀ ಉದಯ ಭಾಸ್ಕರ ಅವರು ಪಾಂದೇವಾಡಿಗೆ ಭೇಟಿ ನೀಡಿ ಉಸುಕು ತೆಗೆಯುವ ಪ್ರದೇಶವನ್ನು ಪರಿಶೀಲಿಸಿದರು. ಆ ಸಮಯದಲ್ಲಿ ಅರಣ್ಯ ಇಲಾಖೆಯ ACF ಎಚ್. ಬಿ. ನಾಯ್ಕ ಹಾಗೂ ಬುಗಲ್‌ಬೇಟ, ತಿನೈಘಾಟ್ ವಲಯಗಳ ಅರಣ್ಯ ಅಧಿಕಾರಿಗಳು ಹಾಜರಿದ್ದು ಇಲಾಖೆಯು ಕೈಗೊಂಡಿರುವ ಕ್ರಮದ ಬಗ್ಗೆ ವಿವರಿಸಿದರು. ಉಸುಕು ತೆಗೆಯುತ್ತಿರುವುದು ಖಾಸಗಿ ಭೂಮಿ, ಅರಣ್ಯ ಭೂಮಿ ಅಲ್ಲವೆಂದು ಅರಣ್ಯ ಇಲಾಖೆಯವರು ಪ್ರತಿಪಾದಿಸಿದರು. ಆದರೆ ಪರಿಸರ ತಂಡದವರು ಇದು ಅರಣ್ಯ ಪ್ರದೇಶವೆಂದು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರು.

ಅರಣ್ಯ ಇಲಾಖೆಯ ಸಿಬ್ಬಂದಿ ಈ ಪ್ರದೇಶ ಕರ್ನಾಟಕ ವಿದ್ಯುತ್ ನಿಗಮಕ್ಕೆ ಸೇರಿದ್ದು, ಇದು ಸೂಪಾ ಜಲಾಶಯದ ಮುಳುಗಡೆ ಪ್ರದೇಶವೆಂದು ಹೇಳಿದರು. ಆದುದರಿಂದ ಇದು ಅರಣ್ಯ ಇಲಾಖೆಯ ಹಿಡಿತದಲ್ಲಿ ಇಲ್ಲವಾದ್ದರಿಂದ ತಾವು ಉಸುಕು ತಗೆಯುವಾಗ ಕ್ರಮ ಜರುಗಿಸಿಲ್ಲ ಎಂದರು. ಆದರೆ ಉಚ್ಚ ಅಧಿಕಾರಿ ಉದಯ ಭಾಸ್ಕರ ಅವರು ಕರ್ನಾಟಕ ವಿದ್ಯುತ್ ನಿಗಮಕ್ಕೆ ಮುಳುಗಡೆಗಾಗಿ ನೀಡಲಾದ ಅರಣ್ಯ ಪ್ರದೇಶವನ್ನು ಬೇರೆ ಉದ್ದೇಶಕ್ಕಾಗಿ (ಉಸುಕು ತೆಗೆಯಲು) ಬಳಸಿಕೊಳ್ಳಲು ಅರಣ್ಯ ಕಾಯಿದೆಯ ಅಡಿಯಲ್ಲಿ ಅವಕಾಶವಿಲ್ಲ, ಇದು ಕಾಯಿದೆಯ ಉಲ್ಲಂಘನೆಯಾಗಿದೆ. ಇದಲ್ಲದೇ ಪಾಂಡರಿ ನದಿಯು ಅರಣ್ಯ ಪ್ರದೇಶದಲ್ಲಿ ಹರಿಯುತ್ತಿದ್ದು, ಅದು ಅರಣ್ಯ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವುದರಿಂದ ಅದರ ರಕ್ಷಣೆಯ ಜವಾಬ್ದಾರಿ ಇಲಾಖೆಯದು ಎಂದು ಸ್ಪಷ್ಟಪಡಿಸಿದರು.

ಇತ್ತೀಚಿನ ದಿನಗಳಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಅಕ್ರಮ ಮರಳು ತೆಗೆಯುವ ಕೆಲಸ ತಾತ್ಕಾಲಿಕವಾಗಿ ನಿಂತಿದೆ. ಆದರೆ ಕಾಳಿಯ ಒಡಲನ್ನು ಬರಡು ಮಾಡುವ ಈ ಕೆಲಸಕ್ಕೆ ಶಾಶ್ವತವಾದ ತಡೆ ಬರಬೇಕಾದದ್ದು ಅನಿವಾರ್ಯ. ಕಾಳಿ ಬಚಾವೋ ಆಂದೋಲನದ ಪರವಾಗಿ ಈ ಪ್ರದೇಶಕ್ಕೆ ಭೇಟಿ ನೀಡುವಂತೆ ಪರಿಸರ ಇಲಾಖೆಗೆ ಫ್ಯಾಕ್ಸ ಸಂದೇಶ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅಧಿಕಾರಿಗಳ ವೀಕ್ಷಣಾ ಕಾರ್ಯಕ್ರಮದಲ್ಲಿ ನಾಟಿ ವೈದ್ಯ ಶ್ರೀಧರ ದೇಸಾಯಿ, ಬಿ ಜಿ. ಹೆಗಡೆ ಗೇರಾಳ ಹಾಗೂ ಕಾಳಿ ಬಚಾವೋ ಆಂದೋಲನದ ಪಾಂಡುರಂಗ ಹೆಗಡೆ ಜೊತೆಯಲ್ಲಿದ್ದು ಪರಿಸ್ಥಿತಿಯ ಬಗ್ಗೆ ವಿವರಣೆ ನೀಡಿದರು.

ಕಾಳಿ ಬಚಾವೋ ಆಂದೋಲನದ ಪರವಾಗಿ

ದಿ: ೯-೫-೨೦೦೩


ಕಾಳಿ ಕಣಿವೆಯಲ್ಲಿ ಪಾದಯಾತ್ರೆ
ಗ್ಯಾಸಲ್ ರಾಕ್
ಬಾಂದಪಾಡಿ
ಗಣೇಶ ಗುಡಿ
ದಾಂಡೇಲಿ
ಡಿಗ್ಗಿ
ಸುಪ್ತಾ ಜಲಾಶಯ
ಬೊಮ್ಮನಹಳ್ಳಿ ಜಲಾಶಯ
ಕುಶಾವಳಿ
ಗೋವಾ ರಸ್ತೆ
ಕುಂಬಾರವಾಡಾ
ಕುಂಡಲ ಡ್ಯಾಮ್
ಅಂಬಿಕಾನಗರ
ನಾಗಝರಿ ವಿದ್ಯುದಾಗಾರ
ಗುಂದ
ಉಳವಿ
ಅಣಶಿ
ಶಿವಪುರ
ಗಾತೊಡ್ಡಿ ಜಲಪಾತ
ಸುಳಗೇರಿ
ಕದ್ರಾ
ಕೊಡಸಳ್ಳಿ ಡ್ಯಾಮ್
ದೇವಗಾರು
ಮಲ್ಲಾಪುರ
ಕದ್ರಾ ಜಲಾಶಯ
ಕೈಗಾ ಅಣುಶಕ್ತಿಘಾವರ
ಕಾರವಾರ
0 5 10
ಕಿಮೀ
ಪಾದಯಾತ್ರೆಯ ಮಾರ್ಗ
ರಸ್ತೆ
ಕಾಳಿ ನದಿ/ ಜಲಾಶಯಗಳು
ಉತ್ತರ ಕನ್ನಡ
ಬಾಲಚಂದ್ರ ಹೆಗಡೆ ಸಾಯಿಮನೆ

ಕಾಳಿ ಬಚಾವೋ ಆಂದೋಲನ

ಮೂರನೇ ವಾರ್ಷಿಕೋತ್ಸವ

ಎಪ್ರೀಲ್ ೩, ೨೦೦೫

ಸ್ಥಳ: ದಂಡಕಾರಣ್ಯ ಗಾರ್ಡನ್ ದಾಂಡೇಲಿ

ಕಾಳಿ ನದಿಯ ಉಳಿವಿಗಾಗಿ 2003ರ ಎಪ್ರೀಲ್ 3ರಂದು ದಾಂಡೇಲಿಯ ಕಾಗದ ಕಾರ್ಖಾನೆಯ ಬಳಿ ಮಾಲಿನ್ಯವನ್ನು ನದಿಗೆ ಬಿಡುತ್ತಿರುವುದರ ವಿರುದ್ಧ ಪ್ರತಿಭಟನೆ ಮಾಡುವ ಮೂಲಕ ಕಾಳಿ ಬಚಾವೋ ಆಂದೋಲನ ಪ್ರಾರಂಭವಾಯಿತು.
ಅಂದಿನಿಂದ ಇಂದಿನವರೆಗೆ ಕಾಳಿ ನದಿಯ ರಕ್ಷಣೆಗಾಗಿ, ಕಾಳಿ ಮಕ್ಕಳ ಒಳಿತಿಗಾಗಿ ಅನೇಕ ಹೋರಾಟಗಳನ್ನು ಆಂದೋಲನ ಸಂಘಟಿಸಿದೆ. ಕಾಳಿ ಕಣಿವೆಯ ಜನರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಕಳೆದ ಎರಡು ವರ್ಷಗಳಲ್ಲಿ ಆಂದೋಲನದ ಸತತ ಹೋರಾಟದ ಪಲವಾಗಿ

- *ಕಾಳಿ ನದಿಯ ಉಪ ನದಿಗಳ ದಡದಲ್ಲಿ ನಡೆಯುತ್ತಿದ್ದ ಉಸುಕಿನ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ.*
- *ಮಾವಳಂಗಿ ಬಳಿ ನಿರ್ಮಿಸಲು ಉದ್ದೇಶಿಸಿದ್ದ ಕಿರು ಜಲ ವಿದ್ಯುತ್ ಯೋಜನೆಯನ್ನು ಕೈ ಬಿಡಲಾಗಿದೆ.*
- *ಮಾಲಿನ್ಯದಿಂದ ತೊಂದರೆಗೀಡಾದ ಹಳ್ಳಿಗಳಿಗೆ ಕಾಗದ ಕಾರ್ಖಾನೆಯು ಟ್ಯಾಂಕರ್ ಮೂಲಕ ಕುಡಿಯುವ ನೀರು ಪೋರೈಸುತ್ತಿದೆ.*

ಆದರೆ ಕಾಳಿಯ ಸಮಸ್ಯೆಗಳಿಗೆ ಇನ್ನೂ ಪರಿಹಾರ ದೊರಕಿಲ್ಲ. ಕಾಗದ ಕಾರ್ಖಾನೆ ನದಿಗೆ ಬಿಡುತ್ತಿರುವ ತ್ಯಾಜ್ಯ ಸಂಸ್ಕರಿಸಿ ಬಿಡುತ್ತಿರುವುದಾಗಿ ಹೇಳುತ್ತಿದ್ದರೂ ಇದು ಸುಳ್ಳು ಎಂಬುದು ಎಲ್ಲರಿಗೂ ತಿಳಿದಿದೆ. ಕಾಳಿ ಇಂದಿಗೂ ವಿಷಪೂರಿತವಾಗಿದೆ.
ಬಡ ಜನರ ಜಾನುವಾರುಗಳು ಕಲುಷಿತ ನೀರು ಕುಡಿದು ಅನಾರೋಗ್ಯ ಪೀಡಿತವಾಗುವುದು ತಪ್ಪಿಲ್ಲ.
ಮಾವಳಂಗಿ ಯೋಜನೆಯ ಪುನಃ ಜಾರಿಗೆ ತರಲು ಒತ್ತಡಗಳು ಹೆಚ್ಚುತ್ತಿವೆ.
ಕಾಳಿ ಬಚಾವೋ ಆಂದೋಲನದ ಮೂರನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕಾಳಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸುವ ಸಲುವಾಗಿ ಚರ್ಚಿಸಲು ಸಭೆಯನ್ನು ಏರ್ಪಡಿಸಲಾಗಿದೆ.
ಕಾಳಿ ನದಿಯ ಮತ್ತು ಕಾಳಿ ಅವಲಂಬಿತ ಜನರ ಒಳಿತಿಗಾಗಿ ಏನೇನು ಮಾಡಲು ಸಾಧ್ಯ ಎಂಬುದನ್ನು ಈ ಸಭೆಯಲ್ಲಿ ಚರ್ಚಿಸಬೇಕಾಗಿದೆ.
ತಾವೆಲ್ಲ ಸಭೆಗೆ ಆಗಮಿಸಿ ಕಾಳಿ ಬಚಾವೋ ಆಂದೋಲನವನ್ನು ಬಲಗೊಳಿಸಲು ತಮ್ಮ ಅಮೂಲ್ಯ ಸಲಹೆ ಸೂಚನೆ ನೀಡಬೇಕಾಗಿ ವಿನಂತಿ

ಕಾರ್ಯಕ್ರಮ ವಿವರ
ಬೆಳಿಗ್ಗೆ 10 ಗಂಟೆಗೆ ದಾಂಡೇಲಿಯಪ್ಪ ದೇವಸ್ಥಾನದಿಂದ ಮೆರವಣಿಗೆ
ಬೆಳಿಗ್ಗೆ 12 ಗಂಟೆಗೆ ಸಭೆ (ದಂಡಕಾರಣ್ಯದಲ್ಲಿ)

ದಯವಿಟ್ಟು ಬನ್ನಿ

ಕಾಳಿ ಬಚಾವೋ ಆಂದೋಲನ
ಬಸವರಾಜ ನಿಲಯ
ಚೌಕಿಮಠ
ಶಿರಸಿ –581401
ದೂರವಾಣಿ: 08384–225139

ಕಾಳಿ ಬಚಾವೂ ಆಂದೋಲನ

ಪತ್ರಿಕಾ ಪ್ರಕಟಣೆ

ಕಾಳಿ ನದಿಯ ಸಮಸ್ಯೆ ಬಗೆ ಹರಿಸಲು ಬಹುಗುಣ ಕರೆ

ವೆಸ್ಟಕೋಸ್ಟ ಪೇಪರ್ ಮಿಲ್ಲು ಹೊರ ಬಿಡುತ್ತಿರುವ ತ್ಯಾಜ್ಯದಿಂದಾಗಿ ಕಲುಷಿತಗೊಂಡಿರುವ ಕಾಳಿನದಿಯ ಮತ್ತು ಅದರಿಂದುಂಟಾಗಿರುವ ಜನ ಜೀವನದ ಮೇಲಿನ ದುಷ್ಪರಿಣಾಮವು ತುಂಬಾ ವಿನಾಶಕಾರಿಯಾಗಿದೆ. ಜನ ಸಾಮಾನ್ಯರ ಪ್ರಾಣ ಮತ್ತು ಆಸ್ತಿಯನ್ನು ರಕ್ಷಿಸುವ ಮೂಲಭೂತ ಹೊಣೆ ಸಂಬಂಧಪಟ್ಟ ಸರ್ಕಾರದ್ದಾಗಿರುತ್ತದೆ. ಈ ವಿಷಯವನ್ನು ನಿರ್ಲಕ್ಷಿಸಿದರೆ ಅದನ್ನು ನಮ್ಮ ಜನತಂತ್ರದ ವೈಫಲ್ಯವೆಂದೇ ಪರಿಗಣಿಸಬೇಕಾಗುತ್ತದೆ.

ಕಾಳಿ ಬಚಾವೋ ಆಂದೋಲನವು ಜನರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಲಿ ಎಂದು ಚಿಪ್ಕೋ ನೇತಾರ ಶ್ರೀ ಸುಂದರಲಾಲ ಬಹುಗುಣರವರು ಕಾಳಿ ಬಚಾವೋ ಆಂದೋಲನಕ್ಕೆ ಕಳುಹಿಸಿದ ತಮ್ಮ ಫ್ಯಾಕ್ಸ ಸಂದೇಶದಲ್ಲಿ ತಿಳಿಸಿದ್ದಾರೆ.

ಕಾಳಿ ಬಚಾವೋ ಆಂದೋಲನದ ಮೂರನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ದಾಂಡೇಲಿಯ ಪೇಪರ್ ಮಿಲ್ ಪ್ರಾಯೋಜಿತ ಸಮಾಜ ವಿರೋಧಿ ಶಕ್ತಿಗಳು ಶಾಂತಿ ಭಂಗಕ್ಕೆ ಯತ್ನಿಸಿದ ವಿಷಯವನ್ನು ತಿಳಿದು ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಕಲುಷಿತ ನದಿಯ ಪಾತ್ರದ ಜನರ ಬದುಕಿನ ಸಮಸ್ಯೆಗಳನ್ನು ನಿವಾರಿಸುವಲ್ಲಿ ಕರ್ನಾಟಕದ ಶಾಸಕಾಂಗ, ಮಾಧ್ಯಮಗಳು ಮತ್ತು ಚಿಂತಕರು ನಿರ್ಣಾಯಕ ಪಾತ್ರ ವಹಿಸಬೇಕೆಂದು ಅವರು ವಿನಂತಿಸಿಕೊಂಡಿದ್ದಾರೆ.

ಕಾಳಿ ಬಚಾವೋ ಆಂದೋಲನ **15–04–2005**

Kali file

04-06-2003

ಪತ್ರಿಕಾ ಗೋಷ್ಠಿ

ಆಮಂತ್ರಣ

ಆರು ದೊಡ್ಡ ಅಣೆಕಟ್ಟುಗಳು, ಎರಡು ಅಣುಶಕ್ತಿ ಘಟಕ, ಕಾಗದ ಕಾರ್ಖಾನೆ, ಹಾಗೂ ಏಳನೆಯ ಅಣೆಕಟ್ಟಿನ ತಯಾರಿ ?

ಕಾಳಿ ನದಿಯನ್ನು ಉಳಿಸುವ ಸಲುವಾಗಿ ಬೆಂಗಳೂರಿನಲ್ಲಿ ಕಾಳಿ ಬಚಾವೋ ಆಂದೋಲನ ಹಾಗೂ ಇತರ ಸಂಘ ಸಂಸ್ಥೆಗಳಿಂದ ಕಾಳಿ ಕೊಳ್ಳದಿಂದ ಬುಡಕಟ್ಟು ಜನಾಂಗದವರ ಜೊತೆಗೂಡಿ ವಿನೂತನ ಪ್ರತಿಭಟನೆ

ಮಾನ್ಯರೇ,

ಉತ್ತರ ಕನ್ನಡದ ಪಶ್ಚಿಮ ಘಟ್ಟದಲ್ಲಿ ಹರಿಯುವ 184 ಕಿ.ಮಿ. ಉದ್ದದ ಕಾಳಿಗೆ ಅಡ್ಡವಾಗಿ ಆಗಲೇ 6 ದೊಡ್ಡ ಅಣೆಕಟ್ಟುಗಳ ನಿರ್ಮಾಣವಾಗಿದೆ. ಒಟ್ಟೂ 1200 MW ವಿದ್ಯುಚ್ಛಕ್ತಿಯನ್ನು ಈ ಅಣೆಕಟ್ಟಿನಿಂದ ಉತ್ಪಾದಿಸಲಾಗುತ್ತಿದೆ. ಇದರ ಜೊತೆಯಲ್ಲಿ ಕಾಳಿಯ ದಡದಲ್ಲಿ ವಿವಾದಿತ ಕೈಗಾ ಅಣುಶಕ್ತಿ ಘಟಕದಿಂದ 440 MW ವಿದ್ಯುತ್ ಉತ್ಪಾದನೆ ಆಗುತ್ತಿದೆ. ಈಗ ಮುರುಡೇಶ್ವರ ವಿದ್ಯುತ್ ನಿಗಮದವರು ಏಳನೆಯ ಅಣೆಕಟ್ಟಿನ ನಿರ್ಮಾಣ ಕೆಲಸಕ್ಕೆ ಪ್ರಯತ್ನ ನಡೆಸಿರುತ್ತಾರೆ.

ಕೇವಲ 17MW ವಿದ್ಯುಚ್ಛಕ್ತಿಯನ್ನು ಉಪಯೋಗಿಸುವ ಉತ್ತರ ಕನ್ನಡ ಹಾಗೂ ಕಾಳಿ ಕಣಿವೆಯ ಜನರಿಗೆ ಈ 7ನೆಯ ಅಣೆಕಟ್ಟಿನ ಅವಶ್ಯಕತೆ ಇಲ್ಲ. ಆದರೆ 210 ಹೆಕ್ಟರ್ ಅರಣ್ಯ ಕಬಳಿಸುವ ಈ ಯೋಜನೆಯ ಬಗ್ಗೆ ರಾಜಕಾರಣಿಗಳು ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ದಾಂಡೇಲಿಯಲ್ಲಿ ಕಾಗದ ಕಾರ್ಖಾನೆಯಿಂದ ಹೊರಬರುವ ತ್ಯಾಜ್ಯ ಕಾಳಿಗೆ ವಿಷವನ್ನು ಬೆರೆಸುತ್ತಿದ್ದರೂ ಸಹ ಸರ್ಕಾರ ಯಾವ ಕ್ರಮ ಕೈಗೊಂಡಿಲ್ಲ.

ರಾಜ್ಯ ಸರ್ಕಾರವು ಕಾವೇರಿ ಹಾಗೂ ಕೃಷ್ಣಾನದಿಯ ಬಗ್ಗೆ ಗಮನ ಹರಿಸಿದೆ. ಆದರೆ ಸಾಯುತ್ತಿರುವ ಕಾಳಿಯತ್ತ ಗಮನ ಹರಿಸಿಲ್ಲ. ಕಾಳಿಯ ಮಕ್ಕಳು ಜಾಗೃತರಾಗಿದ್ದಾರೆ. ಸುಂದರ್‌ಲಾಲ್ ಬಹುಗುಣ ಅವರ ನೇತೃತ್ವದಲ್ಲಿ ಕಾಳಿ ಬಚಾವೋ ಆಂದೋಲನ ಆರಂಭವಾಗಿದೆ. ಆದರೆ ಈ ಚಳುವಳಿಯ ಕರೆಗೆ ಸರ್ಕಾರ ಗಮನ ನೀಡಿಲ್ಲ. ಅಕ್ರಮ ಗಣಿಗಾರಿಕೆ ಹಾಗೂ ಹೊಸ ಅಣೆಕಟ್ಟಿನ ನಿರ್ಮಾಣ ಮುಂದುವರೆದಿದೆ.

ಪರಿಸರ ದಿನಾಚರಣೆಯ ಸಂದರ್ಭದಲ್ಲಿ ಕಾಳಿಯ ಆಳಲನ್ನು ಜನರಿಗೆ ಹಾಗೂ ಸರ್ಕಾರದ ಗಮನಕ್ಕೆ ತರುವ ಉದ್ದೇಶದಿಂದ ಕಾಳಿ ಬಚಾವೋ ಆಂದೋಲನವು ಬೆಂಗಳೂರಿನಲ್ಲಿ ಜೂನ್ 5, 2003ರಂದು ವಿನೂತನ ರ್‍ಯಾಲಿಯನ್ನು ಏರ್ಪಡಿಸಿದೆ. ಕಾಳಿಕೊಳ್ಳದ ಬುಡಕಟ್ಟು ಜನಾಂಗದವರಾದ ಸಿದ್ದಿ, ಗೌಳಿ ಹಾಗೂ ಕುಣಬಿ ಜನಾಂಗದವರು ಪ್ರಥಮ ಬಾರಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಿಗೆ ಮನವಿ ನೀಡಲಿದ್ದಾರೆ.

ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಒಂದಾಗಿರುವ ತಮ್ಮ ಪತ್ರಿಕೆಯು ಈ ಕಾರ್ಯಕ್ರಮದ ವರದಿ ಪ್ರಕಟಿಸಿ ಕಾಳಿಯ ಕೂಗನ್ನು ರಾಜ್ಯದ ಜನತೆಗೆ ತಲುಪಿಸಲು ಸಹಾಯ ಮಾಡುವಂತೆ ತಮ್ಮಲ್ಲಿ ವಿನಂತಿ.

ಇದರ ಜೊತೆಗೆ ಈ ಕುರಿತು ಪತ್ರಿಕಾಗೋಷ್ಠಿಯನ್ನು ಏರ್ಪಡಿಸಿದ್ದೇವೆ. ವಿವರ ಕೆಳಗಿದೆ.

ದಿನಾಂಕ : 5-6-2003, ಸ್ಥಳ : ಪ್ರೆಸ್ ಕ್ಲಬ್, ಬೆಂಗಳೂರು. ಸಮಯ : ಬೆಳಿಗ್ಗೆ 11.30.

ಧನ್ಯವಾದಗಳೊಂದಿಗೆ,

ಪಾಂಡುರಂಗ ಹೆಗಡೆ

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ಲಿಯೋ ಸಲ್ದಾನ

ಪರಿಸರ ಆಸಕ್ತರ ಗುಂಪು

ಬೆಂಗಳೂರು

Kali file

Parisara Samrakshana Kendra
Hulemalgi Building, Chowkimath
Sirsi (Uttara Kannada Dt.)
Karnataka 581401
Tel: 91-8384 425139/425039
Fax: 91-4435450/ 427839
Email: appiko@sancharnet.in

Environment Support Group ®
S-3, Rajashree Apartments, 18/57,
1st Main Road, S. R. K. Gardens,
Jayanagar, Bannerghatta Road,
Bangalore 560 041. INDIA
Telefax: 91-80-6341977/6531339/6534364
Email: esg@bgl.vsnl.net.in

PRESS INVITATION

6 MAJOR DAMS, A NUCLEAR POWER PLANT, A PAPER MILL AND NOW ANOTHER DAM?

KALI BACHAO ANDOLAN TO PROTEST IN BANGALORE ON *WORLD ENVIRONMENT DAY* TO SAVE WHAT LITTLE IS LEFT OF THE KALI RIVER

04 June 2003

Dear Sir or Madam,

The 184 kms. long Kali River in the Uttara Kannada district of the Western Ghats region in Karnataka, already has 6 major Hydroelectric dams. In addition, the river supports the only nuclear plant in a forest in the world - the controversial Kaiga Nuclear Power Station. Over 1200 MW of power is already generated from these dams, and an additional 440 MW from Kaiga. There is now a serious attempt to build a 7th dam on the Kali River, near Dandeli, by Murdeshwar Power Corporation Limited (MPCL).

With only about 17 MW of electricity being consumed in the Uttara Kannada district, it is clear that there is very little benefit that the people of the Kali Valley have gained from so much "development". The MPCL dam will submerge over 210 ha and 8 kms of the last remaining stretch of Kali that remains undisturbed, and this when there is little that is being done to contain very serious pollution of the river by West Coast Paper Mills at Dandeli.

The Government of Karnataka has invested enormous administrative and political time on issues relating to Kaveri and Krishna. Little or no attention has been paid to protecting the ecology and people of Kali, however. Local communities are tired of the dam building, the promises of "development", and the high pitch on how more electricity generated equals "development". They want none of this.

During February this year, Sunderlal Bahuguna launched KALI BACHAO ANDOLAN. Pandurang Hegde lead a Padayatra for three weeks with various supporters along the length of the Kali. There has been overwhelming support to this effort. Yet no effective response from the Government to stop further dams, pollution and sand mining; three major threats to the river.

Tribals from the Kali Valley and representatives from various organisations have now decided to bring their protest to Bangalore, so their voices are heard, and true commitment is demonstrated by the Government to protect this ecologically sensitive and culturally diverse region. **A protest will be held at Mahatma Gandhi Statue at 10 am on 5th June, World Environment Day, by KBA and a memorandum submitted to the Chief Minister.** We will be grateful if you will cover this event.

In order to substantially address the various issues about the Kali with the media, we have organized a Press Conference. Affected tribal community representatives and convernors of KBA will address the Press Conference. The details of the conference are as follows:

Venue	**:**	**Press Club of Bangalore**
Date	**:**	**05 June 2003**
Time	**:**	**11.30 am.**

We request you to participate in the proceedings and thank you for your cooperation and support.

Yours sincerely,

Pandurang Hegde
Parisara Samrakshana Kendra
Sirsi

Leo F. Saldanha
Environment Support Group
Bangalore

Kali file

Parisara Samrakshana Kendra
Hulemalgi Building, Chowkimath
Sirsi (Uttara Kannada Dt.)
Karnataka 581401
Tel: 91-8384 425139/425039
Fax: 91-4435450/ 427839
Email: appiko@sancharnet.in

Environment Support Group ®
S-3, Rajashree Apartments, 18/57,
1st Main Road, S. R. K. Gardens,
Jayanagar, Bannerghatta Road,
Bangalore 560 041. INDIA
Telefax: 91-80-6341977/6531339/6534364
Email: esg@bgl.vsnl.net.in

04-06-2003

ಪತ್ರಿಕಾ ಪಕಟಣೆ
'ನಗರದಲ್ಲಿ ಇಂದು' ಅಂಕಣದಲ್ಲಿ

ವಿಷಯ : ಕಾಳಿ ಬಚಾವೋ ಆಂದೋಲನದ ಕುರಿತು ಪ್ರಕಟಣೆಯ ಬಗ್ಗೆ

ಮಾನ್ಯರೇ,

ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜೂನ್ 5, 2003 ರಂದು ಬೆಂಗಳೂರಿನಲ್ಲಿ ವಿವಿಧ ಸಂಘಟನೆಗಳು ಜೊತೆಗೂಡಿ ಕಾಳಿ ಬಚಾವೋ ಆಂದೋಲನದ ಬಗ್ಗೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಈ ಕೆಳಗಿನ ವಿವರಗಳನ್ನು ನಗರದಲ್ಲಿ ಇಂದು ಅಂಕಣದಲ್ಲಿ ಪ್ರಕಟಿಸಬೇಕೆಂದು ವಿನಂತಿ.

ಕಾಳಿ ಬಚಾವೋ ಆಂದೋಲನ

ಬೆಳಗ್ಗೆ 10.00 ಗಂಟೆಗೆ, ಮಹಾತ್ಮ ಗಾಂಧಿ ಪ್ರತಿಮೆ ಎದುರು, ಮಹಾತ್ಮ ಗಾಂಧಿ ರಸ್ತೆ, ಬುಡಕಟ್ಟು ಜನಾಂಗ ಹಾಗೂ ವಿವಿಧ ಸಂಘಟನೆಗಳಿಂದ ಪ್ರತಿಭಟನಾ ರ್ಯಾಲಿ.

ಸಂಜೆ 5.30 ಕ್ಕೆ, '**ಸಾಯುತ್ತಿರುವ ಕಾಳಿ**', ಕಿರುಚಿತ್ರ ಪ್ರದರ್ಶನ

ಸ್ಥಳ : ಫಿರೋಜ್ ಎಸ್ಟೇಟ್ ಏಜೆನ್ಸಿ, ಚಂದ್ರಿಕಾ ಹೋಟೆಲ್ ಎದುರುಗಡೆ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು.

ಸಂಘಟಕರು : ಪರಿಸರ ಆಸಕ್ತರ ಗುಂಪು (6341977) ಹಾಗೂ ಪೆಡಸ್ಟ್ರಿಯನ್ ಪಿಚ್ಕರ್ಸ್ (31812691)

ಧನ್ಯವಾದಗಳೊಂದಿಗೆ,

ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ಲಿಯೋ ಸಲ್ದಾನ
ಪರಿಸರ ಆಸಕ್ತರ ಗುಂಪು
ಬೆಂಗಳೂರು

Parisara Samrakshana Kendra
Hulemalgi Building, Chowkimath
Sirsi (Uttara Kannada Dt.), 581401
Tel: 91-8384-425139/425039
Fax: 91-8384-427839/4435450
Email: appiko@sancharnet.in

Environment Support Group ®
S-3, Rajashree Apartments
18/57, 1st Main Road S. R. K. Gardens,
Jayanagar, Bangalore 560 041
Telefax: 91-80-6341977/6531339/65334364
Email: esg@bgl.vsnl.net.in

Kalifice

ಪತ್ರಿಕಾ ಪ್ರಕಟಣೆ

ಚಿಪ್ಕೊ ಚಳುವಳಿಯ ನೇತಾರ ಸುಂದರಲಾಲ ಬಹುಗುಣ ರವರು ಫೆಬ್ರವರಿ 2003ರಲ್ಲಿ ಕಾಳಿ ಬಚಾವೋ ಆಂದೋಲನವನ್ನು ಆರಂಭಿಸಿದರು. ಅವರ ಸಂದೇಶ ಸ್ಪಷ್ಟವಾಗಿತ್ತು. 'ನಾವು ನದಿಗಳನ್ನು ಪೂಜಿಸುತ್ತೇವೆ. ಆದರೆ ಅವುಗಳು ಇಂದು ವಿಷಯುಕ್ತವಾಗಿದೆ. ಗಂಗೆಯ ಹಾಗೆ ಕಾಳಿ ನದಿಗೆ ವಿಷ ಬೆರೆಸಲಾಗುತ್ತಿದೆ. ಈ ಮೂಕ ನದಿಯ ಧ್ವನಿಯಾಗಿ ಕಾಳಿ ಬಚಾವೋ ಆಂದೋಲನ ಸಫಲತೆ ಸಾಧಿಸಲಿ'.

ಕಾಳಿಯ ಹರಿವು 184 ಕಿ.ಮೀ. ಈ ನದಿಗೆ ಅಡ್ಡವಾಗಿ ಆರು ಬೃಹತ್ ಆಣೆಕಟ್ಟೆಗಳ ನಿರ್ಮಾಣವಾಗಿದೆ. ಇದರ ದಡದಲ್ಲಿ ಕೈಗಾ ಆಣೆಕಟ್ಟು ಘಟಕವಿದೆ. ಇದರ ವಿಕಿರಣದ ಪರಿಣಾಮವನ್ನು ಗುಪ್ತವಾಗಿಡಲಾಗಿದೆ. ಕಾಳಿಗೆ ದಾಂಡೇಲಿಯಲ್ಲಿ ಕಾಗದ ಕಾರ್ಖಾನೆ ವಿಷ ಉಣ್ಣಿಸುವುದನ್ನು ನಾವೆಲ್ಲ ನೋಡಬಹುದಾಗಿದೆ.

ಇಷ್ಟೆಲ್ಲ ವಿನಾಶಗಳು ಸಾಲದೆಂಬಂತೆ ಈಗ ಏಳನೆಯ ಆಣೆಕಟ್ಟನ್ನು ದಾಂಡೇಲಿಯ ಹತ್ತಿರ ಮಾವಳಂಗಿಯಲ್ಲಿ ಕಟ್ಟುವ ಸಿದ್ದತೆ ನಡೆದಿದೆ. ಇದರಿಂದ ಉತ್ಪಾದಿಸಲಾಗುವ 19 MW ವಿದ್ಯುತ್ ಸಲುವಾಗಿ 210 ಹೆಕ್ಟರ್ ಅರಣ್ಯ ನಾಶವಾಗಲಿದೆ. ಇದರ ಅಂದಾಜು ವೆಚ್ಚ 200 ಕೋಟಿ. ಈ ಆಣೆಕಟ್ಟಿನಿಂದ ಅಮೂಲ್ಯವಾದ ಅರಣ್ಯ ಸಂಪತ್ತು ನಾಶವಾಗಲಿದೆ. ಆದರೆ ಮುರುಡೇಶ್ವರ ವಿದ್ಯುತ್ ನಿಗಮದವರು ಈ ಯೋಜನೆ ಆಗಲೇ ಬೇಕೆಂದು ಕಂಕಣಬದ್ದರಾಗಿದ್ದಾರೆ.

ಈ ಆಣೆಕಟ್ಟಿನ ವಿರುದ್ದ ನಡೆದ ಎರಡು ಸಾರ್ವಜನಿಕ ವಿಚಾರಣೆ (ಪಬ್ಲಿಕ್ ಹಿಯರಿಂಗ್) ಯಲ್ಲಿ ಜನರು ಇದನ್ನು ತಿರಸ್ಕರಿಸಿದ್ದಾರೆ. ಇದಕ್ಕೆ ಸಂಭವಿಸಿದ ಪರಿಸರ ಅಧ್ಯಯನ ನಡೆಸಿದ ಆರ್ನೆಸ್ಟ್ ಮತ್ತು ಯಂಗ್ ಹಾಗೂ ಟಾಟಾ ಎನರ್ಜಿ ಸಂಸ್ಥೆಯವರ ವರದಿ ಸುಳ್ಳು ಅಂಕಿ ಅಂಶಗಳನ್ನು ಮೇಲೆ ಆಧಾರವಾಗಿದ್ದನ್ನು ಪರಿಸರ ಸಂಘಟನೆಗಳು ಬಹಿರಂಗಗೊಳಿಸಿವೆ. ಇತ್ತೀಚ್ಚೆಗೆ ಫೆಬ್ರವರಿ 2003ರಲ್ಲಿ ಅರಣ್ಯ ಅಧಿಕಾರಿಗಳು ಈ ಆಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶವಾಗುವುದರಿಂದ ಇದನ್ನು ಕೈಬಿಡುವಂತೆ ಸರಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಇಷ್ಟು ಆಧಾರಗಳಿದ್ದರು ಸಹ ಈ ಆಣೆಕಟ್ಟು ನಿರ್ಮಾಣಕ್ಕೆ ಸರಕಾರದ ವಿವಿಧ ಇಲಾಖೆಗಳು ಅನುಮತಿ ನೀಡುವ ಸಿದ್ದತೆ ನಡೆಸಿವೆ.

ಪುಟ...2ಕ್ಕೆ

ಅಕ್ರಮ ಮರಳು ಸಾಗಾಣಿಕೆ ನದಿಯ ಮೂಲವನ್ನು ಬರಡಾಗಿಸುತ್ತಿದೆ. ಕಾಳಿಗೆ ದಾಂಡೇಲಿಯ ಕಾಗದ ಕಾರ್ಖಾನೆಯಿಂದ ಬಿಡುವ ವ್ಯಾಜ್ಯದಿಂದಾಗಿ ಜನ ಜೀವನ, ಜಾನುವಾರುಗಳ ಮೇಲೆ ದುಷ್ಪರಿಣಾಮ ಬೀರಿದೆ. ಆದರೆ ಈ ಮಾಲಿನ್ಯವನ್ನು ನಿಯಂತ್ರಿಸುವತ್ತ ಸರಕಾರದ ಮಾಲಿನ್ಯ ನಿಯಂತ್ರಣ ಮಂಡಳಿ ಯಾವ ಕ್ರಮವನ್ನು ಕೈಗೊಂಡಿಲ್ಲ.

ಕಾಳಿ ಬಚಾವೋ ಆಂದೋಲನಾವು ಈ ಮೇಲಿನ ವಿಷಯಗಳ ಬಗ್ಗೆ ಬುಡಕಟ್ಟು ಜನಾಂಗದವರ ಜೊತೆ ಗೂಡಿ ಧ್ವನಿ ಎತ್ತಿದೆ. ಆದರೆ ಇಲ್ಲಿಯವರೆಗೂ ಸರಕಾರ ಯಾವ ಕ್ರಮ ಕೈಗೊಂಡಿಲ್ಲ.

ಪರಿಸರ ದಿನಾಚರಣೆಯ ದಿನದಂದು ಕಾಳಿಯ ಮಕ್ಕಳು ತಮ್ಮ ಅಳಲನ್ನು ತೋಡಿಕೊಳ್ಳಲು ಬೆಂಗಳೂರಿಗೆ ಬಂದಿದ್ದಾರೆ. ಕಾವೇರಿ ಹಾಗೂ ಕೃಷ್ಣಾ ನದಿಗೆ ಸರಕಾರ ನೀಡಿದ ಮಹತ್ವವನ್ನು ಕಾಳಿ ನದಿಗೆ ನೀಡಿಲ್ಲ. ರಾಜ್ಯದ ಜನತೆಯ ಮನ-ಮನೆ ಬೆಳಗಲು 1200 MW ವಿದ್ಯುತ್ ಉತ್ಪಾದನೆ ಮಾಡುವ ಕಾಳಿ ಇಂದು ಸಾಯುತ್ತಿದೆ. ಇವರ ರಕ್ಷಣೆಗಾಗಿ ಮುಖ್ಯ ಮಂತ್ರಿಗಳಿಗೆ ಮನವಿಯನ್ನು ಅರ್ಪಿಸಿದ್ದಾರೆ.

ಮನವಿಯ ಮುಖ್ಯ ಅಂಶಗಳು :

1. ಕಾಳಿಯ ಹರಿವನ್ನು ತಡೆಯುವ ಏಳನೆಯ ಆಣೆಕಟ್ಟು ನಿರ್ಮಾಣ ಸ್ಥಗಿತಗೊಳಿಸುವುದು.
2. ದಾಂಡೇಲಿಯ ಕಾಗದ ಕಾರ್ಖಾನೆ ಬಿಡುವ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸುವಂತೆ ಸರಕಾರ ಕ್ರಮ ಕೈಗೊಳ್ಳಬೇಕು. ಈಗಾಗಲೇ ಕಾಳಿಗೆ ವಿಷ ಬೆರೆಸಿರುವವರ ವಿರುದ್ದ ಕಾನೂನು ಕ್ರಮ ಕೈಗೊಳ್ಳಬೇಕು.
3. ಕಾಳಿ ಮೂಲದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸಬೇಕು. ಈಗಾಗಲೇ ಈ ಅಕ್ರಮ ಕೆಲಸದಲ್ಲಿ ತೊಡಗಿರುವವರ ವಿರುದ್ದ ಕ್ರಮ ಜರುಗಿಸುವುದು.

ದಿನಾಂಕ : 5 ಜೂನ್ 2003 (ಪರಿಸರ ದಿನಾಚರಣೆ ದಿನ) ಬೆಂಗಳೂರು.

Donna for Vimochana

ಪಾಂಡುರಂಗ ಹೆಗಡೆ
ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ.

ಲಿಯೋ ಸಲ್ದಾನಾ
ಪರಿಸರ ಆಸಕ್ತರ ಗುಂಪು, ಬೆಂಗಳೂರು

ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ

ಪತ್ರಿಕಾ ಪ್ರಕಟಣೆ

ಅರೆಬೈಲ್: ಭೂಕುಸಿತದ ತನಿಖೆಗೆ ಆಗ್ರಹ

ಅರೆಬೈಲ್ ಘಟ್ಟ ಪ್ರದೇಶದಲ್ಲಿ ಭೂಸ್ಖಲನ ನಡೆದ ಸ್ಥಳಕ್ಕೆ ಪರಿಸರ ಸಂರಕ್ಷಣಾ ಕೇಂದ್ರದ ತಂಡವು ದಿ:1-07-2003 ರಂದು ಭೇಟಿ ಮಾಡಿ ಸ್ಥಳ ಪರಿಶೀಲನೆ ನಡೆಸಿತು.

ಸುಣಜೋಗ ಹಾಗೂ ಸಿರ್ಲೆ ಹಳ್ಳಿಗಳಲ್ಲಿ ಆಗಿರುವ ಹಾನಿ ಹಾಗೂ ಸುತ್ತಮುತ್ತಲಿನ ಸ್ಥಳಗಳನ್ನು ಭೇಟಿ ಮಾಡಿ ಜನರ ಜೊತೆ ಚರ್ಚೆ ನಡೆಸಿ ಈ ಭೂಸ್ಖಲನಕ್ಕೆ ಕಾರಣವನ್ನು ತಿಳಿದು ಕೊಳ್ಳಲು ಪ್ರಯತ್ನಿಸಲಾಯಿತು. ಕೆಲ ಸ್ಥಳೀಕರು ಹತ್ತಿರದಲ್ಲಿ ರಾಷ್ಟ್ರೀಯ ಹೆದ್ದಾರಿಯ (63) ನಿರ್ಮಾಣದಿಂದಾಗಿ ಹರಿಯುವ ಹೊಳೆ ಕಟ್ಟಿಹೋಗಿದ್ದು, ಅದು ಒಡೆದಿದ್ದರಿಂದ ಈ ಭೂಸ್ಖಲನ ಆಗಿರಬಹುದೆಂದು ತಿಳಿಸಿದರು.

ಸುಮಾರು 50 ಎಕರೆ ಕೃಷಿ ಭೂಮಿ ಹಾಗೂ 100 ಎಕರೆ ಅರಣ್ಯ ಪ್ರದೇಶ ಭೂಸ್ಖಲನದಿಂದಾಗಿ ಮಣ್ಣಿನಲ್ಲಿ ಹುಗಿದು ಹೋಗಿದೆ. ಜೂನ್ 22 ರಂದು ಬೆಳಿಗ್ಗೆ ನಡೆದ ಈ ಘಟನೆ ಸುತ್ತಮುತ್ತಲಿನ ಜನರನ್ನು ಭಯಭೀತರನ್ನಾಗಿ ಮಾಡಿದೆ. ಅರಣ್ಯದಲ್ಲಿರುವ ಭಾರಿ ಗಾತ್ರದ ಮರಗಳು ಭೂಕುಸಿತದಲ್ಲಿ ಸಿಲುಕಿ ಭೂಮಿ ಬರಡಾಗಿರುವ ದೃಶ್ಯ ಭೀಕರವಾಗಿದೆ.

ಹಿಮಾಲಯ ಪ್ರದೇಶದಲ್ಲಿ ಭೂಸ್ಖಲನ ಸ್ವಾಭಾವಿಕವಾಗಿ ಬರುತ್ತಿರುತ್ತವೆ. ಪ್ರತಿ ಮಳೆಗಾಲದಲ್ಲಿ ಭೂಮಿ ಕುಸಿದು ಅಪಾರ ಹಾನಿ ಉಂಟಾಗುವುದು ಹಿಮಾಲಯದಲ್ಲಿ ಸರ್ವೆ ಸಾಮಾನ್ಯ. ಹಿಮಾಲಯ ಪರ್ವತ ಶ್ರೇಣಿಗಳು ಸ್ಥಿರವಾಗಿಲ್ಲದ್ದರಿಂದ ಹೀಗೆ ಭೂಸ್ಖಲನವಾಗುವುದೆಂದು ವಿಜ್ಞಾನಿಗಳ ಅಭಿಪ್ರಾಯ. ಆದರೆ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಈ ತರಹದ ಭೂಸ್ಖಲನ ವಿರಳ. ಅದಲ್ಲದೆ ಸಹ್ಯಾದ್ರಿ ಪರ್ವತ ಶ್ರೇಣಿಗಳು ಸ್ಥಿರವಾಗಿರುವುದರಿಂದ ಇಂತಹ ಭೂಸ್ಖಲನ ಆಗದು ಎಂದು ವಿಜ್ಞಾನಿಗಳ ಹೇಳಿಕೆ. ಆದರೆ ಇದನ್ನು ಸುಳ್ಳಾಗಿಸಿ ಈಗ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಭೂಸ್ಖಲನ ಆಗುತ್ತಿರುವುದು ಬಹಳ ಕಳವಳಕಾರಿಯಾಗಿದೆ. ಭೂಮಿಯ ಒಳಗಡೆ ಇರುವ ರಚನೆಯಲ್ಲಿ ಏರು ಪೇರಾಗಿ, ಭೂಮಿಯು ಸಡಿಲವಾಗಿದ್ದರಿಂದ ಭೂಸ್ಕಲನವಾಗುವ ಸಂಭವವಿದೆ.

ಕೊಂಕಣ ರೈಲು ಅವಘಡವೂ ಸಹ ಇದೇ ರೀತಿಯ ಭೂಸ್ಖಲನದಿಂದ ಆಗಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಇಂತಹ ಭೂಸ್ಖಲನ ಕಾಳಿ ಕಣಿವೆಯ ಪ್ರದೇಶದಲ್ಲಿ ಆದಲ್ಲಿ ಭಾರಿ ಅನಾಹುತಕ್ಕೆ ಎಡೆ ಮಾಡಿಕೊಡುವುದರಲ್ಲಿ ಸಂಶಯವಿಲ್ಲ. ಆರು ಆಣೆಕಟ್ಟುಗಳಿರುವಲ್ಲಿ ಒಂದು ಕಡೆ ಇಂತಹ ಭೂಕುಸಿತವಾದಲ್ಲಿ ಪ್ರಳಯಾಂತಕ ಪರಿಣಾಮ ಉಂಟಾಗುವುದು ಖಚಿತ. ಕೆಲ ವರ್ಷಗಳ ಹಿಂದೆ ಕೊಡಸಳ್ಳಿ ಆಣೆಕಟ್ಟೆಯ ಹತ್ತಿರ ಇಂತಹ ಭೂಸ್ಖಲನ ಆಗಿದ್ದು ಜನರ ಮನಸ್ಸಿನಲ್ಲಿದೆ. ಕೈಗಾ ಅಣುಶಕ್ತಿ ಘಟಕ ಕಾಳಿ ಕಣಿವೆಯಲ್ಲಿರುವುದರಿಂದ ಇದರ ಪರಿಣಾಮ ಊಹಿಸಲೂ ಅಸಾಧ್ಯ.

ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅರೆಬೈಲ್ ಭೂಸ್ಖಲನದ ವೈಜ್ಞಾನಿಕ ಅಧ್ಯಯನ ನಡೆಸಬೇಕೆಂದು ಪರಿಸರ ಸಂರಕ್ಷಣಾ ಕೇಂದ್ರವು ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿ ಪತ್ರ ಬರೆದಿದೆ. ಕೇರಳದ ತಿರುವನಂತಪುರದಲ್ಲಿರುವ ಭೂಮಿ ವಿಜ್ಞಾನ ಅಧ್ಯಯನ ಕೇಂದ್ರ (Center for Earth Science Studies) ದ ಸಹಾಯದಿಂದ ಆಧುನಿಕ ಸಲಕರಣೆಗಳನ್ನು ಉಪಯೋಗಿಸಿ ಇಲ್ಲಿಯ ಭೂಸ್ಖಲನದ ಅಧ್ಯಯನ ನಡೆಸಲು ಆಗ್ರಹಿಸಲಾಗಿದೆ.

ಅರೆಬೈಲ್ ಘಟ್ಟಕ್ಕೆ ಭೇಟಿ ನೀಡಿದ ತಂಡದಲ್ಲಿ ಪಾಂಡುರಂಗ ಹೆಗಡೆ ಹಾಗೂ ಬಿ.ಜಿ. ಹೆಗಡೆ ಗೇರಾಳ ಇವರು ಉಪಸ್ಥಿತರಿದ್ದರು.

ಜೈರಾಮ ಶೀಗೇಹಳ್ಳಿ
ಪರಿಸರ ಸಂರಕ್ಷಣಾ ಕೇಂದ್ರದ ಪರವಾಗಿ

ದಿ:2-7-2003

KALI BACHAO ANDOLAN
Basavaraj Nilaya
Chowkimath
SIRSI – 581401
Uttara Kannada
KARNATAKA
Ph: 08384-425139
Fax:91-4435450/427839
email:appiko@sancharnet.in

****

Shri Rakesh Singh
The Deputy Commissioner
Uttara Kannada
Karwar

July 2, 2003

Ref: kali/DC/2/03
Re: Providing clear drinking to water villages near Dandeli

Dear Shri Rakesh Singh,
As discussed over the phone I am sending the details of villages, which are severely affected by the pollution from Paper Mill. The people and their cattle have suffered for several years. It will be of great help if you can make arrangement for clean drinking water to following villages.

Name of the village	Population	Source of water
Kariampally	250	Open well / Bore well
Mainal	147	Bore well/River
Harnoda	128	Open well/River
Saksali	74	Open well/River
Kerwadi	380	Tank /Well
Dandeliappa (New Temple)	80	Tap/River

Problem: Though they have open well/ bore wells, the water is polluted.
Solution: The only long-term solution is to provide drinking water from the upstream of Kali river (before the Paper Mill affluent is left into the river). There is existing pipeline from the upstream to Haliyal town. Now there is a proposal to upgrade this scheme at the cost of Rs. 3 Crores. an extended
It is possible to provide ~~a separate~~ pipeline (from the Haliyal pipeline) for these villages (Kariampally, Mainal, Kerwad and Dandeliappa). These villages are on the left bank of Kali. For Harnoda and Saksali, the village situated on the Right Bank of Kali, a separate pipeline from Kali (Up stream) will have to be laid to provide drinking water.
We request you to take urgent action on this and help the villagers to supply drinking water.
If you need any further clarification/ assistance, please contact us at above address/ fax or phone numbers.

Thanking you for all the cooperation.

With best wishes,

Pandurang Hegde
For Kali Bachao Andolan

Kali Bachao Andolan

Workshop on

River Kali –people, ecology and environmental impacts

Organised By

Environment Support Group, Parisara Samrakshana Kendra and Collective for Informal Education and Development Studies

Venue: CIEDS, No.33-1/9, Thyagaraj Layout, Jai Bharathi Nagar, Maruthi Seva nagar, Bangalore Tel: 5492774 /779, 5492783

Workshop Schedule : 19th September 2003

Time	Issues	Presentations/Remarks
Friday, September 19th 2003		
9.30 a m – 9.45am	Introduction and Welcome	ESG/PSK/CIEDS
9.45 am to 11.45 am	Kali River Ecology and Forest Cover	Bhargavi S. Rao & Dr. B. K. Chakrapani
	Tribals/Indigenous people of the region, their life, tradition, culture, etc.	Tribal Representative/Ananth Chikkatur
	Pollution by West Coast Paper Mills and Follow up	Ananth Chikkatur/Rajmohan/Leo Saldanha
	Sand mining	Pandurang Hegde
	Dandeli Dam in the context of other Dams on Kali	Leo Saldanha
	Kaiga Nuclear power plant	Bhoga/Citizens for Alternatives to Nuclear Energy
	Ecotourism: Issues and Challenges	John Pollard
	Third Naval Base at Karwar Versus Project Seabird	Commander John Jacob Puthur (Retd.)
	Interlinking of Rivers: Impact on UK due to Bedthi-Varda link	Sarita Deshmukh/Leo Saldanha
11.45 am to 1 pm	Regulation, Compliance, Law and Policy Issues	Leo Saldanha/Pandurang Hegde
1 pm to 2 pm	Lunch	
2 pm to 4 pm	Discussion on issues relating to:	Climate of Fear that is preventing local citizen action
		Long term development issues of Uttara Kannada
		Immediate Steps to protect Kali River Ecology and its people
		Future Course of Action
4 pm to 5 pm	Summarising Key Concerns	Define Strategies for action
5 pm to 7 pm	Interaction with Key Officials from the Government and Regulatory Agencies	**Potential Participants**: Mr. R. V. Deshpande, Industries Minister; Mr. Alexander, Chairman, Karnataka State Pollution Control Board; Ms. Latha Krishna Rao, Secretary, Dept of Ecology and Environment; Representative of Central Pollution Control Board

ಕಾಳಿ ಬಚಾವೋ ಆಂದೋಲನ

ಬಸವರಾಜ ನಿಲಯ, ಚೌಕಿಮಠ, ಶಿರಸಿ. (ಉ.ಕ.)

ಪತ್ರಿಕಾ ಪ್ರಕಟಣೆ

ಕಾಳಿ ಬಚಾವೋ ತಂಡದಿಂದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಭೇಟಿ

ಕಾಳಿ ಬಚಾವೋ ಆಂದೋಲನದ ಕಾರ್ಯಕರ್ತರು ಹಾಗೂ ದಾಂಡೇಲಿಯ ಕಾಗದ ಕಾರ್ಖಾನೆಯು ಕಾಳಿ ನದಿಗೆ ಬಿಡುವ ತಾಜ್ಯದಿಂದ ಪ್ರಭಾವಿತರಾದ ಹಳ್ಳಿಗರು ದಿನಾಂಕ 19-9-2003ರಂದು ಬೆಂಗಳೂರಿನಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದ ಶ್ರೀ ಜಿ. ಅಲೆಕ್ಸಾಂಡರ್ ಅವರನ್ನು ಭೇಟಿ ಮಾಡಿ ಕಾಳಿ ನದಿಯ ನೀರು ಮಾಲಿನ್ಯಗೊಂಡಿರುವುದರಿಂದುಂಟಾದ ಪರಿಣಾಮಗಳ ಕುರಿತು ಚರ್ಚಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಳ್ಳಿಗರಿಂದ ತ್ಯಾಜ್ಯ ಮಿಶ್ರಿತ ನೀರಿನ ಬಳಕೆಯಿಂದ ಅವರ ಕೃಷಿ ಮತ್ತು ಆರೋಗ್ಯದ ಮೇಲಾಗಿರುವ ಪರಿಣಾಮಗಳ ಕುರಿತು ಕೇಳಿ ತಿಳಿದುಕೊಂಡರು. ಕಲುಷಿತ ನೀರಿನಿಂದಾಗಿ ಜನರು ಅನುಭವಿಸುತ್ತಿರುವ ತೊಂದರೆಯನ್ನು ನಿವಾರಣೆ ಮಾಡಲು ಪ್ರಯತ್ನಿಸುವುದಾಗಿ ಶ್ರೀ ಅಲೆಕ್ಸಾಂಡರ್ ಅವರು ನಿಯೋಗಕ್ಕೆ ಬರವಸೆ ನೀಡಿದರು. ಈಗ ಕಾಗದ ಕಾರ್ಖಾನೆಯು ತ್ಯಾಜ್ಯವನ್ನು ಶುದ್ಧೀಕರಿಸಲು ಸಂಸ್ಕರಣಾ ಘಟಕವೊಂದನ್ನು ನಿರ್ಮಿಸುತ್ತಿದ್ದು ಆ ಕುರಿತು ಕಾರ್ಖಾನೆಯ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಹೇಳಿದರು.

ಅದೇ ದಿನ ಬೆಂಗಳೂರಿನ ಸಿ.ಐ.ಇ.ಡಿ.ಎಸ್. ಸಂಸ್ಥೆಯ ಆವರಣದಲ್ಲಿ 'ಕಾಳಿ ಬಚಾವೋ ಆಂದೋಲನ ' ದ ಕುರಿತು ಒಂದು ದಿನದ ಕಾರ್ಯಾಗಾರ ಸಹ ನಡೆಯಿತು. ಕಾಳಿ ಬಚಾವೋ ಆಂದೊಲನವನ್ನು ಬಲಗೊಳಿಸುವ ಬಗ್ಗೆ ಈ ಸಂದರ್ಭದಲ್ಲಿ ಚರ್ಚಿಸಲಾಯಿತು. ಪಾಂಡುರಂಗ ಹೆಗಡೆ, ಬಿ.ಜಿ.ಹೆಗಡೆ ಗೇರಾಳ, **ESG** ಸಂಸ್ಥೆಯ ಕಾರ್ಯಕರ್ತರು, ಕಾಳಿಯ ಮಕ್ಕಳಾದ ಸಹದೇವ ಗುಂಡೂಪ್ಕರ್, ಬನೂ ಬಾಯಿ, ಗುರುದತ್ ಮುಂತಾದ ಸುಮಾರು 60 ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾಳಿ ಬಚಾವೋ ಆಂದೋಲನದ ಪರವಾಗಿ

ದಿನಾಂಕ:20/09/2003

ಕಾಳಿ ಬಚಾವೋ ಆಂದೋಲನ

ಬಸವರಾಜ ನಿಲಯ, ಚೌಕಿಮಠ, ಶಿರಸಿ (ಉ.ಕ)

ಪತ್ರಿಕಾ ಪ್ರಕಟಣೆ

ಹಳ್ಳಿಗರಿಗೆ ನ್ಯಾಯ ಒದಗಿಸುವೆ: ದೇಶಪಾಂಡೆ.

ದಿನಾಂಕ 20–9–2003 ರಂದು ಕಾಳಿ ಬಚಾವೋ ಆಂದೋಲನದ ಪ್ರತಿನಿಧಿಗಳು ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚೀವರಾದ ಶ್ರೀ ಆರ್. ವಿ. ದೇಶಪಾಂಡೆಯವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ಕಾಳಿನದಿಯ ಉಳಿವಿಗಾಗಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ಆಗ ಮಂತ್ರಿಗಳು "ಮಾಲಿನ್ಯದಿಂದ ಹಳ್ಳಿಗರಿಗೆ ತೊಂದರೆಯಾದಲ್ಲಿ ಅದನ್ನು ಪರಿಹರಿಸುವುದು ನನ್ನ ನೈತಿಕ ಕರ್ತವ್ಯ" ಎಂಬುದಾಗಿ ಭರವಸೆ ನೀಡಿದರು.

ಕಾಳಿ ನದಿ ದಡದಲ್ಲಿರುವ ದಾಂಡೇಲಿಯ ಕಾಗದ ಕಾರ್ಖಾನೆಯಿಂದಾಗಿ 30 ಸಾವಿರ ಜನರಿಗೆ ಅನುಕೂಲವಾಗಿದೆ. ಇದರಿಂದ ಸರಕಾರಕ್ಕೆ ಅಪಾರವಾದ ಆದಾಯ ಬರುತ್ತದೆ. ಇದನ್ನು ಮುಚ್ಚುವ ಬದಲಾಗಿ ಮಾಲಿನ್ಯ ನಿಯಂತ್ರಿಸುವ ಬಗ್ಗೆ ಕ್ರಮ ಕೈಗೊಳ್ಳುವುದು ಅವಶ್ಯ ಎಂದರು. ಕಾರ್ಖಾನೆ ಹೊರಚೆಲ್ಲಿದ ತ್ಯಾಜ್ಯದಿಂದ ಹಳ್ಳಿಗರಿಗೆ ಹಾನಿಯಾಗಿದ್ದರೆ, ಆ ಕುರಿತು ಹಿರಿಯ ಅಧಿಕಾರಿಗಳಿಂದ 15 ದಿನಗಳೊಳಗಾಗಿ ಅಲ್ಲಿಯ ಕುಡಿಯುವ ನೀರು, ಆರೋಗ್ಯ, ಜಾನುವಾರುಗಳಿಗೆ ಬಂದಿರುವ ರೋಗ ಹಾಗೂ ಕೃಷಿಯ ಮೇಲಾಗಿರುವ ದುಷ್ಪರಿಣಾಮಗಳ ಕುರಿತಾಗಿ ವಿವರವಾದ ವರದಿಯನ್ನು ತರಿಸಿಕೊಳ್ಳುವುದಾಗಿ ಅಶ್ವಾಸನೆಯನ್ನು ನೀಡಿದರು. ಈ ವರದಿ ಬಂದ ನಂತರ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಸೆಪ್ಟೆಂಬರ್ ಕೊನೆಯೊಳಗೆ ಎಂಟು ಕೋಟಿ ರೂಪಾಯಿ ವೆಚ್ಚದಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಯಾಗಲಿದೆ. ಅದು ಸಮಯಕ್ಕೆ ಸರಿಯಾಗಿ ಆರಂಭವಾಗದಿದ್ದಲ್ಲಿ ಕಠಿಣವಾದ ಕ್ರಮವನ್ನು ಕೈಗೊಳ್ಳಲು ತಾವು ಹಿಂಜರಿಯುವುದಿಲ್ಲ ಎಂದು ಪ್ರತಿನಿಧಿಗಳಿಗೆ ಭರವಸೆ ನೀಡಿದರು.

ಮಾವಳಂಗಿಯಲ್ಲಿ ಆಣೆಕಟ್ಟು ಕಟ್ಟುವ ಬಗ್ಗೆ ಸರಕಾರದ ಮುಂದೆ ಯಾವುದೇ ಯೋಜನೆಗಳಿಲ್ಲ ಎಂಬುದಾಗಿ ಅವರು ಹೇಳಿದರು. ಹಿಂದಿನ ಜಿಲ್ಲಾಧಿಕಾರಿಗಳು ಈ ಯೋಜನೆಯನ್ನು ತಿರಸ್ಕರಿಸಿರುವುದನ್ನು ಅವರು ಈ ಸಂದರ್ಭದಲ್ಲಿ ಉಲ್ಲೇಖಿಸಿದರು.

ಕಾಳಿ ಬಚಾವೋ ಆಂದೋಲನದ ಪರವಾಗಿ ಪರಿಸರ ಸಂರಕ್ಷಣಾ ಕೇಂದ್ರದ ಪಾಂಡುರಂಗ ಹೆಗಡೆ, ಬೆಂಗಳೂರಿನ ಪರಿಸರ ಆಸಕ್ತರ ಗುಂಪಿನ ಲಿಯೋ ಸಲ್ದಾನಾ ಹಾಗೂ ಸಿ.ಐ.ಇ.ಡಿ.ಎಸ್. ಸಂಸ್ಥೆಯ ಬೋಗರಾಜ ನಂಜುಂಡ ಅವರು ಉಪಸ್ಥಿತರಿದ್ದರು. ಕರಿಯಂಪಾಲಿಯ ಸಹದೇವ ಗುಂಡೂಪ್ಕರ್,ಹಾಗೂ ದಾಂಡೇಲಿಯ ಯುವ ಹೋರಾಟಗಾರರು ಸಚೀವರನ್ನು ಭೇಟಿಯಾದ ತಂಡದಲ್ಲಿದ್ದರು. ಒಂದು ಗಂಟೆಕಾಲ ಕಾಳಿ ಬಚಾವೋದ ವಿವಿಧ ಅಂಶಗಳನ್ನು ಚರ್ಚಿಸಿದ ಸಚೀವರು ಕಾಳಿ ನದಿಯನ್ನು ರಕ್ಷಿಸುವ ಕೆಲಸ ಒಳ್ಳೆಯದು, ಮುಂದಿನ ಪೀಳಿಗೆಗಾಗಿ ಕಾಳಿ ನದಿಯನ್ನು ಉಳಿಸಿಕೊಳ್ಳುವುದು ಅವಶ್ಯಕ ಎಂದು ಹೇಳಿ ಕಾಳಿ ಬಚಾವೋ ಆಂದೋಲನಕ್ಕೆ ಬೆಂಬಲ ಸೂಚಿಸಿದರು.

ಸಚೀವರು ನೀಡಿರುವ ಅಶ್ವಾಸನೆಗಳು ಕಾರ್ಯರೂಪಕ್ಕೆ ಬಂದಲ್ಲಿ ಹಲವಾರು ವರ್ಷಗಳಿಂದ ತೀವ್ರ ಸಮಸ್ಯೆ ಎದುರಿಸುತ್ತಿರುವ ಕಾಳಿ ನದಿ ದಡದ ಹಳ್ಳಿಗರ ಬದುಕಿನಲ್ಲಿ ಬದಲಾವಣೆಯನ್ನು ನೀರಿಕ್ಷಿಸಬಹುದಾಗಿದೆ.

ಕಾಳಿ ಬಚಾವೋ ಆಂದೋಲನದ ಪರವಾಗಿ

ದಿನಾಂಕ: 22/9/2003

Kali Bachao Andolan

PRESS RELEASE: 06 October 2003

KBA PROTEST ENTERS WEST COAST PAPER MILLS
Meet Shareholders at Annual General Meeting

In a dramatic move, Kali Bachao Andolan led a protest into the sprawling campus of the West Coast Paper Mills (WCPM) in Dandeli, on 30 September, and met with the shareholders of the company. A detailed account of this significant effort is online at:
<http://www.narmada.org/related.issues/kali/images/dandeli.protest.html>

The Annual General Meeting with Shareholders is an important day of accountability for any public company. For decades, the WCPM has suppressed evidence of the serious pollution that it is causing to the Kali River by discharging untreated trade effluents. Many efforts to force the company to follow legally required environmental norms has been in vain aided by lax regulation.

Villagers from Kariampalli, worst affected by recent pollution by WCPM, along with representatives of Environment Support Group, Parisara Samrakshana Kendra, Alternative Law Forum and Samvada, rallied through the Dandeli town and entered the WCPM campus in time for the Annual General Meeting on the 30th afternoon. Heavy security and the presence of a large posse' of police did not deter the campaigners in their peaceful entry to the AGM, deep inside the campus. Once there, shareholders were met with individually and pressed to hold their company leadership accountable for their lax environmental management and criminal neglect of affected communities.

The day was also significant, as it marked the closure of the deadline of the Karnataka State Pollution Control Board for WCPM to install a secondary effluent treatment plant. When senior managers were pressed to show the plant, they deterred only to admit that it was unlikely that it would be ready any time soon.

Clearly caught off guard, and deeply embarrassed, the Mr. Chandak, Executive Director of WCPM, offered to meet with a key 'leaders' of Kali Bachao Andolan. He was told that he must meet all, or none would meet him. Late in the evening he complied with this demand, and the protestors took their message into the company's Boardroom. Along with Mr. Chandak, all of his senior staff was present. In over two hours of deliberations that followed, the following statements were made:

Leo Saldanha, speaking for KBA and the affected villagers, charged the company with:

* Willful negligence causing serious pollution of the Kali River, and its ecology. Also that of extracting water from Kali River far in excess of consented quantities, by tampering with water meters, both at the intake and discharge points.
* Causing grievous injury and harm to villagers downstream of the effluent discharge point.
* Criminal neglect of villagers affected by the pollution incident on 29/30 June 2003. Also of not providing drinking water facilities despite the pollution of surface and underground aquifers being reported to be serious for a decade now.
* Lax approach to statutory warnings requiring the company to install a state of the art effluent treatment plant. This involved violation of a key direction requiring the treatment plant to be ready by 30 September. Further, carelessly discharging fly ash from the power plant, including in a local college campus.
* Gross violation of production limits set, as the company was on record that it was producing more than twice the consented quantity. This resulted in more fresh water intake, and doubling of pollution, with consequent adverse impacts on public health and environment.
* The company has wrongly claimed that this increase in production will not increase the pollution load, in an attempt to dodge compliance with a full environmental review requiring public involvement. The past five years' environmental compliance reports filed by the company with the Karnataka Pollution Control Board has too many factual inaccuracies and is a copy-paste job across the years. It appears the regulatory authority has colluded with the company by not examining such details and taking appropriate action.
* Behaving in a manner as to threaten the local communities with dire action if they questioned the company's errant behaviour.

He was also informed that Central Pollution Control Board and Ministry of Environment and Forests had on investigation found the pollution of the river to be extremely serious. Further, that KBA had brief the Chief Minister of Karnataka Mr. S. M. Krishna, Karnataka Industries Minister and Dandeli MLA Mr. R. V. Deshpande and Chairman of Karnataka State Pollution Control Board Mr. J. Alexander on this continuing violation by the company.

Mr. Chandak had little to offer in explanation. He was also unable to deny any of these charges. When the local villagers presented to him how difficult their life had become because of his company's utter lack of responsibility, he was constrained to offer some relief. Consequently WCPM Executive Director Chandak made the following commitments:

1. WCPM will undertake the expenses of providing drinking water to all villages affected by pollution of Kali due to discharge of effluents.
2. WCPM will invest in a mobile medical unit to provide immediate health relief to affected villages.
3. WCPM will accept monetary claims from all affected families. These claims would include cost of loss of income and livelihood due to disease, death and disease of cattle and failure of crops.
4. One year's livelihood support would be extended on claim to Jahnu, a Gowli who suffered acute renal failure, and also his sister-in-law, who lost an new born infant, due to pollution from WCPM.
Mr. Chandak also confirmed that the production process would be modernized to make it elemental-chlorine free, but not soon.

This process marks an important departure in the nature of events in Dandeli. For long local people have suffered enormously from the pollution as they were repeatedly threatened with job losses if WCPM was pressurized to be environmentally responsible. The apparent motive was to present WCPM as the only economic option, and that implementing required pollution control technology would force losses on the company. To suffer in silence, despite a harsh existence, provided livelihood in the least. With this protest, local people have now been shown the way ahead in negotiating a better deal for themselves and those who work in this large paper mill. Should WCPM fully comply with law and implement all environmental measures, as is clearly possible given its large cash reserves (about Rs. 150 crores in the least), then the serious pollution that it is causing for decades should be a thing of the past. For this a very strong regulatory regime is immediately required.

Consequently, we demand that the Karnataka State Pollution Control Board should immediately take cognizance of the non-compliance of the 30 September deadline for installing an effluent treatment plant, as per relevant provisions of the Water (Prevention and Control of Pollution) Act. Unless this is done, it would be imperative that the Board would be held responsible for inaction along with WCPM.

October 1, 2003 Press Note

GOVERNMENT'S DOUBLESPEAK EXPOSED AS THE KALI RIVER REFUSES TO DIE!

On one extreme the Government of India has made an endeavour to link the major rivers of the country under an ambitious Rs 5,60,000 crores inter-linking of rivers programme, but on the other it has not been able to save the 184 km long, perhaps one of the shortest but strategically important river in the country, from virtual extinction.

At the core of the raging controversy is the proposed Rs 200 crores Dandeli Mini-Hydel Project being executed by the private company the Murdeshwar Power Corporation Limited. Once completed, this project will be the **SEVENTH** dam on this short river, ie., one dam on every 26 km stretch of the river, and will submerge 210 hectares of pristine forests in the Western Ghats in the Karnataka.

SAVE THE KALI CAMPAIGN, led by noted environmentalist **PANDURANG HEGDE** of Appiko fame, has drawn Karnataka Government's attention to this ecological folly during the past one year. Padyatra's along the river, rallies in Bangalore and media campaign have all been part of the Save the Kali campaign, Says Hegde, `` It is perhaps our last chance to save the river Kali."

Pandurang Hegde presents hard facts to prove that indeed the government is on the wrong footing. ``The Government's decision to have the 7th dam at Dandeli is in gross violation of a 1987 order by the government that had categorically stated that there will be no further projects for diversion of forest land in the Kali Valley," asserts Hegde. The fraudulent Environment Impact Assessment (EIA) report on the project by M/s Ernst & Young was rejected following the exposure by the Parisara Samrakshana Kendra, a group headed by Pandurang Hegde. To set the facts right, the government appointed The Tata Energy Research Institute to conduct another EIA on the project. Pandurang Hegde alleges, ``It is no different either. It is old wine in the new bottle."

The government's insistence with the proposed dam will enhance the current installed capacity of over 1600 MW by just another 18 MW. Further, this joint venture between

the Karnataka Power Corporation (KPC) and a private player the Murdeshwar Power Corporation, will produce power at an incredible high cost of Rs 11 crore per MW against Rs 0.7 crore per MW by the KPC. Clearly, the politician-bureaucrat-contractor nexus lay exposed.

Since February 2003, SAVE THE KALI CAMPAIGN (Kali Bachao Andolan) has left no stone unturned to highlight the plight of the poor people living along the banks of the river downstream of the West Coat Paper Mills at Dandeli. This paper plant is dumping untreated effluents into the river. Following peaceful protests, the management of the Mill had agreed to install effluent treatment plant before September 2003. However, neither has the company complied with its commitment nor has the Karnataka State Pollution Control Board enforced the decision on the company. Thousands of people downstream of the paper mill are being slowly poisoned.

Originating at Kushavali, on the border of Karnataka and Goa, the Kali drives its name from the dark colour of its managese-rich waters. The river meanders through the unique biodiversity of the Western Ghats along its short course of 184 kilometres in the Uttar Kanara district of Karnataka before joining the Arabian Sea at the strategically important port-town of Karawar. The river is the lifeline to some 4 crore people in the district and supports livelihoods of tens of thousands of people including fishermen on the coast of Karwar. The Kali offers a perfect natural corridor for wild elephants and black panthers.

SAVE THE KALI CAMPAIGN demands:

1. **No more dams** on the Kali river.
2. **Stop pollution** from the paper mill.
3. **Stop illegal sand-mining** on the Kali river.
4. **Put a stop to plundering of biodiversity** in the Kali valley

Kali Bachao Andolan
Basavaraj Nilaya, Chowimath
Sirsi (Uttara Katnataka Dt.)
Karnataka - 581401
Tel: 91-8384-425139/42039
Email: appiko@sancharnet.in
KBA Website: http://narmada.org/related.issues/kali/

ಕಾಳಿ ಬಚಾವೋ ಆಂದೋಲನ, ಶಿರಸಿ

ಪತ್ರಿಕಾ ಪ್ರಕಟಣೆ

ಕಾಳಿ ನದಿಯ ಮಾಲಿನ್ಯ ಪ್ರಭಾವಿತ ಸ್ಥಳಕ್ಕೆ ಬಿ.ಬಿ.ಸಿ. ತಂಡದ ಭೇಟಿ

ದಿನಾಂಕ 18 ಮತ್ತು 19, ಫೆಬ್ರುವರಿ2004 ರಂದು ಪ್ರಸಿದ್ಧ ಅಂತರರಾಷ್ಟ್ರೀಯ ಸುದ್ದಿ ಸಂಸ್ಥೆ ಬಿ.ಬಿ.ಸಿಯ ತಂಡವು ದಾಂಡೇಲಿಯ ಪೇಪರ್ ಮಿಲ್ಲು ಕಾಳಿನದಿಗೆ ಹೊರಬಿಡುವ ಮಾಲಿನ್ಯಯುಕ್ತ ನೀರಿನಿಂದ ಪ್ರಭಾವಿತವಾದ ಸ್ಥಳಗಳಿಗೆ ಭೇಟಿ ನೀಡಿತ್ತು. ಶ್ರೀ ರವಿಪ್ರಸಾದ್ ನೇತ್ರತ್ವದ ಸುದ್ದಿ ತಂಡವು ಮಾಲಿನ್ಯಯುಕ್ತ ನೀರಿನಿಂದ ತೋಂದರೆಗೀಡಾದ ಹಳ್ಳಿಗರನ್ನು ಭೇಟಿ ಮಾಡಿ ವಿಷಯುಕ್ತ ನೀರಿನಿಂದುಂಟಾದ ದುಷ್ಪರಿಣಾಮಗಳ ಕುರಿತು ಮಾತನಾಡಿ ವಿಷಯ ತಿಳಿದು ಕೊಂಡಿತು. ದಾಂಡೇಲಿಯ ಪೇಪರ್ ಮಿಲ್ ಕಲ್ಮಶವನ್ನು ಶುದ್ಧೀಕರಿಸದೇ ಕಾಳಿ ನದಿಗೆ ಬಿಡುವುದರ ವಿರುದ್ಧ ಕಾಳಿ ಬಚಾವೋ ಆಂದೋಲನವು ನಡೆಸಿದ ಹೋರಾಟಗಳ ಬಗ್ಗೆ ವಿಷಯ ಸಂಗ್ರಹಿಸಿತು.

ಈಗಾಗಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಚಾರಗೊಂಡು ತನ್ನ ಹೋರಾಟಕ್ಕೆ ಬೆಂಬಲ ಪಡೆದ ಕಾಳಿ ಬಚಾವೋ ಆಂದೋಲನ ಬಿ.ಬಿ.ಸಿ ತಂಡದ ಈ ಭೆಟಿಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾಳಿನದಿಯನ್ನು ಉಳಿಸುವ ಹೋರಾಟಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತಂತಾಗಿದೆ. ಇದರಿಂದ ಕಾಳಿ ನದಿಯ ಮಾಲಿನ್ಯ ಸಮಸ್ಯೆಯು ಬಗೆಹರಿಯುವಲ್ಲಿ ಮಾರ್ಗ ಸುಲಭವಾಗಬಹುದಾಗಿದೆ.

ಈಗ ಕೆಲ ದಿನಗಳ ಹಿಂದೆ ದೂರದರ್ಶನದ 'ಭೂಮಿ' ಕಾರ್ಯಕ್ರಮದ ತಂಡವೂ ಸಹ ಈ ಪ್ರದೇಶಕ್ಕೆ ಭೇಟಿ ನೀಡಿ ಪೇಪರ್ ಮಿಲ್ ಹೊರಬಿಡುವ ಕಲ್ಮಶಯುಕ್ತ ನೀರಿನ ದುಷ್ಪರಿಣಾಮಕ್ಕೊಳಗಾದ ಸ್ಥಳಗಳನ್ನು ಸಮೀಕ್ಷಿಸಿ ಚಿತ್ರೀಕರಿಸಿಕೊಂಡಿತು. ಆದರೆ ಪೇಪರ ಮಿಲ್ಲಿನ ಅಧಿಕಾರಿಗಳು ದೂರದರ್ಶನದ ತಂಡಕ್ಕೆ ಮಿಲ್ಲಿನಲ್ಲಿಯ ಶುದ್ಧಿಕರಣ ಘಟಕದ ವೀಕ್ಷಣೆಗೆ ಅವಕಾಶ ನೀಡಲಿಲ್ಲ. ಭೂಮಿ ಕಾರ್ಯಕ್ರಮವು ಕೇಂದ್ರ ಸರಕಾರದ ಪರಿಸರ ಮಂತ್ರಾಲಯವು ತಯಾರಿಸುತ್ತಿರುವ ಕಾರ್ಯಕ್ರಮವಾದರೂ ಅದಕ್ಕೆ ಅವಕಾಶ ನೀಡದ ಪೇಪರ ಮಿಲ್‌ನವರ ಕ್ರಮ ಪರಿಸರ ಮಂತ್ರಾಲಯವನ್ನೇ ದಿಕ್ಕರಿಸುವ ವರ್ತನೆಯಾಗಿದೆ.

ಪೇಪರ್ ಮಿಲ್ ತಾನು ಹೊರ ಬಿಡುತ್ತಿರುವ ಮಾಲಿನ್ಯದ ಶುದ್ಧೀಕರಣಕ್ಕಾಗಿ ಘಟಕವನ್ನು ಸ್ಥಾಪಿಸುತ್ತದೆಯೆಂದು ಮಾಲಿನ್ಯ ನಿಯಂತ್ರಣ ಮಂಡಳಿ ಒಪ್ಪಿಗೆ ನೀಡಿದ್ದು, ಆದರೆ ಈಗಿನ ಅವರ ವರ್ತನೆಯು ಶುದ್ಧೀಕರಣ ಘಟಕದ ಸ್ಥಾಪನೆಯ ಕುರಿತು ಅನುಮಾನ ತರಿಸುತ್ತದೆ. ಕಾಳಿ ಬಚಾವೋ ಆಂದೋಲನವು ಪೇಪರ ಮಿಲ್‌ನವರ ಈ ಕ್ರಮವನ್ನು ಖಂಡಿಸುತ್ತದೆ.

ಕಾಳಿ ಬಚಾವೋ ಆಂದೋಲನ

21-2-2004

ಬಸವರಾಜ ನಿಲಯ
ಚೌಕಿಮಠ
ಶಿರಸಿ (ಉ.ಕ)

Parisara Samrakshana Kendra
Hulemalgi Building, Chowkimath
Sirsi (Uttara Kannada Dt.)
Karnataka 581401
Tel: 91-8384 425139/425039
Fax: 91-4435450/ 427839
Email: appiko@sancharnet.in

Environment Support Group ®
S-3, Rajashree Apartments, 18/57,
1st Main Road, S. R. K. Gardens,
Jayanagar, Bannerghatta Road,
Bangalore 560 041. INDIA
Telefax: 91-80-6341977/6531339/6534364
ಶಿರಸಿ ತಾಲುಕಿನ ಸಾಲ್ಕಣಿಯಲ್ಲಿ ಆರಂಭವಾದ ಅಪ್ಪಿಕೋ ಚಳುವಳಿ ಸಿದ್ದಾಪುರ ತಾಲುಕಿನಲ್ಲಿ ಪಾದಾರ್ಪಣೆ ಮಾಡಿದೆ. ಎರಡು ತಿಂಗಳಲ್ಲಿ ಶಿರಸಿ ತಾಲುಕಿನಲ್ಲಿ ಐದು ಅರಣ್ಯಪ್ರದೇಶದಲ್ಲಿ ಅಲ್ಲಿಯ ಸ್ಥಳೀಯ ಜನರು 'ಪರಿಸರ ಸಂರಕ್ಷಣಾ ಕೇಂದ್ರ' ಘಟಕವನ್ನು ಆರಂಭಿಸಿ, ಈ ಘಟಕದ ನೇತೃತ್ವದಲ್ಲಿ ಮರ ಕಡಿಯುವದನ್ನು ನಿಲ್ಲಿಸಿದ್ದಾರೆ. ಇದರಿಂದ ಪ್ರೇರಣೆ ಪಡೆದು ಸಿದ್ದಾಪುರ ತಾಲುಕಿನ ನಿಡಗೋಡ ಅರಣ್ಯಪ್ರದೇಶದಲ್ಲಿ ಅಪ್ಪಿಕೋ ಚಳುವಳಿ ಆರಂಭವಾಗಿದೆ

ದಿನಾಂಕ 11 ನವೆಂಬರ 1983 ರಂದು ಮುಂಜಾನೆ ನಿಡಗೋಡ ಊರಿನಲ್ಲಿ ಸುಮಾರು 350ರಿಂದ 400 ಜನರು ಒಟ್ಟಾಗಿ ಎರಡು ಮೈಲಿ ದೂರದಿರುವ ಆರಣ್ಯ ಕಡಿಯುವ ಸ್ಥಳಕ್ಕೆ ಹೋಗಿ ಅಂಹಿಸಾತ್ಮಕವಾಗಿ ಚಳುವಳಿಯನ್ನು ಆರಂಭಿಸಿದರು. ಕೆಲಸಗಾರರು ಮರ ಕಡಿಯಲು ಕೊಡಲಿಯ 'ಏಟು ತಮ್ಮ ಶರೀರವನ್ನು ಬೇದಿಸಲಿಎಂಬ ಧೈರ್ಯ ಸಾಹಸದಿಂದ ಜನರು ಒಟ್ಟಾಗಿ ಮರವನ್ನು ತಬ್ಬಿಕೊಂಡರು. ಚಳುವಳಿಯ ಈ ಅಹಿಂಸಾತ್ಮಕ ಮನಕರಗುವ ದೃಶ್ಯವನ್ನು ನೋಡಿ ಕೆಲಸಗಾರರು ಮರ ಕಡಿಯುವದನ್ನು ನಿಲ್ಲಿಸಿದ್ದಾರೆ.

ಚಳುವಳಿಯಲ್ಲಿ ಭಾಗವಹಿಸಿದ ಜನರು ಮರ ಕಡಿಯುವದನ್ನು ನಿಲ್ಲಿಸಿದ ನಂತರ ಹಿಂದಿನ ವರ್ಷಗಳಲ್ಲಿ ಸಂಪೂರ್ಣ ಮರಕಡಿದು ಆರ್ಥಿಕ ಲಾಭಕ್ಕಾಗಿ ಅರಣ್ಯ ಇಲಾಖೆ ನೆಟ್ಟಿರುವ ಸಸಿಗಳು ಬದುಕದೇ ಕೇವಲ ಇಪುಬೊರಿಯಂಕಳೆ ಬೆಳೆದಿರುವದನ್ನು ಕಂಡು, ಅರಣ್ಯ ನಾಶವಾದಾಗ ಯಾವ ಗಂಡಾತರ ಬರಬಹುದೆಂಬುದನ್ನು ಮನಗಂಡರು. ಅವರು ತಮ್ಮ ತಮ್ಮ ಹಳ್ಳಿಯ ಬರಡಾದ ಸ್ಥಳಗಳಲ್ಲಿ ಮುಂದಿನ ವರ್ಷ ಗಿಡಬೆಳೆಯುಸುವ ಬಗ್ಗೆ ಅರಣ್ಯದ ಬಳಕೆಯನ್ನು ಹಾನಿಕಾರಕವಾಗದ ರೀತಿಯಲ್ಲಿ ಮಾಡುವದರ ಬಗ್ಗೆ ಅರಣ್ಯದಲ್ಲಿ ವನದೇವತೆಯ ಸಮಕ್ಷಮ ಪ್ರತಿಜ್ಞೆ ಕೈಗೊಂಡರು.

ನಿಡಗೋಡಿನ ಜನರ ಚಳುವಳಿಗೆ ಬೆಂಬಲ ಸೂಚಿಸಲು ಸಿದ್ದಾಪುರ ಹತ್ತಿರದ 8–10 ಮೈಲಿ ದೂರದಿಂದ ಯುವಕ–ಯುವತಿಯರು ನಡೆದು ಬಂದು ನಿಡಗೋಡದಲ್ಲಿ ಸೇರಿದ್ದರು.

ಸಿದ್ದಾಪುರದಲ್ಲಿ ಇನ್ನೊಂದೆಡ ಅನುವಮನಜಡ್ಡಿ ಅರಣ್ಯದಲ್ಲಿ ಪ್ಲಾಯಿವುಡ್ ಕಾರಖಾನೆಗಾಗಿ ಮೆದು ಮರಗಳನ್ನು ಕಡಿಯುವದನ್ನು ವಿರೋಧಿಸಿ ಸುಮಾರು 150 ಜನರು ಯುವಕರು ಮರ ಅಪ್ಪಿಕೊಂಡು ಚಳುವಳಿ ನಡೆಸಿ ಮರ ಕಡಿಯುವದನ್ನು ನಿಲ್ಲಿಸಿದರು.

ಯಾವದೇ ರಾಜಕೀಯ ಪಕ್ಷದ ಬಣ್ಣವಿಲ್ಲದ ಈ ಆಂದೋಲನದ ನೇತೃತ್ವವನ್ನು ಪರಿಸರ ಸಂರಕ್ಷಣಾ ಕೇಂದ್ರ, ಸಿದ್ದಾಪುರ ಘಟಕವು ಸಮರ್ಪಕವಾಗಿ ನಡೆಸಿಕೊಂಡು ಬರುತ್ತಿದೆ. ಪರಿಸರ ಪ್ರಜ್ಞೆ ವ್ಯಾಪಕವಾಗುತ್ತಿರುವ ಬಗ್ಗೆ ನಿಡಗೋಡದಲ್ಲಿ ಅಭೂತಪೂರ್ವ ರೀತಿಯಲ್ಲಿ ಸೇರಿದ್ದ ಜನ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ, ಅರಣ್ಯ ಬೆಳೆಸುವ, ಬಳಸುವ ಮತ್ತು ಉಳಿಸುವ ಉದ್ದೇಶಗಳಿಗೆ ಹೋರಾಡುವ ಮನೋಭಾವನೆ ತೋರಿಸಿದೆ. ಸಂಪೂರ್ಣ ಅರಣ್ಯನೀತಿ ಬದಲಾಗುವವರೆಗೆ ಇಡೀ ಜಿಲ್ಲೆಯಾದ್ಯಂತ ಈ ಚಳುವಳಿಯನ್ನು ನಡೆಸುವ ಬಗ್ಗೆ ಪರಿಸರ ಸಂರಕ್ಷಣಾ ಕೇಂದ್ರವು ತನ್ನ ನಿಲುವನ್ನು ಸ್ಪಷ್ಟಪಡಿಸಿತು.

ಪತ್ರಿಕಾ ವರದಿ
12–11–1983

ಪರಿಸರ ಸಂರಕ್ಷಣಾ ಕೇಂದ್ರ–ಶಿರಸಿ

ಅಂಚೆ ದರಕಿನೆ
ನಿಲ್ಕಂದ ಬಿಟ್ಟನ,
ಯುಂಚನೆ.

ತುಂಬಾ ಸಂಂಪ್ಟಿಗಿ ಶೇಂದ್ರ
ತಿರಸಿ ಸಿಟಿ ಕಂಗ
ಬಿ. ಪ. ಗ್ರಾ. ಪ2.

ಯಗಾನ್ನಶೆ,

ಉತ್ತರ ಕನ್ನಡ ದಡ್ಡ ನಡೆಯುತ್ತಿರುವ ಅಡ್ಡಿಕೋಂ ಚಳ್ಳುವಳ್ಳ ಅಭ್ಯೆಷ್ಟನಿಕ ಯೆಂದು, ಇದಕ್ಕೆ ಯಾವುದೆ ತಿಂಬ್ಳಿಕ ಅಥವಾ ಭೈಷ್ಟನಿಕ ತಿನ್ನೆಲೆ ಇಲ್ಲವೆಂದು ಅಂದಾಜು ಸಾಗುವೆಂಬ ಯುಜ್ಞ ಸಂಂಪ್ಟಿಗಿ ಅಧಿಕಾರಿ ಯವರು ಹೇಳಿರುತ್ತಾರೆ (ಯುಂಚನೆ 2. ಗ್ರಾ. ಪ2)

ಇಂದು ಇದೆ ತಿಂಬ್ಳಿಕ ಯುತ್ತ ಭೈಷ್ಟನಿಕ ತಿನ್ನೆಲೆ ಇರುವ ಅಂದಾಜು ಸಾಗುವೆ ತಿಳಿಸಿರುವುದೇನು? ಹಾಗೂ ಉತ್ತರ ಕನ್ನಡದಡ್ಡನ ಕಸಿಂದ ಪ್ರೋಜ್ಕ್ಟ್ ರೇಕಟಿ ಲಾಂ ಂಂದ ಇಲ್ಲಿ ಇಳ್ಳದಡ್ಡ ಯಾವ ನೀತಿಯಿಂದ? ಸೈದಾಂತಿಕ ಕಾರಣ ಕಟ್ಟಿದು ಪರಿಣಾಮದಡ್ಡ ನೀಲನಕಿರಿ, ತೀಗದ ಯರಣ್ಯ ತೂಂಡಿಗೆ ಅನುಭವಿಸಬೇಕ್ಕಬರು ಯಾರು? ಈ ಭಕಲ ಜಾತಿಯ ಪಿನ್ಸಿಗಳಿಂದ ನೀರಿನ, ಜೀವನ ಯಮಸ್ಯೆ ಗಳನ್ನು ಎದುರಿಸುತ್ತಿರುವ ಜನರ ಕಷ್ಟದ ಅರಿವು ಈ ತಿಂಬ್ಳಿಕ ಬ್ಲಾನ್ಕಿಗಳಿಗೆ ಇರುವುದೆ? ಈ ಕಷ್ಟವನ್ನು ಅಡ್ಡಿಕೋಂ ಚಳ್ಳುವಳ್ಳ ಯೂಲಕ ಬ್ಲಾಕ್ಮೆಯಿಡಿನಿದ್ದು ಭೈಷ್ಟನಿಕಯಾಗಿ ತಿರೋಬುಡುವ. ಅದರೆ ಇದು ಇಲ್ಲಿಯ ಜನರ ಜೀವನ ಯಂರೋಧ ಬ್ರಷ್ಟೆ.

ಅಡ್ಡಿಕೋಂ ಬಳ್ಳವಳ್ಳ ಕೇಬಲ್ ಯುರ ಕಡಿಯುವ ಬಿರುದ್ಧ ಕಾರಾಗೃ ನಡೆಯುತ್ತಿರುವ ಚಳ್ಳುವಳ್ಳ ಬಲ್ಲ. ನಮ್ಮ ಬುದ್ಧಿಕ ಬ್ಯಳಿಯದು, ಚಿಳ್ಳಿಸುವದು ಯುತ್ತ ಪರಿಂಯಾಗಿ ಬಳ್ಳದುವದು. ಅರಣ್ಯವನ್ನು ಬೆಳ್ಳಂಯಿಸುವ ತಿಂಬಡ ಬ್ಯಾಂಕಿಯಡ್ಡೇ ಯುರತ್ವ ಪೂರ್ಣಗೊಳಿಯಾದಡ್ಡ ಯಂಬ ಅರಿವು ನಮಗೆ ಇದೆ.

ಅಡ್ಡಿಕೋಂ ಬಳ್ಳವಳ್ಳಂ ಗಟಕೇಯ ಬಳ್ಳವಳ್ಳಂಯಾಗಿದೆ ಂಂದು ಹೇಳ್ಕೆ ಅದು ಯಾವುದೆ ಅಚ್ಚೆ ಗಟಕೇಯ ಡ್ಡಲ್ಲ ಎನ್ನ ಎ ಬಲ್ಲರ ಹೇಳ್ಕೆಂಯನ್ನು ಬರಂಭಾಭಾವದಿಂದ ಕಾಣಿದೆ. ಅವರು ಎನನ್ನು ಹೇಳ್ಕಲು ತಾರತಿಯವರು?

ಅಡ್ಡಿಕೋಂ ಅಕಿಂಂಿಕ್ಟೆಕ, ರಚನಾತ್ಮಕ ಯುಖಾಭಿಕಿ. ಇದು ಜನರ ಹೃದಯವನ್ನು ಪೀಂಬಿದೆ. ಇದನ್ನು ಉಳ್ಳಿಸುವ ಯೆಂಬುತ್ತ ಎ ಫಲಿಬಾತಲು ಶಿಬ್ಬಲ್ಲ.

ಯುಳ್ಳ ಬಿಶ್ವಾಸಿ
ಗಿಂಬಿಂಂರ
for ತುಂಬರ ಸಂಂಪ್ಟಿಗಿ ಶೇಂದ್ರ ತಿರಸಿ.

ಬಿ. ಪ. ಗ್ರಾ. ಪ2.

"ಅಪ್ಪಿಕೋ ಮುಂದುವರಿಸುವ ಧೃಢ ನಿರ್ಧಾರ"

ದಿನಾಂಕ:3-12-1983 ರಂದು ಪಾನಳ್ಳಿಯ ಹತ್ತಿರ ದಟ್ಟವಾದ ಅರಣ್ಯದಲ್ಲಿ ಸತ್ಯಗಣಪತಿ ಕಥೆ ನಡೆಯಿತು. ಮಹಿಳೆಯರು, ಮಕ್ಕಳು ಮತ್ತು ಬುಡಕಟ್ಟು ಜನಾಂಗದವರು ಸೇರಿದಂತೆ 150 ಜನರು ಗಿಡಗಳಿಗೆ ಪೂಜೆ ಮಾಡಿ "ಅರಣ್ಯದಲ್ಲಿರುವ ಹಸಿರು ಜೀವನಕ್ಕೆ ಆಧಾರ, ಇದನ್ನು ಉಳಿಸುವ ಬೆಳೆಸುವ ಸಲುವಾಗಿ ಯಾವ ತ್ಯಾಗ ಮಾಡಲಿಕ್ಕೂ ಸಿದ್ಧ" ಎಂದು ಪ್ರತಿಜ್ಞೆ ಮಾಡಿದರು. ಗಂಟೆ ಗೋಷ್ಠಗಳ ಪೂಜ್ಯ ಮನೋಭಾವನೆಯಿಂದ ಅರಣ್ಯ ರಕ್ಷಣೆಯ ಬಗ್ಗೆ ಪ್ರತಿಜ್ಞೆ ಮಾಡಿ ಅಪ್ಪಿಕೋ ಯಜ್ಞಕ್ಕೆ ನಾರದಿ ಹಾಡಿ ಈ ಚಳುವಳಿ ಇತರ ಚಳುವಳಿಗಿಂತ ತೀರ ಭಿನ್ನವಾದದ್ದು ಎಂಬುದನ್ನು ತೋರಿಸುತ್ತದೆ. ಇಲ್ಲಿ ಪ್ಲಾಯಿಪುಡೆ ಮತ್ತು ವಿಮಕೋ ಕಾರಖಾನೆಯವರು ಮರ ಉರುಳಿಸುವ ತಯಾರಿಯಲ್ಲಿದ್ದಾರೆ. ಜನರು ಈ ಹಸಿರು ಮರಗಳನ್ನು ಉಳಿಸಲು ಅಹಿಂಸಾತ್ಮಕವಾದ ಅಪ್ಪಿಕೋ ಚಳುವಳಿ ಮಾಡುವ ಧೃಢ ನಿರ್ಧಾರವನ್ನು ಮಾಡಿದ್ದಾರೆ.

ಈ ನಡುವೆ ಅರಣ್ಯ ಇಲಾಖೆಯ ಮುಖ್ಯ ಅಧಿಕಾರಿಗಳು ಬೆಂಗಳೂರಿನಿಂದ ಒಂದು ಪತ್ರಿಕಾ ಹೇಳಿಕೆಯಲ್ಲಿ: ಜನರು ಅಪ್ಪಿಹಾಕಿಕೊಂಡು ಎಷ್ಟು ಮರವನ್ನು ಉಳಿಸುವರು? ಎಂಬ ಸವಾಲನ್ನು ಜನರೆದುರಿಗೆ ಇಟ್ಟಿದ್ದಾರೆ. ಚಳುವಳಿ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ಕೊಡದೇ ಇಲ್ಲಿಯ ಜನರ ಕಷ್ಟಗಳನ್ನು ಕಡೆಗಣಿಸಿ ಈ ರೀತಿ ಹೇಳಿಕೆಯಿಂದ ಜನರನ್ನು, ಜನಶಕ್ತಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲ.

ಹುಸರಿಯಲ್ಲಿ ಮರ ಕಡಿಯುವ ಕೆಲಸ ಪುನ: ಆರಂಭವಾಗಿದ್ದು ಜನರು ಮತ್ತೆ ಅಪ್ಪಿಕೋ ವನ್ನು ಆರಂಭಿಸಿದ್ದಾರೆ. ಅರಣ್ಯ ಇಲಾಖೆಯ ದಬ್ಬಾಳಿಕೆಯನ್ನು ಎದುರಿಸಲು ಜನರು ಧೃಢ ನಿರ್ಧಾರ ಮಾಡಿರುತ್ತಾರೆ. ಮರ ಅಪ್ಪಿಕೊಂಡ ಹೆಂಗಸರನ್ನು, ಮಕ್ಕಳನ್ನು ಮತ್ತು ಹಿರಿಯರನ್ನು ಭಂದಿಸಿ ಮರ ಕಡಿಯಲು ಪೋಲೀಸರು ಅನುವು ಮಾಡಿಕೊಡಬೇಕಾಗುತ್ತದೆ.

ಅಂಡಗಿ ಹತ್ತಿರದ ಪಾರ್ಸಿ ಅಡವಿಯಲ್ಲಿ ಹಸಿರು ಮರ ಕಡಿಯುವದನ್ನು ವಿರೋಧಿಸಿ ಜನರು ಜಾಗೃತರಾಗಿ ಸ್ವಯಂ ಪ್ರೇರಣೆಯಿಂದ ಅಪ್ಪಿಕೋ ಚಳುವಳಿ ಆರಂಭಿಸಿದ್ದಾರೆ. ಮಾಳಂಜಿ, ಹೊಸಕೊಪ್ಪ ಮತ್ತು ಇತರ ಹಳ್ಳಿಯ ಜನರು ಸೇರಿ ಚಳವಳಿ ಮಾಡುತ್ತಿದ್ದಾರೆ.

ಶಿರಸಿ ಸಿದ್ದಾಪುರದಲ್ಲಿ ಉರುವಲು ಇಲ್ಲದಾಗ ಅರಣ್ಯ ಇಲಾಖೆ ಇತರ ಡಿಪೋಗಳಿಂದ ಉರುವಲನ್ನು ಶಿರಸಿಗೆ ತಂದು ಜನರ ಕಷ್ಟವನ್ನು ಪರಿಹರಿಸಬೇಕು. ಚಳವಳಿ ಪ್ರಾರಂಭವಾಗಿ ಐದು ತಿಂಗಳಿಂದ ಒಳಗಿದ ಬಿದ್ದ ಮರಗಳನ್ನು ಕಡಿದು ಉರುವಲಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿದರೂ ಸಹ ಈ ವಿಷಯವನ್ನು ಅರಣ್ಯ ಇಲಾಖೆ ಅಲಕ್ಷಿಸಿ ಶಿರಸಿಯ ಜನರಿಗೆ ಸಂಕಷ್ಟವನ್ನು ತಂದೊಡ್ಡಿದೆ. ಇದರಿಂದ ಪೇಟೆ ಮತ್ತು ಹಳ್ಳಿಗಳ ನಡುವೆ ವಿರೋಧ ಹುಟ್ಟಿಸಿ ಒಡೆದು ಆಳುವ ನೀತಿಯಿಂದ ಅಪ್ಪಿಕೋ ವನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದ್ದಾರೆ. ಪೇಟೆಯ ಜನರು ಈ ಪ್ರಚೋಚನೆಗೆ ಬಲಿ ಬೀಳದೆ ಅರಣ್ಯ ರಕ್ಷಣೆಯ ಕಾರ್ಯದಲ್ಲಿ ಸಂಪೂರ್ಣ ಸಹಕರಿಸುವದರಲ್ಲಿ ಸಂಶಯವಿಲ್ಲ.

...2

'ಅಪ್ಪಿಕೋ' ಅವೈಜ್ಞಾನಿಕವಾದದ್ದು ಎಂಬ ಅಪವಾದನೆಯಂತನ್ನು ಅರಣ್ಯ ಇಲಾಖೆ ಮಾಡಿದೆ. ಸಂಪೂರ್ಣ ಕಾಡನ್ನು ಕಡಿದು ನೀಲಗಿರಿ, ಸಾಗವಾನಿ ನೆಟ್ಟಿರುವ ಒಂದು ಮರ ಕಡಿಯುವಾಗ ಇಪ್ಪತ್ತು ಮರ ಕಡಿಯುವ ಕೆಲಸ ವೈಜ್ಞಾನಿಕವಾದದ್ದೆ? ಜನರು ಕಷ್ಟವನ್ನು ಅನುಭವಿಸಿ ತಮ್ಮ ಧ್ವನಿಯನ್ನು ಅಹಿಂಸಾತ್ಮಕ 'ಅಪ್ಪಿಕೋ' ಮೂಲಕ ಪ್ರಕ್ಟ ಪಡಿಸಿದರೆ ಇದು ವೈಜ್ಞಾನಿಕವಲ್ಲ ಎಂಬುದು ಅರ್ಥಹೀನವಾದದ್ದು.

'ಅಪ್ಪಿಕೋ' ಒಂದು ಅಹಿಂಸಾತ್ಮಕ ರಚನಾತ್ಮಕ ವಿಚಾರಧಾರೆ. ಯಾವದೇ ತಂತ್ರ ಬಳಸಿದರೂ ಜನರ ಹೃದಯದಲ್ಲಿ ಬಲವಾಗಿ ಬೇರೂರಿರುವ ಈ ವಿಚಾರವನ್ನು ಪರಿಷ್ಕರಿಸುವದು ಅಸಾಧ್ಯ.

ಪತ್ರಿಕಾ ವರದಿ,

ಶಿರಸಿ 8—12—1983

ಪಾಂಡುರಂಗ
ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ(ಉ.ಕ) 581 401

दक्षिण भारत में पश्चिमी घाटी को बचाने के लिए चिपको

हिमालय की पहाड़ी के लोगों ने अहिंसात्मक चिपको आन्दोलन चलाया। उसका असर दक्षिण भारत में भी हुआ है। कर्नाटक में, उत्तर कन्नड़ के कई स्थानों में आज भी चिपको आन्दोलन जारी है। कन्नड़ में इसे अप्पीको चलवली के नाम से जाना जाता है। लोग व्यापारिक लाभ के लिये जो जंगल की कटाई हो रही है उसके विरुद्ध अपनी आवाज उठाई है।

पश्चिम घाट के पर्वतश्रेणी, वहाँ की हरियाली सारे दक्षिण भारत एवं संपूर्ण भारत की प्रकृति समतोल बनाए रखने में महत्व भूमिका निभाती है। इसलिए आज यह क्षेत्र अपने आप में, पर्यावरण की दृष्टी से काफी महत्वपूर्ण है। इस क्षेत्र में वन के उजड़ने की वजह से कई असर दिखाई दे रहा है। सारे भारत गर्म में एवं खास कर दक्षिण की मैदानी क्षेत्र में प्रकृति ने बड़ी हानी पहुँचाई है। हर साल वर्षा ऋतु में बाढ़ - जैसे सामान्य हो चुका है। अौर इस के साथ बरसात न होने के कारण सूखा भी पड़ता है। इन सब कारणों से आज यह समस्या केवल एक क्षेत्र की न रह कर सारे भारत की एवं विश्व की समस्या बन चुकी है। आज दुनिया में यह पानी बरसानेवाला जंगल (Tropical rain forest) बचा नहीं है। व्यापारिक रूप में जो वन थे उनको काटकर सकल जाती के पेड़ो का रोपण किया गया। इससे जल सूखने लगा, चारा खत्म होगया, कृषि के उत्पन्न पर असर पड़ा। इसे शुरुआत होने के बाद लोगों ने वन की कटाई रोकने के लिये चिपको आन्दोलन की शुरुआत की।

सिरसी तहसील में सालकनी गाँव में यह आन्दोलन की शुरुआत हुई। आज यह इस जिले में आठ स्थान पर चल रहा है। शिमोगा

जिले के सागर तहसील में भी आन्दोलन फैल चुका है।

आन्दोलन को तोड़ने के लिये अरण्य विभाग के अधिकारीयो ने पुलिस की सहायता लीया। पर लोगो ने इस से निपटने के लिये अहिंसात्मक तरीका अपनाया। लोगो की सफल भागीदारी से अब पेड़ कटना बन्द हो चुका है। कर्नाटक के वन मंत्री श्री - जीविजया ने एक आदेश जारी कर इस क्षेत्र में पेड़ कटान पर रोक लगाया। पर अरण्य विभाग के अधिकारियों ने इसे कार्यरूप में आने से रोका। पेड़ कटना जारी रहा। लोगों ने अपने शक्ती से चिपको आन्दोलन चलाकर जंगल बचाया। एक मंत्री का आदेश जंगल नहीं बचा सका पर जनशक्ती ने उसे बचाया। यह जागृत जनशक्ती का एक अनोखा निदर्शन है।

दक्षिण में पदार्पण करते यह चिपको आन्दोलन मूक घाटी आन्दोलन के साथ हो कर संपूर्ण पश्चिमी घाट को बचाने में जुट गया है। इस जनजागृती का असर सिर्फ दक्षिण भारत में ही नहीं बल्की सारे भारत में और विश्व भर में होगा। आज सारे विश्व भर में द्रापिकल जंगल बहुत ही कम बचा है और इस के नष्ट होने का असर संपूर्ण पर्यावरण पर हुआ है।

चिपको आन्दोलन की मांग है की व्यापारिक उद्देश्य से हरे पेड़ की कटान पर पूरी तरह से रोक लगाना। और अरण्य निती को बदल कर उसे कृषी को पोषक बनाना। चिपको आन्दोलन के जनजागृती से हर गाँव गाँव में पर्यावरण संरक्षण केन्द्र खुले है जो पेड़ लगाने के बारे में एक कार्यक्रम को अपनाया है।

पांडुरंग हेगडे
22.12.83

परिसर संरक्षण केन्द्र,
कुलेगलगी बिल्डिंग
सिरसी - 581401. karnataka

ಅರಣ್ಯ ನಾಶ

ಜಾರಿಯಲ್ಲಿದೆ 'ಅಪ್ಪಿಕೋ'

ರಾಜ್ಯದ ಅರಣ್ಯಖಾತೆ ಮಂತ್ರಿಗಳಾದ ಜೀವಿಜಯಂತರು ಶಿರಸಿಗೆ ಬೀಳಿಕೊಡುವವರೆಗೆ ಮರ ಕಡಿಯುವುದನ್ನು ನಿಲ್ಲಿಸುವ ಆದೇಶ ಹೊರಡಿಸಿದ್ದು ಎಲ್ಲರಿಗೂ ತಿಳಿದಿದೆ. ಜನರ ನೋವಾದನ್ನು ಅರಿತ ಮಂತ್ರಿಗಳು ಈ ಆದೇಶವನ್ನು ನೀಡಿದ್ದು ಅರಣ್ಯ ಇಲಾಖೆ ಅಧಿಕಾರಿಗಳು ಆದೇಶವನ್ನು ಸಂಪೂರ್ಣ ರೂಪದಿಂದ ನಿರ್ಲಕ್ಷಿಸಿದ್ದಾರೆ. ಶಿರಸಿ-ಸಿದ್ದಾಪುರ ಮಲ್ಲಿ ಇಂದಿಗೂ ಗುತ್ತಿಗೆದಾರರು ಮರ ಕಡಿಯುತ್ತಿದ್ದಾರೆ. ಕಲವಾರು ಸ್ಥಳಗಳಲ್ಲಿ ಜನರು ಅಪ್ಪಿಕೋ ಜಳವಳಿ ಮೂಲಕ ಇದನ್ನು ನಿಲ್ಲಿಸುತ್ತಿರುವರು. ಅರಣ್ಯ ಇಲಾಖೆ ಅಧಿಕಾರಿಗಳು ತಮಗೆ ಆದೇಶವೇ ಬಂದಿಲ್ಲ ಎಂದು ಹಾರಿಕೆಯಂತ ಉತ್ತರ ಕೊಡುತ್ತಿದ್ದಾರೆ.

ಈ ರೀತಿ ನಿರ್ಲಕ್ಷ ಭಾವನೆ ಹೊಂದಿದ ಅರಣ್ಯ ಇಲಾಖೆ ಮುಖ್ಯಅಧಿಕಾರಿ(17-12-83 ರಂದು) ಶ್ರೀ ಶಾಸ್ತ್ರಿ ಸುಂದರ ಅವರು ಶಿರಸಿಗೆ ಬಂದು ಗುತ್ತಿಗೆದಾರರ ಜೊತೆ ಮಾತನಾಡಿಕೊಂಡು ಹೋಗಿರುವದು ಈ ಪರಿಸ್ಥಿಯಲ್ಲಿ ಮತ್ತಷ್ಟು ಸಂದೇಹ ಮೂಡುವಂತೆ ಮಾಡಿದೆ. ಅಧಿಕಾರಿಗಳು ಗುತ್ತಿಗೆದಾರರ ಜೊತೆ ಸೇರಿ ಸದಕಾಂದ ಹೆಸರನ್ನು ಹಳಸಿ ಹಾಳು ಮಾಡುವದು ಎದ್ದು ಕಾಣುತ್ತಿದೆ. ಮಂತ್ರಿಗಳ ಆದೇಶವನ್ನು ಸಂಪೂರ್ಣ ನಿರ್ಲಕ್ಷಿಸುವ ಅಧಿಕಾರಿಗಳು ಜಳವಳಿಯಿಂದಲು ಹತ್ತಿಕ್ಕುವ ಜೊತೆ ಸಂಚೊಂದನ್ನು ಸಿದ್ಧಮಾಡಿಸಿದ್ದಾರೆ ಜಳವಳಿಗೆ ರಾಜಕೀಯದ ಬಣ್ಣ ಬಡಿದು ಇದು ಒಂದೇ ಕೋಮಿನ ಜನರು ಮಾಡುತ್ತಿರುವ ಜಳವಳಿ ಎಂಬ ಸುಳ್ಳು ಆಪಾದನೆಗಳನ್ನು ಮಾಡುವ ಪ್ರಯತ್ನ ನಡೆದಿದೆ.

ಪಶ್ಚಿಮದ ಭೂಮ್ಯದ ಹಸಿರನ್ನು ಉಳಿಸುವ ಬೆಳೆಸುವ ಸಲುವಾಗಿ ಪ್ರಾರಂಭವಾದ ಈ ಜನರ ಅಂದೋಲನವನ್ನು ಷುಲ್ಲಕವಾದ ಕಾರಣಕೊಟ್ಟು ಹತ್ತಿಕ್ಕುವದು ಸಾಧ್ಯವಿಲ್ಲ. ಜನರು ಈ ಅರಣ್ಯ ರಕ್ಷಣೆಗಾಗಿ ಎಂತಾಹ ತ್ಯಾಗಮಾಡಲು ಸಿದ್ಧವೆಂಬ ಭಾವನೆ ಮನೆಮಾಡಿದೆ. ಇಂದಿನ ಅರಣ್ಯನೀತಿ ರೈತರಿಗೆ ಪೋಷಕವಾಗಿರದೇ ಉದ್ದಿಮೆದಾರರ ಹಿತವನ್ನು ಎತ್ತಿ ಹಿಡಿಯುವದನ್ನು ವಿರೋಧಿಸಿ ಜನರು ನಿಂತಿದ್ದಾರೆ. ಈ ರೀತಿ ಸಂಪೂರ್ಣ ಬದಲಾಗುವ ವರೆಗೆ ಅಪ್ಪಿಕೋ ಮುಂದುವರಿಯುತ್ತದೆ.

ಶಿರಸಿ
21-12-83

ಪರಿಸರ ಸಂರಕ್ಷಣಾ ಕೇಂದ
ಶ್ರೀಧರಾಜ ಸ್ವಾಮಿಯಪ್ಪ
ಶಿರಸಿ -581 401

ಪತ್ರಿಕಾ ವರದಿ

PTI 13

CHIPKO SPREADS IN SOUTH INDIA

The Chipko movement started in september 1983 has gathered momentum in south India along the western ghat belt. The movement launched in Sirsi taluka has spread like wild fire and in eight forest areas the movement to hug the trees is going on. They are Mattighatta, Salkani, Balegadde, Husri, Nidgod, Kelgin Jaddi, Vanalli and Andagi. Thus the people succeded in stopping the felling of forest department in whole of Sirsi forest division. Peoples' movement against the unscientific management of forests has attracted global attention.

The movement is very crucial as it aims at two goals. First is to preserve the remaining virgin forest and secondly to grow trees on the barren land near villages. Par isara Sanmrakshana Kendras or Environment Conservation Centers set up in each village is the unit implementing the above goals.

The western ghat belt is a crucial area as it is the catchment area of important rivers of south India. It has the tropical rain forests deciding the fate of whole of deccan plateu. This forest belt also decides the course of monsoon winds. Ecological ~~di~~ disturbance has caused major problems of flood and drought in thewe areas. This has made people to launch ~~Chipko~~ Chipko to restore the ecological balance. Thus the peoples' movement has attracted national and global attention. Kerala Sahitya Parishad has asked to declare the whole western ghat as Protection forest. The Chipko in south has created awareness in all south Indian states.

The Karnataka State Forest Department has orderd to take assistance of Police to crush the non voilent movemant. The forest experts in the department are trying their best to curb the movement as unscientfic. However these efforts has least helped the forest officials.

The Karnataka Forest Minister Mr. Jeevijaya responded to the call of movement and ~~ordered~~ orderd to stop felling in Sirsi forest division. He assured to look into the matter personally during his forthcoming visit in last week of December. However these orders were totally ignored by forest officials. The felling of trees continued and the people are still in action, hugging trees to save them from axmen. This shows the determination of people to protect nature.

The movement is four months old and it has already spread to adjacent district Shimoga. The youths in Sagar taluka have launched ~~the~~ Chipko. Chipko people are demanding a total ban on commercial felling and basic change in the forest policy in support of agriculture.

Parisara Sanmrakshna Kendra
Hulemalgi Building, Sirsi 581401, Karnataka

ತೀವ್ರವಾಗುತ್ತಿರುವ 'ಅಪ್ಪಿಕೋ'

ಶಿರಸಿ ತಾಲೂಕ ಉಸರೆ ಹಾಗೂ ಸಿದ್ದಾಪುರ ತಾಲೂಕಿನ ನಿಡಗೋಡ ಅರಣ್ಯಗಳಲ್ಲಿ ಯಾವುದೇ ಅಧಿಕಾರಿಗಳ ಅದೇಶವಿಲ್ಲದೆ ಪುನ: ಮರಗಳನ್ನು ಕಡಿಯುವ ಕೆಲಸ ಆರಂಭ - ವಾಗಿದೆ. ಮಾನ್ಯ ಅರಣ್ಯಮಂತ್ರಿಗಳು ಚಳವಳಿ ನಡೆಯುತ್ತಿರುವ ಪ್ರದೇಶಗಳಿಗೆ ಭೇಟಿ ಕೊಡುವ ಮುಂಚಿತ ವಾಗಿಯೇ ಅಂದರೆ ತಾ: 16-1-1984 ರಂದು ಸಿರ್ಸಿ ಡಿವಿಜನ್ನಿನ ಎಲ್ಲ ಅರಣ್ಯಗಳಲ್ಲಿ ಮರಕಡಿಯುವದನ್ನು ಸ್ಥಗಿತಗೊಳಿಸಲು ಆಜ್ಞೆ ಮಾಡಿದ್ದರು. ಅವರು ತಾ:30-12-1983 ರಂದು ಚಳುವಳಿ ನಡೆಯುತ್ತಿರುವ ಪ್ರದೇಶಗಳಿಗೆ ಭೇಟಿಯಿತ್ತು

'' ಇನ್ನುಮುಂದೆ ಅರಣ್ಯದಲ್ಲಿಯ ಮರಗಳನ್ನು ಪೂರ್ತಿ ಕಡಿಯುವದಿಲ್ಲ (ಅಲ್ಲದೆ ಕೂಳೆ( )ಪದ್ಧತಿಯನ್ನೂ ಕೈಬಿಡಲಾಗಿದೆ ಎಂದು ಜನರಿಗೆ ತಿಳಿಹೇಳಿದ್ದರು. ಅಲ್ಲದೇ ಸಂಪೂರ್ಣ ಅರಣ್ಯ ನೀತಿಯನ್ನು ಪುನ: ಪರಿಶೀಲಿಸುವುದಾಗಿ ಅಶ್ವಾಸನೆ ಇತ್ತಿದ್ದರು. ಪೂರ್ಣ ಮತ್ತು ಅರ್ಧ ಹಹಿರು ( ) ಇರುವ ಅರಣ್ಯಗಳಲ್ಲಿ ಎಕರೆಗೆ ಎರಡು ಮರಗಳನ್ನೂ ಮತ್ತು ಎಲೆ ಉದುರಿಸುವ ( ) ಅರಣ್ಯಗಳಲ್ಲಿ ಪ್ರತೀ ಎಕರೆಗೆ ನಾಲ್ಕು ಮರಗಳನ್ನು ಮಾತ್ರ ಕಡಿಯಲು ಆಜ್ಞೆ ಮಾಡುವದಾಗಿ ಹೇಳಿದ್ದರು.

ಇದನ್ನು ತಿಳಿದ ಅಂದೋಲನಗಾರರು ಸಂತೋಷದ ನಿಟ್ಟುಸಿರು ಬಿಟ್ಟಿದ್ದರು. ತಾ: 3-1-84 ರಂದು ಚಳುವಳಿಗಾರರೆಲ್ಲಾ ಸೇರಿ ಈ ರೀತಿ ಯಿಂದ (ಮಂತ್ರಿಗಳು ಸೂಚಿಸಿದ ರೀತಿ)ಮರಗಳನ್ನು ಕಡಿಯಲು ಕೊಡಬೇಕೊ? ಬೇಡವೊ? ಎಂಬುದರ ಬಗ್ಗೆ ಬಿಳಗಲೆ ಅಡವಿಯಲ್ಲಿ ಚರ್ಚಿಸಿದರು. ಜನರೆಲ್ಲಾ ಸೇರಿ ಈ ಕೆಳಗೆ ನಮೂದಿಸಿದ ಶರತ್ತಿನ ಮೇಲೆ ಹಸಿರು ಅರಣ್ಯಗಳಲ್ಲಿ ( )ಎಕರೆಗೆ ಎರಡು ಮರಗಳನ್ನೂ ಮತ್ತು ಎಲೆ ಉದುರಿಸುವ ಅರಣ್ಯಗಳಲ್ಲಿ ಎಕರೆಗೆ ನಾಲ್ಕು ಮರಗಳನ್ನು ಕಡಿಯಲು ಕೊಡಬಹುದೆಂದು ನಿರ್ಣಯಿಸಿದರು.

1) ಕಡಿಯುವ ಮರಗಳ ಅಂತರ ಕನಿಷ್ಠ ಮರದಿಂದ ಮರಕ್ಕೆ ಮೂತ್ತೈದು ಮೀಟರುಗಳು ಇರಬೇಕು.

2) ಕಡಿಯುವ ಮರಗಳ ಸುತ್ತಳತೆ ಕನಿಷ್ಠ ಎರಡೂವರೆ ಮೀಟರುಗಳಾದರೂ ಇರಬೇಕು

3) ತೀರ ಇಳಿಜಾರು ಹಾಗೂ ಕಲ್ಲುಗಳುಹೇರಳವಾಗಿ ಇದ್ದ ಪ್ರದೇಶಗಳಲ್ಲಿ ಮರಗಳನ್ನು ಕಡಿಯಬಾರದು.

4) ನೀರಿನ ಉಗಮಸ್ಥಾನ, ರಸ್ತುರಿ, ಹಳ್ಳ, ಹೊಳೆಗಳ ಪಕ್ಕದಲ್ಲಿ ಮರಗಳನ್ನು ಕಡಿಯ ಬಾರದು. ಅವುಗಳಿಂದ ಕನಿಷ್ಠ ನೂರು ಮೀಟರ ಅಂತರದಲ್ಲಿ ಮಾತ್ರ ಮರಗಳನ್ನು ಕಡಿಯಬೇಕು.

5) ಮರಗಳನ್ನು ತೆಗೆಯುವಾಗ(ಕಡಿಯುವಾಗ) ಸತ್ತ, ಸಾಯುತ್ತಿರುವ ಮತ್ತು ರೋಗಿಷ್ಠ ಮರಗಳಿಗೇ ಪ್ರಾಧಾನ್ಯತೆ ಕೊಡಬೇಕು. ಪ್ರತಿ ಎಕರೆಗೆ ಸತ್ತಮರಗಳೇ ಎರಡು(ಹಸಿರು ಅರಣ್ಯಗಳಲ್ಲಿ) ಮತ್ತು ನಾಲು(ಎಲೆ ಉದುರಿಸುವ ಅರಣ್ಯಗಳಲ್ಲಿ) ಕ್ರಮವಾಗಿ ದೊರೆತರೆ ಅವುಗಳನ್ನೇ ಕಡಿಯಬೇಕು.

6) ಅರಣ್ಯದಲ್ಲಿ ಮರಗಳನ್ನು ಕಡಿಯುವ ಮುನ್ನ ಸ್ಥಳೀಯ ಸಂಸ್ಥೆಗಳಾದ ಯುವಕ ಮಂಡಳ ಇಲ್ಲವೇ ಪಂಚಾಯತಗಳಿಗೆ ಒಂದು ಸೂಚನೆಯನ್ನು ಕೊಡಬೇಕು.

7) ಹಸಿರು ಮರವನ್ನು ವ್ಯಾಪಾರದ, ಅದಾಯದ ಉದ್ದೇಶದಿಂದ ಕಡಿಯುವದು ಸಂಪೂರ್ಣ ರೂಪದಿಂದ ನಿಲ್ಲಬೇಕು. ಇನ್ನು ಕೇವಲ ಮೂರು ವರ್ಷ ಮಾತ್ರ ಹಸಿರು ಮರ- ವನ್ನು ಮೇಲೆ ಹೇಳಿದ ರೀತಿಯಲ್ಲಿ ಕಡಿಯಲು ಕೊಡಲಾಗುವದು. ಅಷ್ಟರಲ್ಲಿ

..2

ಅರಣ್ಯ ಆಧಾರಿತ ಕಾರಕಾನೆಗಳು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು.

7) ಕಡಿಮೆ ಕಾಡಿರುವ ಕ್ಷೇತ್ರದಲ್ಲಿ ಹಸಿರು ಮರವನ್ನು ಕಡಿಯಲು ಕೊಡಲಾಗುವದಿಲ್ಲ. ಇದನ್ನು ನಿರ್ಧರಿಸುವವರು ಜನರು.

8) ಒಂದೇ ಅರಣ್ಯದಲ್ಲಿ ಈಗ ಎರಡು ಮೂರು ಸಾರೆ ವಿವಿಧ ಕಂಪನಿಗಳೂ ಮತ್ತು ಇಲಾಖೆಯವರೂ ಬೇರೆ ಬೇರೆ ಕ ಕಾಲಾಕಾಲ ವರ್ಷಗಳಲ್ಲಿ ಕಡಿಯುತ್ತಿದ್ದಾರೆ. ಈ ಕ್ರಮವನ್ನೂ ನಿಲ್ಲಿಸಿ ಒಂದೇ ವರ್ಷ ಎಲ್ಲರೂ(ಕಂಪನಿಗಳೂ) ಕಡಿಯುವಂತೆ ಹಾ ಮಾಡಿ ಹಾನಿಯನ್ನು ( ) ಕಡಿಮೆ ಗೊಳಿಸಬೇಕು.

ಮೇಲ್ಕಾಣಿಸಿದ ಶರತ್ತುಗಳನ್ವಯ ಮರಗಳನ್ನು ಕಡಿಯಲು ಕೊಡಬಹುದೆಂದು ನಿರ್ಣಯಿಸಿದ ಜನತೆ ನಿಶ್ಚಿಂತೆಯಿಂದಿದ್ದರು.. ಅಲ್ಲದೆ ಈಗ ಮರಗಳನ್ನು ಕಡಿಯಲ್ಪಡುತ್ತಿದ್ದ ಅರಣ್ಯಗಳಲ್ಲಿ ಮರಗಳಿಗೆ ಪುನಃ ಗುರುತುಗಳನ್ನು ಹಾಕಿ ( ) ಕಡಿಯುವ ದಾಗಿ ಮಾನ್ಯ ಅರಣ್ಯಮಂತ್ರಿಗಳು ಆಶ್ವಾಸನೆಯಿತ್ತಿದ್ದರು.

ಆದರೆ ಮಂತ್ರಿಗಳ ಭೇಟಿಯ ನಂತರ ಉಸರೆ ಹಾಗೂ ನಿಡಗೋಡ ಅರಣ್ಯಗಳಲ್ಲಿ ಅಕ್ರಮವಾಗಿ(ಇಲಾಖೆಯರೇ ಶಾಮೀಲಾಗಿ) ಗುತ್ತಿಗೆದಾರರು ಮರಕಡಿಯುತ್ತಿದ್ದಾರೆ. ಕೆಲಸಗಾರರು ಹೆಲ್ಲಳುವಂತೆ 15-20 ದಿನಗಳಿಂದ ಅವರು ಮರಕಡಿಯುತ್ತಿದ್ದಾರೆ. ಕಡಿದ ಮರಗಳಿಗೆ ಪುನಃ ಗುರುತನ್ನೂ ಮಾಡದಿರುವುದನ್ನು ಸ್ವತಃ ಜನರೇ ಅರಣ್ಯಗಳಿಗೆ ಭೇಟಿಯಿತ್ತು ಕಣ್ಣಾರೆ ಕಂಡರು.

ಗುತ್ತಿಗೆದಾರರು ಅರಣ್ಯಗಳಲ್ಲಿ ಮರಕಡಿಯುತ್ತಿರುವದನ್ನು ನೋಡಿದ ಜನರು ಇದರ ಬಗ್ಗೆ ವಿಚಾರಿಸಲು ವಿಭಾಗೀಯ ಅರಣ್ಯ ಅಧಿಕಾರಿಗಳನ್ನು ಭೇಟಿಯಾಗಲು ಅವರ ಕಛೇರಿಗೆ ಹೋದಾಗ ಮೇಲಿನ ಅಧಿಕಾರಿಗಳು ಬೆಂಗಳೂರ ಮತ್ತು ಕಾರವಾರಗಳಿಗೆ ಹೋಗಿರುವುದಾಗಿ ತಿಳಿದ ಜನರು ಸುಪರಿಂಚೆಂಟ ರಲ್ಲಿ ಮರಕಡಿಯುವ ಆಜ್ಞೆಯನ್ನು ಪುನಃ ಕೊಟ್ಟ ಬಗ್ಗೆ ವಿಚಾರಿಸಿದರು. ಆದರೆ ಈವರೆಗೆ ಮರಗಳನ್ನು ಕಡಿಯಲು ಪುನಃ ಕೊಟ್ಟಲ್ಲವಾಗಿ ಅವರಿಂದ ತಿಳಿದು ಬಂತು.

ಅರಣ್ಯ ಅಧಿಕಾರಿಗಳ ಆಜ್ಞೆಯನ್ನು ನಿರೀಕ್ಷಿಸದೇ ಈ ರೀತಿ ಅರಣ್ಯಗಳನ್ನು ಕಡಿಯುತ್ತಿರುವದನ್ನು ನೋಡಿದ ಚಳುವಳಿಗಾರರು 'ಅಪ್ಪಿಕೋ' ಚಳುವಳಿಯನ್ನು ತೀರ್ವಗೊಳಿಸುವ ಸಾಧ್ಯತೆಗಳಿಗೆ ಎಂದು ಪರಿಸರ ಸಂರಕ್ಷಣ ಕೇಂದ್ರದ ಮೂಲಗಳಿದ ತಿಳಿದು ಬರುತ್ತದೆ.

ತಾ:3-1-84 ರಂದು ಬಳಿಗಲ ಅಡವಿಯಲ್ಲಿ ಕೂಡಿದ ಜನತೆ ಬೆಟ್ಟಗಳಲ್ಲಿ ಮತ್ತು ಮರಗಳಲ್ಲಿದ್ದ ಮೈನರ ಜಂಗಲ್ಲುಗಳಲ್ಲಿ ಇಲ್ಲಿಯವೇ ಗಿಡಗಳನ್ನು ನೆಡಲು ನಿರ್ಣಯಿಸಿದರು. ಬೆಟ್ಟ ಪ್ರದೇಶಗಳನ್ನು ಇನ್ನೂ ಉತ್ತಮವಾಗಿ ಇಡುವದರ ಬಗ್ಗೆ ಎಚ್ಚರ ವಹಿಸುವುದೆಂದು ನಿರ್ಣಯಿಸಿದರು. ಅರಣ್ಯಜನ್ಯ ವಸ್ತುಗಳನ್ನು ಮಿತವಾಗಿ ಬಳಕೆ ಮಾಡಲೂ ಇಚ್ಛೆಯನ್ನು ವ್ಯಕ್ತಪಡಿಸಿದರು.

ಅರಣ್ಯ ಮಂತ್ರಿ ಶ್ರೀ ಜೀವಿಜಯ ಕಾಡನ್ನು ಉಳಿಸುವ, ಸಂರಕ್ಷಿಸುವತ್ತ 'ಅಪ್ಪಿಕೋ' ವನ್ನು ಹಬ್ಬುವಂತೆ ಹಾರೈಸಿ ಅರಣ್ಯನೀತಿಯಲ್ಲಾದ ಬದಲಾವಣೆಯನ್ನು ಶಿರಸಿಗೆ ಬಂದಾಗ ಘೋಷಿಸಿದ್ದರು. ಆದರೆ ಅರಣ್ಯ ಇಲಾಖೆ ಅಧಿಕಾರಿಗಳು ಗುತ್ತಿಗೆದಾರರು ಶಾಮೀಲಾಗಿ ಮರ ಕಡಿಯುವ ಕೆಲಸವನ್ನು ಜಾರಿ ಇಟ್ಟಿದ್ದಾರೆ. ಈ ಎಲ್ಲ ಕಾರಣಗಳಿಂದ 'ಅಪ್ಪಿಕೋ' ವನ್ನು ತೀವ್ರಗೊಳಿಸದೇ ಬೇರೆ ಹಾದಿ ಜನರ ಹತ್ತಿರ ಇಲ್ಲವಾಗಿದೆ.

20-1-84

ಪರಿಸರ ಸಂರಕ್ಷಣಾ ಕೇಂದ್ರ
ಶಿರಸಿ - 581 401

ಪತ್ರಿಕಾ ವರದಿ

ಅಪ್ಪಿಕೋ ಪುನರಾರಂಭ

ಕರ್ನಾಟಕದಲ್ಲಿ ಪರಿಸರ ಜಾಗೃತಿಗೆ ಕಾರಣವಾದ ಅಪ್ಪಿಕೋ ಚಳವಳಿಯಿಂದ ಜನ್ಮ ಸ್ಥಳವಾದ ಶಿರಸಿ ತಾಲೂಕಿನಲ್ಲಿ ಫ್ಲಾಂಟೇಷನ್ ಕಾರಕಾನೆಯವರು ಬೇಡ್ತಿ ನದಿ ವಲಯದಲ್ಲಿ ಮರ ಕಡಿಯುತ್ತಿರುವದನ್ನು ತಡೆಯಲು ಜನರು ಅಪ್ಪಿಕೋ ಪುನ: ಆರಂಭಿಸಿದ್ದಾರೆ.

ಮಾನಳ್ಳಿಯಿಂದ ಹತ್ತಿರ ಬೇಡ್ತಿ ನದಿಯಿಂದ ಉಪನದಿಗಳಲ್ಲಿ ಒಂದಾದ ಪಟ್ಟಣದ ಹೊಳೆಯಿಂದ ವಲಯದಲ್ಲಿ ಫ್ಲಾಂಟೇಷನ್ ಕಾರಕಾನೆಯವರು ಮರ ಕಡಿಯಲು ಆರಂಭಿಸಿದರು. ಕಳೆದ ಸುತ್ತಮುತ್ತಲಿನ ಹಳ್ಳಿಗಳಾದ ವಜಂಡಗದವನೆ, ವೆಣಸಿ ಊರಿನಿಂದ ಜನರು ಒಟ್ಟಾಗಿ ಮರ ಕಡಿಯುವದನ್ನು ನಿಲ್ಲಿಸಿದರು. ಒಂದು ವಾರದಿಂದ ಹಗಲು ರಾತ್ರಿ ಜನರು ಅರಣ್ಯದಲ್ಲಿ ವಾಸ ಮಾಡಿಕೊಂಡಿದ್ದು ಮರ ಕಡಿಯುವ ಕೆಲಸವನ್ನು ನಿಲ್ಲಿಸಿದ್ದಾರೆ.

ನದಿ ವಲಯದಲ್ಲಿ ಹಸಿರು ಪರದೆಯನ್ನು ಕಡಿಯಬಾರದೆಂಬ ಸರಕಾರದ ಕಾಯ್ದೆ ಇದ್ದರೂ ಸಹ ಇಲ್ಲಿ ಮರ ಕಡಿಯಲು ಅರಣ್ಯ ಇಲಾಖೆ ಅಪ್ಪಣೆ ನೀಡಿದೆ. ಇದರಿಂದ ಬೇಡ್ತಿ ನದಿಯಲ್ಲಿ ಪ್ರವಾಹ ಬರುವ ಸಂಭವ ಹೆಚ್ಚುವದಲ್ಲದೇ ಕರಾವಳಿಯಿಂದ ಕ್ಷೇತ್ರದ ಜನ ಜೀವನದ ಮೇಲೆ ಹಾನಿಕಾರಕ ಪರಿಣಾಮ ಬೀಳುವದು. ಈ ಜಲಾನಯನದ ಕ್ಷೇತ್ರದಲ್ಲಿ ಮರ ಕಡಿತ ಮುಂದುವರಿದರೆ ಮುಂಬರುವ ವರ್ಷ-ಗಳಲ್ಲಿ ಕರಾವಳಿ ಪ್ರದೇಶದಲ್ಲಿ ಹಾಳು ತುಂಬಿ ಜಲವಿದ್ಯುತ್ ಯೋಜನೆಗಳ ಮೇಲೆ ಪರಿಣಾಮ ಬೀರುತ್ತದೆ.

ಶಿರಸಿ ಕ್ಷೇತ್ರದಲ್ಲಿ ಹಲವಾರು ಸ್ಥಳದಲ್ಲಿ ಫ್ಲಾಂಟೇಷನ್ ಕಾರಕಾನೆಯವರು ಮರ ಕಡಿದಿದ್ದು, ಜನರು ಇದಕ್ಕೆ ಅಡ್ಡಿ ಪಡಿಸಲಿಲ್ಲ. ಆದರೆ ಈಗ ಅತೀ ಮಹತ್ವಪೂರ್ಣ ಸ್ಥಳದಲ್ಲಿ ಮರ ಕಡಿಯುವದನ್ನು ನೋಡುತ್ತ ನಿಲ್ಲದೇ, ಮುಂಬರುವ ಅಪಾಯವನ್ನು ಅರಿತು ತಮ್ಮ ಜೀವನದ ಷ್ಟಂಗನ್ನು ತೊರೆದು ಹಗಲು ರಾತ್ರಿ ಅರಣ್ಯದಲ್ಲೇ ವಾಸ ಮಾಡಿ ಮರ ಕಡಿಯುವದನ್ನು ನಿಲ್ಲಿಸಿ-ದ್ದಾರೆ.

ಇದೇ ಕ್ಷೇತ್ರದಲ್ಲಿ ಬೆತ್ತವನ್ನು ಅನಧಿಕೃತವಾಗಿ ಕಡಿಯುವದನ್ನೂ ಸಹ ಜನರು ನಿಲ್ಲಿಸಿ-ದ್ದಾರೆ. ಸಂಪೂರ್ಣ ಸಿರ್ಸಿ ಅರಣ್ಯ ವಿಭಾಗದಿಂದ ಕೇವಲ 25,000 ಬೆತ್ತವನ್ನು ಮಾತ್ರ ಕಡಿಯುವ ಆದೇಶವನ್ನು ಇಲಾಖೆ ನೀಡಿದೆ ಎಂದು ತಿಳಿದು ಬಂದಿದೆ. ಆದರೆ ಇಂದು ಇದೇ ಅರಣ್ಯ ಇಲಾಖೆ ತನ್ನ ಸಿಬ್ಬಂದಿಗಳ ಮುಖಾಂತರ 1 ಲಕ್ಷಕ್ಕೂ ಹೆಚ್ಚು ಬೆತ್ತವನ್ನು ಕಡಿದು ಸಂಗ್ರಹಿಸಿದ್ದನ್ನು ಜನರು ಕಂಡು ಹಿಡಿದಿದ್ದಾರೆ. ಅಪ್ಪಿಕೋ ವಿಚಾರದಿಂದ ಪ್ರೇರಿತರಾಗಿ ಹಲವಾರು ಹಳ್ಳಿಗಳಲ್ಲಿ ಜನರು ಬೀಜ ಸಂಗ್ರಹಣೆಯಲ್ಲಿ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರು ಮುಂಬರುವ ತಿಂಗಳಲ್ಲಿ ವ್ಯಾಪಕವಾದ ಗಿಡ ಬೆಳೆಸುವ ಕಾರ್ಯವನ್ನು ಹಾಕಿಕೊಂಡಿದ್ದಾರೆ. ಪರಿಸರದಲ್ಲಿ ಮತ್ತೆ ಹಸಿರನ್ನು ಬೆಳೆಯಿಸು-ವದು ಅಪ್ಪಿಕೋದ ಉದ್ದೇಶವಾಗಿದೆ.

4-4-1984.

— ಪರಿಸರ ಸಂರಕ್ಷಣಾ ಕೇಂದ್ರ,

ಪತ್ರಿಕಾ ವರದಿ

ಪರಿಸರ ಸಂರಕ್ಷಣಾ ಕೇಂದ್ರ
ಹುಲೇಮಳಗಿ ಬಿಲ್ಡಿಂಗ್,
ಶಿರಸಿ (ಉತ್ತರ ಕನ್ನಡ) ೫೮೧ ೪೦೧

Office copy

18

ಯಾಣ ಉಳಿಸಿ

ಅಪ್ಪಿಕೋ ಆಂದೋಲನ ಅರಂಭವಾಗಿ ಅಗಾಧ ಪ್ರಮಾಣದಲ್ಲಿ ಮರಗಳನ್ನು ಕಡಿದುದುಳಿಸುವದನ್ನು ತಡೆದದ್ದಲ್ಲದೇ ಇದೇ ಜಾಗ ತಿಂಗಳಲ್ಲಿ ಬೋಳಾದ ಭೂಪ್ರದೇಶಗಳಲ್ಲಿ ಗಿಡಗಳನ್ನು ಬೆಳೆಸುವ ಕಾರ್ಯಕ್ರಮಕ್ಕೆ ಈಗಾಗಲೇ ಬೀಜ ಸಂಗ್ರಹಣೆ ನಡೆಯುತ್ತಾ ಇದೆ. ಪರಿಸರವನ್ನು ಕಾಪಾಡಲು ನೆರವಾಗುವಂತಹ ಅರಣ್ಯಗಳಿಗೆ ಈಗಾಗಲೇ ತೀರ ಹಾನಿಯಾಗಿದ್ದು ಮರಗಳನ್ನು ಉಳಿಸುವದೊಂದಿಗೆ ಗಿಡಗಳನ್ನು ನೆಡುವದೂ ಮಹತ್ವದ್ದಾಗಿದೆ.

ಪ್ರತಿ ವರ್ಷ ಶಿವರಾತ್ರಿಯಲ್ಲಿ ಸಾವಿರ ಸಂಖ್ಯೆಯಲ್ಲಿ ಯಾತ್ರಾರ್ಥಿಗಳನ್ನು ಆಕರ್ಷಿಸುವ, ಪ್ರಾಕೃತಿಕವಾಗಿ ಅತೀ ರಮ್ಯವಾಗಿರುವ ಕುಮಟಾ ತಾಲೂಕಿನಲ್ಲಿರುವ ಯಾಣದಲ್ಲಿ ಸುಣ್ಣದಕಲ್ಲೂ ಹೇರಳವಾಗಿ ಲಭ್ಯವಿದೆ. ಅಲ್ಲಿ ಉದ್ಯಮಿಗಳು ಸಿಮೆಂಟ ಫ್ಯಾಕ್ಟರಿಯನ್ನು ಪ್ರಾರಂಭಿಸುವ ಯೋಜನೆಯಲ್ಲಿದ್ದಾರೆ. ಸಹ್ಯಾದ್ರಿ ಅರಣ್ಯದ ಇಳಿಜಾರು ಪ್ರದೇಶದಲ್ಲಿ ತೇವಯುಕ್ತ ಸದಾ ಹಸಿರು ಅರಣ್ಯವನ್ನು ಹೊಂದಿದ್ದ ಈ ಪ್ರದೇಶ ಪರಿಸರದ ದೃಷ್ಟಿಯಿಂದ ಸೂಕ್ಷ್ಮವೂ ಮಹತ್ವದ್ದೂ ಆಗಿದೆ.

ಇಂತಹ ದಟ್ಟ ಅರಣ್ಯ ಪ್ರದೇಶಗಳಲ್ಲಿ ಸಿಮೆಂಟ ಉದ್ದಿಮೆಯನ್ನು ಸ್ಥಾಪಿಸುವದರಿಂದ ಇಲ್ಲಿ ಉಳಿದ ಅಲ್ಪ ಸದಾ ಹಸಿರು ಕಾಡು ನಾಶವಾಗುವದಲ್ಲದೇ ಕರ್ನಾಟಕದಲ್ಲಿಯೇ ಅತೀ ರಮಣೀಯ ಹಾಗೂ ಮಹತ್ವದ್ದಾದ ಅರಣ್ಯ ಪ್ರದೇಶ ಇಲ್ಲದಂತಾಗುತ್ತವೆ.

ಸಿರ್ಸಿ ತಾಲೂಕಿನ ದೇವನಮನೆಯಲ್ಲಿ ಭೂಗರ್ಭ ಇಲಾಖೆಯವರು ಮ್ಯಾಂಗನೀಸ್ ಅದಿರನ್ನು ತೆಗೆಯಲು ಯೋಜಿಸಿದ್ದು ಸಿರ್ಸಿ, ಅಂಕೋಲಾ, ಕುಮಟಾ ತಾಲೂಕುಗಳಲ್ಲಿಯ ಸುಮಾರು ಐದು ಸಾವಿರ ಎಕರೆ ಅರಣ್ಯ ಪ್ರದೇಶವನ್ನು ಇಲಾಖೆಯವರು ಅರಣ್ಯ ಇಲಾಖೆಯವರಲ್ಲಿ ಬಿಟ್ಟು ಕೊಡಲು ಕೇಳಿದ್ದಾರೆ.

ಇದೇ ರೀತಿ ಉದ್ದಿಮೆಗಳು ಹಾಗೂ ಖನಿಜಗಳ ಸಲುವಾಗಿ ಮಹತ್ವವಾದ ಅರಣ್ಯವನ್ನು ನಾಶ ಮಾಡುತ್ತ ನಡೆದರೆ ಪರಿಸರವು ಅಸಮತೋಲನಹೊಂದಿ ಜೀವಿಗಳ ಜೀವನವೇ ಗಂಡಾಂತರದಲ್ಲಿ ಬೀಳಬಹುದು.

ಇದರಿಂದ ಯಾಣದಲ್ಲಿ ಯೋಜಿಸಿರುವ ಸಿಮೆಂಟ ಉದ್ದಿಮೆ ಹಾಗೂ ದೇವನ ಮನೆಯಲ್ಲಿ ನಡೆಯುವ ಮ್ಯಾಂಗನೀಸ್ ಅಗೆತ ಇವುಗಳನ್ನು ವಿರೋಧಿಸಲು ಜನರು ಸಂಘಟಿತರಾಗಿದ್ದಾರೆ. ಯಾವದೇ ಸಂದರ್ಭದಲ್ಲೂ ಈ ಪ್ರದೇಶಗಳಲ್ಲಿಯ ಅರಣ್ಯನಾಶವನ್ನು ತಡೆಯಲು ತೀರ್ಮಾನ ಕೈಗೊಂಡಿದ್ದಾರೆ.

ಪರಿಸರ ಸಂರಕ್ಷಣಾ ಕೇಂದ್ರದ ಆಶ್ರಯದಲ್ಲಿ ಸೇರಿದ ಸಭೆಯಲ್ಲಿ ಇನ್ನು ಮುಂದೆ ಅರಣ್ಯ ಇಲಾಖೆ ಟೆಂಡರ್ ಹಾಕಿ ಮರ ಕಡಿಯಲು ಕೇಳಿದಲ್ಲಿ ಅದನ್ನು ವಿರೋಧಿಸಬೇಕೆಂದು ನಿರ್ಣಯಿಸಲಾಯಿತು. ಅರಣ್ಯ ಗುತ್ತಿಗೆದಾರರು ಈ ವರ್ಷ ಯಾವದೇ ಟೆಂಡರನ್ನು ಹಾಕಬಾರೆಂದು ಕೇಳಿಕೊಳ್ಳುತ್ತೇವೆ. ಅವರು, ಇದನ್ನು ಪರಿಗಣಿಸದಿದ್ದರೆ ಅಪ್ಪಿಕೋ ಮೂಲಕ ಅವರ ಕೆಲಸವನ್ನು ನಿಲ್ಲಿಸಲಾಗುವದು.

ಯಾಂಡ್ ರಾಂಕ.

ಪತ್ರಿಕಾ ವರದಿ.

ದಿನಾಂಕ: 4-6-84.

ಪರಿಸರ ಸಂರಕ್ಷಣಾ ಕೇಂದ್ರ,

ಶಿರಸಿ.

1984ನೇ ಸಪ್ಟೆಂಬರ್ 22, 23 ರಂದು ಸಿರ್ಸಿ ತಾಲೂಕ ಶಿಗೇಹಳ್ಳಿಯಲ್ಲಿ ನಡೆದ ಅರಣ್ಯ ಶಿಭಿರದ ವರದಿ —

ದಿನಾಂಕ 22ರಂದು ಬೆಳಿಗ್ಗೆ 10·30ಕ್ಕೆ ಶಿಭಿರದ ಉದ್ಘಾಟನೆ ಸಮಾರಂಭವನ್ನು ರುಪು ಗೌಡ ಇವರಿಂದ ಕಲ್ಪವೃಕ್ಷವಾದ ತೆಂಗಿನ ಸಸಿ ನೆಡುವದರಿಂದ ಪ್ರಾರಂಭವಾಗಿ ನಂತರ ಸುಬ್ರಾಯ ಹೆಗಡೆ ಕಡಬಾಳ ಇವರು ಜ್ಯೋತಿ ಬೆಳಗಿಸಿದರು. ಶಿಭಿರದ ಅಧ್ಯಕ್ಷರಾಗಿ ಸುಬ್ರಾಯ ಹೆಗಡೆಯವರನ್ನು ಆರಿಸಲಾಯಿತು. ಚಂದ್ರಮೌಳೇಶ್ವರ ಹೆಗಡೆ ಶೀಗೇಹಳ್ಳಿ ಇವರಿಂದ ಸ್ವಾಗತ. ನಂತರ ಗಣಪತಿ ಪೂಜೆಯನ್ನು ಯಕ್ಷಗಾನ ಪದ್ಧತಿಯಿಂದ ಗುಬ್ಬಿಗದ್ದೆ ಮಹಾಭಲೇಶ್ವರ ಹೆಗಡೆ ಭಾಗವತರಾಗಿ ಹಾಗೂ ಕೇಶವ ಹೆಗಡೆ ಶಿಗೇಹಳ್ಳಿ ಇವರು ಮದ್ದಲೆಗಾಗಿ ನೀಡಿ ಗಣಪತಿ ಪೂಜಾಕಾರ್ಯ ನಡೆಯಿತು.

ಅನಂತರ ಅಧ್ಯಕ್ಷರು ಪ್ರೋತ್ಸಾಹಿಕ ಭಾಷಣಮಾತನಾಡುತ್ತ ಸರಕಾರ ಬೆಳೆಬೇಸಾಯಕ್ಕೆ ಎಷ್ಟೇ ಗೊಬ್ಬರ ಕ್ರಿಮಿನಾಶಕವನ್ನು ಕೊಟ್ಟರೂ ಅವರಿಂದ ಬೇಸಾಯ ಸರಿಯಾಗಿ ನಡೆಯುವುದಿಲ್ಲ. ಅದಕ್ಕೆ ಪರಿಸರ ಅವಶ್ಯ. ಅರಣ್ಯದಿಂದ ಮಾತ್ರ ಇದು ಸಾಧ್ಯವೇ ವಿನ: ಇನ್ನಾವದರಿಂದಲೂ, ಸಾಧ್ಯವಿಲ್ಲ. ಕೃಷಿಗೆ ಹಸಿರು ಅವಶ್ಯವಾಗಿದೆ. ಹೊಸ ಮಾದರಿಯಿಂದ ಕೃಷಿ ಮಾಡಿದರೆ ಒಂದು ಗಿಡ 50 ವರ್ಷವೂ ಬದುಕುವದಿಲ್ಲ. ಮಣ್ಣಿನಲ್ಲಿರುವ ನಂಜನ್ನು ಹಿರುವದಕ್ಕೆ ಸೊಪ್ಪು ತರಕನ್ನು ಹಾಕಲೇಬೇಕಾಗುತ್ತದೆ. ಆದ್ದರಿಂದ ಎಷ್ಟೇ ತೊಂದರೆ ಬಂದರೂ ನಾವಲ್ಲಿ ಈ ಪ್ರತಿಭಟನೆಯನ್ನು ಒಂದು ಸರಿಯಾದ ಹಂತ ಬರುವವರೆಗೂ ಕೈಬಿಡಬಾರದು. ಎಂದು ಶಿಭಿರಾರ್ಥಿಗಳಿಗೆ ಒತ್ತಿ ಹೇಳಿದರು. ಹಾಗಾಗಿ ನಾವೆಲ್ಲ ಇನ್ನೂ ಹೆಚ್ಚಿನ ಸಂಘಟಿತರಾಗಿ ಅಪ್ಪಿಕೋಚಳುವಳಿಯ ಮುಖಾಂತರ ಪ್ರತಿಭಟನೆ ಮಾಡಬೇಕು ಅಂತೆಯೆ. ಅರಣ್ಯ ನಾಶವನ್ನು ತಡೆಗಟ್ಟಬೇಕು. ಬೆಟ್ಟಗಳಲ್ಲಿ ಜಂಗಲಗಳಲ್ಲಿ ಗಿಡಗಳನ್ನು ನಾವು ಬೆಳೆಸಕೊಡುತ್ತೇವೆ ಎನ್ನುವದನ್ನು ತೋರಿಸಿ ಕೊಡಬೇಕು. ಹಾಳಾಗುವ ಗಿಡಗಳನ್ನು ಅವಶ್ಯ ಬಳಕೆಗೆ ಮಿತವ್ಯಯವಾಗಿ ಬೆಳೆಸಬೇಕು. ಪರಿಸರಕ್ಕೆ ತಕ್ಕಂತೆ ನಮ್ಮ ವಿಚಾರವನ್ನು ಸೌಹಾರ್ದಯುತವಾಗಿ ಅಧಿಕಾರಿಗಳೊಂದಿಗೆ ಚರ್ಚೆನಡೆಸಿ ನಮ್ಮ ಕಾರ್ಯ ಸಾಗಲಿ ಎಂದು ಶಿಭಿರಾರ್ಥಿಗಳಿಗೆ ಉಪದೇಶಿಸಿದರು. ಈ ಕಾರ್ಯ ಸಂಪೂರ್ಣವಾಗಿ ನೇರವೇರಲಿ ಎಂತಾ ಹೇಳಿ ಮಹಾಗಣಪತಿಯನ್ನು ಆರಾಧಿಸುತ್ತ ತಮ್ಮ ಮಾತನ್ನು ಮುಗಿಸಿದರು.

ಚರ್ಚೆ — ಅರಣ್ಯದ ಬೆಳೆಯ ಕುರಿತು ಮಾಡಿದ ನಿಣಯಿಯ —

1) ಹೊಸ ಒಲೆ ಅಸ್ತ್ರಬಲೆಯನ್ನು ಹೆಚ್ಚಿನ ರೀತಿಯಲ್ಲಿ ಜನರು ಬಳಸುವಂತೆ ವಿಶೇಷವಾಗಿ ಜನರಲ್ಲಿ ಬಿಂಬಿಸಿ ಕಾರ್ಯರೂಪಕ್ಕೆ ಬರುವಂತೆ ಮಾಡುವದು.

2) ಕೃಷಿಕರು, ತಮ್ಮ ಸೊಪ್ಪಿನ ಕಡಿತದ ಅವಧಿಯನ್ನು ಏರಿಸುವದು ಮತ್ತು ವಿಶೇಷ ಸಂದರ್ಭದಲ್ಲಿ ಅವಶ್ಯ ಬಳಕೆಗೆ ಬೇಕಾದ ಕಟ್ಟಿಗೆಗೆ ಅರಣ್ಯ ಇಲಾಖೆಯವರ ಸಹಾಯವನ್ನು ಅಪೇಕ್ಷಿಸಿ ನಾವು ಬಳಸಿಕೊಳ್ಳುವದು.

3) ಸಸಿ ಬೆಳಸಿಕೊಂಡು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಆಸಕ್ತಿ ಜನರಿಗೆ ಮೇನರ ಜಂಗಲ ಜಾಗೆಯನ್ನು ಕೊಡುವಂತೆ ಅರಣ್ಯ ಇಲಾಖೆಯಲ್ಲಿ ಬೆಡಿಕೆ ಸಲ್ಲಿಸುವದು. ಮತ್ತು ಹಾಳಾಗುವಂತೆ ಸೊಪ್ಪನ್ನು ಕಡಿಯುವ ಜನರಿಗೆ ತಿಳುವಳಿಕೆ ಕೊಡುವದು. ಈ ರೀತಿ ನಿರ್ಣಯವನ್ನು ತೆಗೆದುಕೊಳ್ಳುವದರೊಂದಿಗೆ ಬೆಳಗಿನ ಕಾರ್ಯಕ್ರಮ ಮುಕ್ತಾಯವಾಯಿತು.

ಅದೇ ದಿನ ಮಧ್ಯಾಹ್ನ 3-00 ಷಂಟೆಗೆ ಶಿಗೇಹಳ್ಳಿ ಸಂಸ್ಕೃತ ಪಾಠಶಾಲೆ ಹತ್ತಿರದ ಜಾಗೆಯಲ್ಲಿ ಶ್ರಮಧಾನದ ಮುಖಾಂತರ ಬರುವ ವರ್ಷ ಸಸಿ ನಡೆವ ಸಲುವಾಗಿ 200ಕ್ಕೂ ಹೆಚ್ಚು ಕುಳಿಯನ್ನು ತೆಗೆಯಲಾಯಿತು. 23ರಂದು ಅಸ್ತ್ರ ಒಲೆಯ ಬಗ್ಗೆ ಪ್ರತ್ಯಕ್ಷ ಮಾಹಿತಯನ್ನು ಶಿಭಿರಾರ್ಥಿಗಳಿಗೆ ಕೊಡಲಾಯಿತು. ಅದರಲ್ಲಿ ಒಂದು ಬಲೆಯನ್ನು ಜನರ ಮಾಹಿತಿಗಾಗಿ ಹಾಗೂ ಎರಡು ಒಲೆಯನ್ನು ಬಳಕೆಯ ಸಲುವಾಗಿ ಹಾಕಲಾಯಿತು.

ಸ್ವಾಗತ ಭಾಷಣ ಶಾಂತಾರಾಮ ಹೆಗಡೆ ಶಿಗೇಹಳ್ಳಿ ಇವರಿಂದ ಮುಖ್ಯ ಅಥಿತಿಗಳಾಗಿ ಆಗಮಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪ್ರವೀಣ ಚಂದ ಪಾಂಡೆಯವರಿಂದ ನರ್ಸರಿ ಬಗ್ಗೆ ಮಾಹಿತಿ ಮತ್ತು ಚರ್ಚೆ ನಡೆಯಿತು.

ಅಧ್ಯಕ್ಷರಾದ ಸುಬ್ರಾಯ ಹೆಗಡೆಯವರು ಸಮಾರೋಪಮಾಡುತ್ತ ಇಲಾಖೆ ಮತ್ತು ಜನರು ಪರಸ್ಪರ ಸಹಕಾರದಿಂದ ಕೆಲಸ ಮಾಡುತ್ತ ಅರಣ್ಯ ಉಳಿಸುವದಕ್ಕೂ ಬೆಳೆಸುವದಕ್ಕೂ ಪ್ರಯತ್ನ ಮಾಡಬೇಕೆಂದು ಹಾರೈಸಿದರು.

ಚಂದ್ರಮೌಳೇಶ್ವರ ಹೆಗಡೆಯವರು ಅಭಿನಂದನೆಯೊಂದಿಗೆ ಶಿರ್ಸಿ ತಾಲೂಕಿನ ಶಿಗೇಹಳ್ಳಿಯಲ್ಲಿ ನಡೆದ ಎರಡು ದಿನದ ಶಿಭಿರ ಮುಕ್ತಾಯವಾಯಿತು.

ಎರಡುದಿನ ಶಿಭಿರದ ನಿರ್ದೇಶನವನ್ನು ಎಮ್. ಎನ್. ಹೆಗಡೆ ಗುಬ್ಬಿಗದ್ದೆಯವರು ನಡೆಸಿಕೊಟ್ಟರು.

ಪರಿಸರ ಸಂರಕ್ಷಣಾ ಕೇಂದ್ರ

ದಿನಾಂಕ 24-9-1984.

ಶಿ ರ ಸಿ (ಉ.ಕ.)

ಗ್ರೀನುಸೊಫಾ್ಟ ಅರ್ಜಿನಾವಿಕೆ

ಅಪ್ಪಿಕೊಳ್ಳಿ ಪ್ರತಿಜ್ಞೆ

"ಪೊಲಿಸ ಠಾಣೆ" ಎಂದು ಪ್ರಸಿದ್ಧವಾದ ಬಿಜಿಸಾಸಿಕ ಗ್ರೀನುಸೊಫಾ್ಟ ಅರ್ಜಿಕೆಯು ಜನರ ಗಮನ ಸೆಳೆಯುತ್ತಿದೆ. ಹೊಸಕ್ಕಿನ ಬಣ್ಣದ ಗ್ರೀನುಸೊಫಾ್ಟ ದೇಹದಿಂದ ಬರುವ ವಾಸನೆಗಳು ಅವರಿಂದಲೂ ಅರ್ಜಿಕೆ ಇಂಚಿ ಸಾಲುಗಳು ಸೊಳ್ಳೆ ಎಳೆದ ಹೇಗೆ ಬಂದು ಜನರ ಗಮನವನ್ನು ಸೆಳೆಯುತ್ತಿದೆ.

ಈ ಅರ್ಜಿಕೆ ಪ್ರದೇಶ ಪರಿಸರವನ್ನು ಸದಾ ಶುಚಿಯಾಗಿ ಇಟ್ಟುಕೊಳ್ಳಲು ಬಹಳ ಸಹಕರಿಸುತ್ತಿರುವುದಾಗಿ ನೆಲೆ ಜಾಗರಿ ಮಾಹಿತಿಗಳಿಂದ ತಿಳಿದುಬಂದಿದೆ. ಕಳೆದ ಸಾಲಿನ ತಪ್ಪುಗಳಿಂದ ಹೊಸಕ್ಕಿನ ಅರ್ಜಿಕೆಯ ಸಿಬ್ಬಂದಿಯು ನೆಲೆ ಜಾಗರಿಯಿಂದ ಕಷ್ಟಕ್ಕೀಡಾಗಿದ್ದಾರೆ.

ಇದೇ ಪ್ರದೇಶದಲ್ಲಿ ಎಷ್ಟೋ ವರ್ಷಗಳಿಂದ ಬಿದ್ದಿರುವ ಹಾಳುಬಿದ್ದ ಕಾರ್ಖಾನೆಯನ್ನು ತೆರವುಗೊಳಿಸಿದರೆ ಉತ್ತಮ — ಅರ್ಜಿಕೆ ಹೇಳಿದೆ. ಈ ವರ್ಷ ಮತ್ತೆ ಈ ಅರ್ಜಿಕೆಯವರು ಜನರಿಗೆ ಕೆಲವು ಪ್ರಾರಂಭಿಸಬಹುದು ಅವಾಂತರಗಳನ್ನು ತಡೆಯುವ ಮೂಲಕವೂ ಸಂತೋಷಪಡಿಸಿ.

ಈ ಪ್ರದೇಶಗಳಲ್ಲಿ ತಿರುಗಾಡಿ ಹಿಂತಿರುಗಿ ಬರುವ ಜನರ ಸಂಖ್ಯೆಯೂ ಹೆಚ್ಚಾಗಿ ಪಕ್ಕದ ಫ್ಲೈಟ್ ಅಮೃತಾಂಜನ ಅರ್ಜಿಕೆ ಸಂಪತ್ತನ್ನು ಉಳಿಸಲು "ಅಪ್ಪಿಕೊಳ್ಳಿ" ಜಳವಳಿಕೆಯನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ.

ಪತ್ರಿಕಾ ಪ್ರಕಟಣೆ

ದಿನಾಂಕ: 4-12-1984.

ಪರಿಸರ ಸಂರಕ್ಷಣಾ ಕೇಂದ್ರ.

PRESS RELEASE OF 18th JULY 1999

The Greenest Paper Mill in India

The Centre for Science and Environment releases the results of its Green Rating Project on the Pulp and Paper Industry

New Delhi: The greenest paper mill in India is the **JK Paper Mills** (JKPM) of Raygada of Orissa, according to the country's first ratings of the Indian pulp and paper industry carried out by the New Delhi based Centre for Science and Environment (CSE). JKPM is followed by **Andhra Pradesh Paper Mills Ltd.** (APPML) and the **Ballarpur unit of Ballarpur Industries Ltd.**

Sinar Mas Pulp and Paper, based in Pune district has also turned out to be a relatively cleaner mill. It was not, however, given a rating because the mill was not in operation during the period for which the performance of all the other mills was analysed. The mills which came at the bottom of the rating were Grasim Industries Ltd, based in Kerala, and Amrit Papers and Mukerian Paper Mills both of which are located in Punjab. The exercise was done under the green rating project of the CSE.

To arrive at a rating, a mill is evaluated using over 100 criteria under three categories - the corporate environment policy and management systems, the plant-level environmental performance, and the perception of the mill's environmental responsibility, including that of the local community. JKPM, for example, scored above 50 per cent in both environmental policy and community perception but got just 19 per cent in plant level performance. Most of the mills that were rated low were found to be having no environmental policy and using outdated technology. The rating process took about 18 months. In this period, environmental reports from Western countries were also consulted to get an idea about the best practices across the world. Then companies were sent outquestionnaires to fill in.

Former Finance Minister *Dr Manmohan Singh*, who chairs the project advisory panel, underscores the importance of the project. " Being environmentally-friendly is not only a moral obligation, it also makes good economic sense.... Ultimately a country like India cannot be governed by ever expanding regulations.... We must develop a more participatory style of management and regulations which rely more and more on self performance and self improvement. And ratings can help in inducing that change in mindset," says *Dr Singh.*

"What surprised CSE most was the willingness of the mills to give out information. We never expected a 100 per cent response," says *Anil Agarwal*, Director of CSE. Twenty eight plants with a capacity of over 100 tonnes per day production were approached by CSE to reveal information. Initially only one company did so. But as the deadline approached all companies sent in the details. These mills produce over 50 per cent of the country's paper and board.

The green rating report reveals, however, that the environmental health of the sector overall is not very good. Not one mill could get a five leaf rating (75-100 weighted score) or a four leaf rating (50-75 weighted score). Only two companies scraped into the three leaf category. As many as 12 companies were in the very poor one leaf category. The sector is plagued by resource use inefficiency, improper sourcing of raw material, outdated technology and a highly wasteful and polluting production process. The pulp and paper industry is one of the oldest in India. By international standards India is still a very low producer and consumer of paper. The aggregate capacity of Indian mills is not enough to meet the demands. Even pulp is in short supply and is usually imported. In the last 10 years or so, due to environmental concerns many modifications and upgradations have taken place in the industry in the West. However, to make these investments economical the size of the mill has to be much larger than what it is in India. Indian mills are normally one-tenth the size of foreign mills and hence very polluting. An average large-scale Indian mill has a capacity of 33,000 tons per annum while a large mill in Brazil or Sweden has a capacity of 3,00,000 tons per annum. Unless the paper industry upgrades its technology not only will it face an economic threat from foreign competitors but it will also continue to be a highly polluting sector.

The paper sector according to the green rating project has to improve its efficiency in the use of water, chemicals used for bleaching, energy and fibre. No policy has been developed by the government to help this sector promote farm forestry to source hardwood and bamboo for producing pulp. Even the 1988 forest policy says that commercial wood needs should be met from farmers. A few companies have, nonetheless, made some efforts to promote farm forestry to meet their wood needs. Worse still while almost 30 per cent of paper is recycled in India, it is not recycled to make paper. This is in stark contrast with countries like Japan that recycle 60 to 70 per cent of their paper. Also India today imports waste paper for the pulp and paper Industry.

The global debate over the use of chlorine free bleaching has largely bypassed the industry in India. Almost all mills continue to use chlorine to bleach paper. Use of chlorine can release a lot of dioxin and other chloroorganics that can enter the food chain. They have strong cancer causing properties. Though the pollution control boards have standards for AOX (total organochlorides) releases but no agency is monitoring their levels in the effluents.

Freshwater consumption by Indian mills is dangerously high for the health of the water bodies. To produce one tonne of paper an Indian mill can use as much as 250 cubic meters of water, as opposed to 25 cubic meters in the industrialised world. Water is priced in such a manner that profligacy in its use is encouraged. Mills should think in terms of harvesting rainwater and recycling it. A calculation made by Sinar Mas shows that it can meet 50 per cent of its current water needs through rainwater harvesting.

The green rating project already seems to be having some impact on the industry. The project has helped to take the issue of environmental management to the top management levels of the pulp and paper companies.

CEOs and top managers of 71 per cent of the companies interacted directly with CSE during the project. Senior managers of 43 per cent of the companies visited CSE.

At the outset of GRP only one pulp and paper mill had a formal environment policy, namely JK Corporation, which also has an ISO 14,000 certification. By the time the ratings were finalised 9 companies had an environment policy statement. "Hopefully all these companies will perform better when we rate them again in

about us
down to earth
environmental resources
environment and you
calendar
campaigns

HOME
FEEDBACK
GUIDED TOUR
PUBLICATIONS
SEARCH

Clic here to go

ಅಕ್ರಮ ಮರಕಡಿತ

ಶಿರಸಿಯಿಂದ 42 ಕಿ.ಮೀ ದೂರ ದೇವಿಮನೆ ಘಟ್ಟ ಕಡಿದಾದ ಪ್ರದೇಶದಲ್ಲಿ ಅರಣ್ಯ ಗುತ್ತಿಗೆದಾರರು ಅನಧಿಕೃತವಾಗಿ 300 ಮರಗಳನ್ನು ಕಡಿದಿರುವದನ್ನು ಪರಿಸರ ಸಂರಕ್ಷಣಾ ಕೇಂದ್ರದ ಕಾರ್ಯಕರ್ತರು ಪತ್ತೆ ಹಚ್ಚಿದ್ದಾರೆ. ಈ ಗುತ್ತಿಗೆದಾರರಿಗೆ ಕೇವಲ ಅರಣ್ಯದಲ್ಲಿ ಬಿದ್ದಿರುವ ಉರುವಲನ್ನು ಸಾಗಿಸುವ ಗುತ್ತಿಗೆಯನ್ನು ಕೊಡಲಾಗಿತ್ತು. ಆದರೆ ಇವರು ಹಸಿ ಮರಗಳನ್ನು ಕಡಿದು ಸಾಗಿಸಿರುತ್ತಾರೆ. ಹದಿನೈದು ದಿನಗಳ ಹಿಂದೆ ನಡೆದ ಈ ಕೆಲಸದಲ್ಲಿ ಅರಣ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿವರ್ಗ ಶಾಮೀಲಾಗಿರುವ ಸಂಭವ ಕಂಡು ಬರುತ್ತಿದೆ.

ದೇವಿಮನೆ ಘಟ್ಟದ ಕ್ಷೇತ್ರದಲ್ಲಿ ಅತ್ಯಲ್ಪ ಮರ-ಗಿಡಗಳ ಸಂಖ್ಯೆ ಉಳಿದಿದ್ದು ಈಗ ಬೆಳೆಯುವ ಮರಗಳನ್ನು ಕಡಿದು ಹಾಕಿರುವದು ತುಂಬಲಾರದ ಹಾನಿಯನ್ನುಂಟು ಮಾಡಿದೆ. ಈ ಕ್ಷೇತ್ರದಲ್ಲಿ ಈ ವರ್ಷ ಮಳೆಗಾಲದಲ್ಲಿ ಸಣ್ಣ ಸಸಿಗಳನ್ನು ನೆಟ್ಟಿದ್ದು ಅದರ ಮೇಲೆ ಮರ ಕಡಿದು ಉರುಳಿಸಿರುವರು.

ಈ ಕುರಿತು ಪರಿಸರ ಸಂರಕ್ಷಣಾ ಕೇಂದ್ರವು ಹೊನ್ನಾವರದ ವಿಭಾಗಾಧಿಕಾರಿ ಮತ್ತು ಧಾರವಾಡದ ಕನ್ಸರ್ವೇಟರ ಅವರಿಗೆ ವಿಷಯ ತಿಳಿಸಿ ಕ್ರಮ ಕೈಗೊಳ್ಳುವಂತೆ ಒತ್ತಾಯ ಪಡಿಸಿದೆ.

ಪತ್ರಿಕಾ ಪ್ರಕಟಣೆ : ಶಿರಸಿ
26-11-84

ಪರಿಸರ ಸಂರಕ್ಷಣಾ ಕೇಂದ್ರ

URANIUM EXTRACTION STOPPED

Villagers from Shevkar in Uttar Kannada District, Karnataka stopped Uranium Extraction by peaceful means. On 9th September, 1985 70 people gathered near the site at Arabail Ghat and prevented the extraction activity.

There is strong awareness among villagers against the construction of Nuclear Power Plant at Kaiga, near Karwar. The people of the district have already suffered due to three major hydro-electric dams on Kali River. All these Projects have affected people in Western Ghats. The Uranium extraction is a recent addition to the destructive process.

It is the first time in India that village people have stopped extraction of uranium. There is a strong movement against the proposed nuclear plant at Kaiga near Karwar district headquarter, Karwar.

This movement is supported by various non-governmental organisations from Karnataka. The present movement is against uranium extraction is organised by local youth group in co-operation with Parisara Samrakshana Kendra (Environmental Conservation Center).

For Press Release -

Parisara Sanmrakshana Kendra
SIRSI- 581 401.

ಪ್ರಕಟಣೆಯ ಕೃಪೆಗಾಗಿ

29

ಅಪ್ಪಿಕೋ — ಮೂರನೆಯ ವರ್ಷದಲ್ಲಿ ಪಾದಾರ್ಪಣ

1983 ಸಪ್ಟೆಂಬರ 8 ರಂದು ಉತ್ತರ ಕನ್ನಡದಲ್ಲಿನ ಕಳಾಸ ಅರಣ್ಯ ಪ್ರದೇಶದಲ್ಲಿ ಪ್ರಾರಂಭವಾದ ಅಪ್ಪಿಕೋ ಚಳುವಳಿಯು ಮೂರನೆಯ ವರ್ಷದಲ್ಲಿ ಪಾದಾರ್ಪಣ ಮಾಡಿದೆ. ಈ ಎರಡು ವರ್ಷಗಳಲ್ಲಿ ರಾಜ್ಯದ ಇತರ ಜಿಲ್ಲೆಗಳಾದ ಶಿವಮಾಗ್ಗ, ದಕ್ಷಿಣ ಕನ್ನಡದ ಅರಣ್ಯ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿದೆ. ಪರಿಸರ ಜಾಗೃತಿಯ ಈ ಚಳುವಳಿಯು ಸಾಮಾನ್ಯ ಹಳ್ಳಿಗರ ಪ್ರೇರಣೆಯ ಜೊತೆಗೆ ಮೈಸೂರಿನಂತಹ ಪಟ್ಟಣ ಪ್ರದೇಶದಲ್ಲಿನ ಜನರ ಹೃದಯವನ್ನು ತಲುಪಿದೆ. ಮೈಸೂರಿನಲ್ಲಿನ ರೈಲು ನಿಲ್ದಾಣದಲ್ಲಿ ಉಪಹಾರ ಗೃಹವನ್ನು ನಿರ್ಮಿಸಲು ಹಳೆಯ ವೃಕ್ಷವನ್ನು ಕಡಿಯುವ ಕೆಲಸವನ್ನು ಜಾಗೃತರಾದ ಜನರು ಸಂಘಟಿತರಾಗಿ ಅಪ್ಪಿಕೋ ಡಳವಳಿ ಮೂಲಕ ನಿಲ್ಲಿಸಿದರು. ರಾಜ್ಯದ ಎಲ್ಲೆಡೆಗೆ ಪರಿಸರ ಜಾಗೃತಿಯನ್ನು ಉಂಟು ಮಾಡುವದರಲ್ಲಿ ಸಫಲವಾಗಿದೆ.

ಮಲೆನಾಡಿನ ಅರಣ್ಯವನ್ನು ಉಳಿಸುವದರ ಜೊತೆಗೆ ರಚನಾತ್ಮಕವಾದ ಕಾರ್ಯ ಕ್ರಮವನ್ನು ಹಮ್ಮಿಕೊಂಡಿರುವ ಅಪ್ಪಿಕೋ ಕಾರ್ಯಕರ್ತರು ಈ ವರ್ಷ 56000 ಸಿಸಿಗಳನ್ನು ನಟ್ಟಿರುತ್ತಾರೆ. ಸಿಸಿಗಳನ್ನು ಹಳ್ಳಿಗರು ಸ್ವತಃ ಶ್ರಮದಾನದಿಂದ ಬೆಳೆಸಿರುವದಲ್ಲದೇ ಅರಣ್ಯ ಇಲಾಖೆಯವರಿಂದ ಸಹ ಸಹಾಯ ಪಡೆಯಲಾಯಿತು.

ಉರುವಲು ಕಟ್ಟಿಗೆಯ ಮಿತವಾದ ಬಳಕೆಯನ್ನು ಪ್ರಚಾರಪಡಿಸಲು ವಿವಿಧ ಸ್ಥಳಗಳಲ್ಲಿ ಹಳ್ಳಿಗರ ಜೊತೆಕೂಡಿ 200 ಹೊಸ ಒಲೆಗಳನ್ನು ಹಾಕಲಾಗಿದೆ. ಈ ಕೆಲಸಗಳ ಜೊತೆಗೆ ಗ್ರಾಮೀಣ ಕ್ಷೇತ್ರದಲ್ಲಿ ಅರಣ್ಯವನ್ನು ಕಾಪಾಡಲು ಜನರು ಜಾಗರೂಕಾರಾಗಿರುವಂತೆ ಪ್ರೇರಿಸಲು "ನಿಸರ್ಗ ಸಂಧಾನ" ಎಂಬ ಯಕ್ಷಗಾವವನ್ನು ರಾಜ್ಯದ ಹಲವಾರು ಕಡೆಗಳಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲಾಯಿತು.

ರಾಜ್ಯದ ಒಟ್ಟೂ 19 ಜಿಲ್ಲೆಗಳಲ್ಲಿ 18 ಜಿಲ್ಲೆಗಳಲ್ಲಿ ಈ ವರ್ಷ ಮಳೆ ಇಲ್ಲದೇ ತೀವ್ರವಾದ ಬರಗಾಲವನ್ನು ಎದಿರುಸುತ್ತಿವೆ. ಪಶ್ಚಿಮ ಘಟ್ಟಗಳಲ್ಲಿನ ಹಸಿರನ್ನು ಕಡಿದು ಬಯಲಾಗಿ ಮಾಡಿದುದರ ನೇರ ಪರಿಣಾಮವನ್ನು ರಾಜ್ಯದ ಜನತೆ ಅನುಭವಿಸಬೇಕಾಗಿದೆ. ಅಪ್ಪಿಕೋ ಘೋಷಣೆಯಾದ "ಮಲೆನಾಡ ಹಸಿರು, ಬಯಲು ಸೀಮೆಯ ಉಸಿರು" ಎಂಬ ಸತ್ಯವನ್ನು ಅರಿತು ಇನ್ನು ಮುಂದೆ ರಾಜ್ಯದ ಅರಣ್ಯ ಸಂಪತ್ತನ್ನು ರಕ್ಷಿಸಲು ನಾವೆಲ್ಲರೂ ಒಂದಾಗಬೇಕಾಗಿದೆ. ಬರಗಾಲವನ್ನು ತಪ್ಪಿಸಬೇಕಾದರೆ ನಾವು ಈ ಹಸಿರನ್ನು ಉಳಿಸುವ, ಬೆಳೆಯಿಸುವ ಕಾರ್ಯವನ್ನು ಯದ್ಧಸ್ಥರದಲ್ಲಿ ಕೈಗೊಳ್ಳಬೇಕು.

9-9-1985.

ಪರಿಸರ ಸಂರಕ್ಷಣಾ ಕೇಂದ್ರ
ಸಿರಸಿ.

ಅನಾಥ ಗಣಿತ ಶಾಂತಿ ಕ್ರಮ

ಅಕ್ಷರ ಜ್ಞಾನ ಹೆಚ್ಚಿಸಲು ಪಠಪೂರ್ವ ಶಾಲೆಗಳಿಸಬ್ಬರುವ ಅನಾಥ ಪುನರ್ವಸತಿ ಅನಿವಾರ್ಯವಾಗಿದೆ. ಅನಾಥರ ಅಸ್ಪಷ್ಟ ಶಿಬಿರಗಳ ಕೆಳಗಡೆ ಪ್ರೌಢಶಾಲೆಗಳ ಪ್ರೇಕ್ಷಾಲಯವಿದೆ. ಈ ಶಿಬಿರಗಳನ್ನು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಕಾರ್ಯಾನೆಂತಹುದನ್ನು ಸಾಧಿಸಿಸುವ ಅನೌಪಚಾರಿಕ ಶಿಕ್ಷಣವನ್ನು ಪಿಲ್ಲೆಗಳಿಗೆ ಶಿಬಿರಾರ್ಥಿ ಎಂದು ವಿವರಿಸಿದ ' ಅನಾಥ ಗಣಿತ ' ಶಾಂತಿ ಕ್ರಮ ಪಡೆಯಿಸಿದೆ.

ಶಿಬಿರಾರ್ಥಿ ಎಂದು ಯಾವ ಅನಾಥರ ಪ್ರೇಕ್ಷಾಸ್ಥಾನದ ಹತ್ತಿರ ಶಿಬಿರವೆಂದು ಪರಿಸರ ಸಂರಕ್ಷಣಾ ಕೇಂದ್ರದ ಜನ ಜಾಗೃತಿ ಶಿಬಿರವನ್ನು ನಿರ್ವಹಿಸಿರುತ್ತಾರೆ. ಸಿಬ್ಬಂದಿ ಶಾಲಾಭಾವ ಸ್ಥಾಪಿತವಾದರೂ ಪ್ರಕೃತಿಯಲ್ಲಿ ಪರಿಪೂರ್ಣವಾದ ಸ್ಥಳ – ಪಠ್ಯಕ್ರಮ ಅನಾಥರಿಗೆ ನಾಳಿನ ಜೀವನಕ್ಕೆ ಅನಾಥರ ಸುತ್ತಮುತ್ತಲಿನ ಪರಿಸರವನ್ನು ಪಾಠಗಳಾಗುವಂತೆ ಜೀವನದ ಪ್ರೇರಣಾಂಶವನ್ನು ಪಾಠಗಳಾಗಿಸಿಕೊಳ್ಳುವುದು ಉಚಿತ. ಈ ಸಮಸ್ಯೆಯನ್ನು ಜನರ ಪಾಲ್ಗೊಳ್ಳುವಿಕೆಯಾಗಿಸಿದೆ. ಅನಾಥರನ್ನು ಉದ್ದೇಶದ ಸಲುವಾಗಿ ಸತಿ ಸಂಗ್ರಹಣೆ ಪಡೆ ಪಡೆಯಿಸಿದೆ. ಈ ಜನಜಾಗೃತಿ ಶಿಬಿರಕ್ಕೆ ತಮ್ಮೂರಿನ ಪಾಲಿನ ಜನರು ಫೀಜಿ ಇತ್ಯಾ ತೆರೆಸಿ ಬೇಕು ಪಕ್ಕ ಮಾಡಿಕೊಂಡರು.

ಅನಾಥರ ಸಾಗರಿಕರೂ, ಪಠಪೂರ್ವರು ಕಲ್ಯಾಣ್ಯ ಗ್ರಾಮದ ಅನಿವಾರ್ಯರೂ ಮತ್ತು ಪರಿಸರ ಸಂರಕ್ಷಣಾ ಕೇಂದ್ರದ ಶಾಂತಿ ಕಳೆದರು ಅನಾಥ ಗಣಿತದ ಜನಜಾಗೃತಿ ಶಾಂತಿ ಕ್ರಮವನ್ನು ಪ್ರಯೋಗಾತ್ಮಕವಾಗಿ ಪಡೆಯಿಸಿ ಕೊಳ್ಳಬಹುದು.

ಪತ್ರಿಕಾ ಪ್ರಕಟಣೆ,

ದಿನಾಂಕ: 20–2–85.

ಪರಿಸರ ಸಂರಕ್ಷಣಾ ಕೇಂದ್ರ,
ಶಿ ಪ ಸಿ.

ಕೂಡಗು ಜಿಲ್ಲೆಯ ಅರಣ್ಯ ನಾಶ

ಉತ್ತರ ಕೂಡಗಿನಲ್ಲಿ, ಕೇರಳದ ಗಡಿಯಲ್ಲಿರುವ ಕರಿಕ್ಕೆಯ ಹತ್ತಿರ ದೂಂಗನಮಟ್ಟಿ ಮತ್ತು ಬಾಚಿನಾಡೆ ಅರಣ್ಯದಲ್ಲಿ ೧೫ ಕಿ.ಮಿ. ಕಾಲುನಡಿಗೆಯಲ್ಲಿ ಸುತ್ತಾಡಿದೆವು. ಈ ದಟ್ಟವಾದ ಅರಣ್ಯದ ಮಧ್ಯೆ ಎಲ್ಲಿ ನೋಡಿದರೂ ವಾಹನದ ರಸ್ತೆಗಳ ನಿರ್ಮಾಣವಾಗಿ, ಬಹಳ ಮರಗಳ ನಾಶವಾಗಿದೆ.

ಬಾಚಿನಾಡೆ ಅರಣ್ಯದಲ್ಲಿ ಕೆನರಾ ಪ್ಲೈಯವುಡ ಕಂಪನಿಯ ಆರು ಜನ ಕೆಲಸಗಾರರು, ಬಂದು ಮೀಟರ ಸುತ್ತಳತೆಯ ಮರಗಳನ್ನು ಕಡಿಯುವ ಸಲುವಾಗಿ ಗುರುತು ಹಾಕುತ್ತಿದ್ದರು. ಈ ಕೆಲಸಗಾರರು ಗುರುತಿಸಿದ ಮರಗಳನ್ನು ಕಡಿಯುವ ಅನುಮತಿ ಅರಣ್ಯ ಅಧಿಕಾರಿಗಳು ನೀಡುತ್ತಾರೆಂದು ಅವರು ತಿಳಿಸಿದರು. ಈ ಕೆಲಸಗಾರರ ಜೊತೆಯಲ್ಲಿ ಅರಣ್ಯ ಇಲಾಖೆಯ ಸಿಬ್ಬಂಧಿಗಳು ಇರಲಿಲ್ಲ. ಪ್ಲೈಯವುಡ ಕಂಪನಿಯ ಕೆಲಸಗಾರರಿಗೆ ಮರ ಗುರುತಿಸಲು ಕೂಟ್ಟಿರುವ ಜವಾಬ್ದಾರಿ, ಬಬ್ಬ ಕಡುಕನಿಗೆ ಕುರಿಗಳನ್ನು ಆರಿಸುವ ಅಧಿಕಾರ ಕೂಟ್ಟ ಹಾಗಿದೆ!

ಈ ಅರಣ್ಯದಲ್ಲಿ ಬಂದೆಡೆಗೆ ಅರ್ಧ ಕಿ.ಮಿ. ಕ್ಷೇತ್ರದ ಭೂಸ್ಕಲನವಾದ ದೃಶ್ಯವನ್ನು ನೋಡಿದೆವು. ಈ ಭೂಸ್ಕಲನ ಕಡಿದಾಗಿರುವ ಪ್ರದೇಶದಲ್ಲಿ ಮರ ಕಡಿದುದ್ದರಿಂದ ಉಂಟಾಗಿರುವದು ಸ್ಪಷ್ಟವಾಗಿತ್ತು. ಹಲವಾರು ಕ್ಷೇತ್ರದಲ್ಲಿ ಮರದ ದಿಮ್ಮೆಗಳನ್ನು ಭೂಮಿಯ ಮೇಲೆ ಎಳೆದಿರುವದರಿಂದ ಸಸ್ಯಗಳು ನಾಶವಾಗಿ, ಭೂಮಿ ಬರಡಾಗಿತ್ತು. ದಿಮ್ಮೆಗಳನ್ನು ಎಳೆಯಲು ಆನೆಯನ್ನು ಉಪಯೋಗಿಸುತ್ತಾರೆ.

ದಕ್ಷಿಣ ಕೂಡಗಿನಲ್ಲಿ ಕೇರಳದ ಗಡಿಗೆ ಹತ್ತಿರದ ಉಡುಂಬೆ ಅರಣ್ಯದಲ್ಲಿ ಮೂರು ಥಂಟೆ ಸುತ್ತಾಡಿದೆವು. ಈ ಅರಣ್ಯದಲ್ಲಿ ಹಿಂದಿನ ವರ್ಷ ಮರ ಕಡಿಯಲಾಗಿದೆ. ಬಂದೆಡೆಯಲ್ಲಿ, ಎಪ್ಪತ್ತು square metere ಕ್ಷೇತ್ರದಲ್ಲಿ ಎರಡು ಮರಗಳನ್ನು ಕಡಿಯಲು ಗುರುತಿಸಲಾಗಿದ್ದು (ಸಂಖ್ಯೆ 342, ಮತ್ತು 151), ಆ ಕ್ಷೇತ್ರದಲ್ಲಿ ಮೂರು ಗುರುತಿಸ್ಲಿದ ಮರಗಳನ್ನು ಸಹ ಕಡಿಯಲಾಗಿತ್ತು, ಇವುಗಳ ಕ್ಷತಿಗ್ರಸ್ತವಾಗಿದ್ದರಿಂದ ಕಡಿಯಲಾಯಿತು (ಸಂಖ್ಯೆ F.D. 155, 151 ಮತ್ತು 757). ಈ ಸಣ್ಣ ಕ್ಷೇತ್ರದಲ್ಲಿ ದೂಡ್ಡದಾಗಿರುವ ಐದು ಮರಗಳಲ್ಲದೆ, ಹಲವಾರು ಚಿಕ್ಕ ಗಿಡಗಳೂ ನಾಶವಾಗಿವೆ. ಅರಣ್ಯದ ಮಧ್ಯೆ ಗಿಡದ ಕವಚ (canopy) ಬಿಲ್ಲದೇ, ಮಣ್ಣ ಸೂರ್ಯನ ಬಿಸಿಯಿಂದ ಪ್ರಭಾವಿತವಾಗಿವೆ. ಇದರಿಂದಾಗಿ ಮಣ್ಣ ಸತ್ಪಹೀನವಾಗಿ, ಸದಾಹಸಿರು ಕಾಡಿನ ವ್ಯಕ್ತಿತ್ವವೆ ಬದಲಾಗಿದೆ. ಉಷ್ಣವಲಯದ ಈ ಸದಾಹಸಿರು ಕಾಡಿನ ವ್ಯವಸ್ಥೆ ಬಹಳ ಸೂಕ್ಷ್ಮವಾದದ್ದು, ಬಮ್ಮೆ ನಾಶವಾದರೆ ಪರಿಪಡಿಸಲು ಶತಮಾನಗಳೇ ಬೇಕಾದೀತು. ಇದನ್ನು ಅಲಕ್ಷಿಸಿ, ಉಡುಂಬೆ ಅರಣ್ಯದಲ್ಲಿ ಮರ ಕಡಿಯಲು, ಮರಕ್ಕೆ ಗುರುತು ಹಾಕುವ ಕೆಲಸ ಸಾಗಿದೆ.

ಇಮ್ಮೆ ಮರ ಕಡಿತದಿಂದ ಅರಣ್ಯದಲ್ಲಿ ರಸ್ತೆಗಳ ನಿರ್ಮಾಣವಾದಾಗ ಕೇರಳದಿಂದ ಅತಕ್ರಮಣ ಮಾಡುವವರು ಬಂದು ಅರಣ್ಯ ಕ್ಷೇತ್ರದಲ್ಲಿ ರಬ್ಬರ, ಮತ್ತುತರ ತೋಟಗಳನ್ನು ನ್ಯಾಪಿಸುವದನ್ನು ನಾವು ನೋಡಿದೆವು. ಬೆಳ್ಳಿ ಎಂಬ ಮಲೆಕುಡಿಯ, ಅರಣ್ಯದ ಮೂಲ ನಿವಾಸಿ "ಅರಣ್ಯ ನಾಶವಾದರೆ ನಾವು ಹೇಗೆ ಬದುಕಲಾದೀತು?" ಎಂದು ಕೇಳಿದ.

ಕೂಡಗಿನ ಸ್ವಸರ್ಗಿಕ ಅರಣ್ಯ ಅಲ್ಲಿಯ ಪರಿಸರ ಸಮತೋಲನವನ್ನು ಕಾಪಾಡಿಕೊಂಡು ಕಾಧಗೆ ಆಧಾರವಾಗಿದೆ. ಈ ಕೂಡಗಿನ ಅರಣ್ಯದಿಂದ ದಕ್ಷಿಣ ಭಾರತದ ಜೀವನಕ್ಕೆ ನೀರನ್ನು ಕೊಡುವ ಕಾವೇರಿಯ ಜನ್ಮವಾಗುತ್ತದೆ. ಇಲ್ಲಿಯ ಗುಡ್ಡದ, ಕಟ್ಟದ ಅರಣ್ಯನಾಶವಾದರೆ, ಜಲಾನಯನ ಕ್ಷೇತ್ರ ಬರಡಾಗಿ ಕಾವೇರಿ ಮತ್ತುತರ ನದಿಗಳು ಬರಡಾಗುವ ಸಂಭವ ಹೆಚ್ಚಾಗುತ್ತದೆ. ಪ್ರಶ್ನೆ ಕಟ್ಟದ ಈ ಅರಣ್ಯನಾಶವನ್ನು ನಿಲ್ಲಿಸುವದು ಅವಶ್ಯವಾಗಿದೆ.

ಸುಂದರಲಾಲ ಬಹುಗುಣ [signature] -
ಪಾಂಡುರಂಗ ಹೆಗಡೆ.

ಜನವರಿ ೪, ೧೯೮೭.